ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 03
ಜನವರಿ 20, 2013

ಪುಟ 16 ರೂ. 10/-





ಕೇಂದ್ರೀಯ ವಿಶ್ವವಿದ್ಯಾಲಯ ಹಿಂದಡಿ ಬೇಡ



ಪಶ್ಚಿಮ ಬಂಗಾಳ ಹಿಂಸಾಚಾರ

ಮಮತಾ ಪ್ರಾಯೋಜಿತ ಭಯೋತ್ಪಾದನೆ

ದುಬಾರಿಯಾದ ರೈಲು ಪ್ರಯಾಣ : ಜನಸಾಮಾನ್ಯರ ಮೇಲೆ ಅಸಮರ್ಥನೀಯ ಹೊರೆ






ಮಡೆಸ್ನಾನ, ಪಂಕ್ತಿಭೇಧ 'ಪೇಜಾವರ'ರ ಅಸಂಬದ್ಧ ಪ್ರಲಾಪ

ಗುಲ್ಬರ್ಗಾ ಅತ್ಯಾಚಾರ ಪ್ರಕರಣಗಳು ಚಿತಾವಣೆಗಳಿಗೆ ಪ್ರತಿಭಟನೆ

ಹಾಸನ : ಮಹಿಳೆಯರಿಗೆ ಇಲ್ಲವಾಗಿದೆ ರಕ್ಷಣೆ

ಆರೋಗ್ಯ ವಿಮೆ : ಜನತೆ ತಿಳಿದಿರಲೇ ಬೇಕಾದ ಮಾಹಿತಿಗಳು

ಯಾವುದೇ ಒಬ್ಬ ವ್ಯಕ್ತಿ ಅನಾರೋಗ್ಯಪೀಡಿತನಾದಾಗ, ಅಥವಾ ಅಪಘಾತವಾದಾಗ, ವೈದ್ಯಕೀಯ ಚಿಕಿತ್ಸೆ ಅಗತ್ಯವಾಗುತ್ತದೆ. ಚಿಕಿತ್ಸೆ ಎಂದಾಗ ಹಲವಾರು ಬಾರಿ ಅದರಲ್ಲಿ ಹಲವು ಬಗೆಯ ಪರೀಕ್ಷೆಗಳು, ಮತ್ತು ಶಸ್ತ್ರ ಚಿಕಿತ್ಸೆಯ ಅಗತ್ಯತೆ ಕೂಡ ಬರುತ್ತದೆ. ಸರ್ಕಾರಿ ಆಸ್ಪತ್ರೆಗಳ ಸೌಲಭ್ಯ ಎಲ್ಲ ಕಡೆಯೂ ದೊರಕುವುದಿಲ್ಲ ಮತ್ತು ಎಲ್ಲರಿಗೂ ದೊರಕುವುದಿಲ್ಲ. ಹೀಗಾಗಿ ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗುವುದು ಅನಿವಾರ್ಯವಾಗುತ್ತದೆ. ಖಾಸಗಿ ಆಸ್ಪತ್ರೆಯ ವೆಚ್ಚಗಳನ್ನು ಭರಿಸಲು ಮಧ್ಯಮ ವರ್ಗದ ವ್ಯಕ್ತಿಗೆ ಸಹ ಕಷ್ಟ ಎಂಬ ಪರಿಸ್ಥಿತಿ ಇದೆ. ಇನ್ನು ಈ ವಿಷಯದಲ್ಲಿ ಬಡವರ ಪಾಡನ್ನು ಕೇಳುವುದೇ ಬೇಡ. ಸರ್ಕಾರಿ ಆಸ್ಪತ್ರೆಗೆ ಹೋದರೂ ಕೂಡ ಬಡವರೂ ಸಾಕಷ್ಟು ಖರ್ಚು ಮಾಡಬೇಕಾದ ಪರಿಸ್ಥಿತಿ ಇರುತ್ತದೆ. ಎಲ್ಲವೂ ಉಚಿತವಾಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಆರೋಗ್ಯ ವಿಮೆ ಇಂತಹವರ ಸಹಾಯಕ್ಕೆ ಬರುವುದು ಸಾಧ್ಯವಿದೆ. ಮತ್ತು ಬರಬೇಕು. ಅಪಘಾತಗಳು ಮಾತ್ರವಲ್ಲ, ಜನರನ್ನು ಸಾಮಾನ್ಯವಾಗಿ ಬಾಧಿಸುವ ಹಲವು ದೀರ್ಘಕಾಲೀನವಾದ ಆರೋಗ್ಯ ಸಮಸ್ಯೆಗಳಾದ ಸಕ್ಕರೆ ಖಾಯಿಲೆ, ರಕ್ತದೊತ್ತಡ, ಆಸ್ತಮಾ, ಹೃದಯ ರೋಗ, ಮೂತ್ರಪಿಂಡದ ಖಾಯಿಲೆಗಳು ಹಾಗೂ ವೈಫಲ್ಯಗಳು, ಮಾನಸಿಕ ರೋಗಗಳಿಗೆ ಜನಸಾಮಾನ್ಯರು ಸಾಕಷ್ಟು ವೆಚ್ಚ ಮಾಡಬೇಕಾದ ಸಂದರ್ಭಗಳು ಬರುತ್ತವೆ. ಈ ಖಾಯಿಲೆಗಳ ಚಿಕಿತ್ಸೆಗೆ ವಿಮೆ ಸೌಲಭ್ಯ ಅಗತ್ಯವಾಗುತ್ತದೆ.



ಭೀಕರ ಅಪಘಾತ, ಕ್ಯಾನ್ಸರ್ ಖಾಯಿಲೆ, ಪಾರ್ಶ್ವವಾಯು ಮುಂತಾದವುಗಳು ಧೀರ್ಘಕಾಲದ ಅಪಾಯಕರ ಪರಿಣಾಮವನ್ನು ಬೀರುವಂತಹವು ಹಾಗೂ ಅನೇಕ ಬಾರಿಕೂಡಲೇ ಪ್ರಾಣ ತೆಗೆದುಕೊಳ್ಳುವಂತಹವು. ಇಂತಹ ರೋಗಗಳನ್ನು ಎದುರಿಸಲು ವಿಮಾ ಪರಿಹಾರದ ಹಣದಿಂದ ಸಹಾಯವಾಗುತ್ತದೆ ಎಂಬ ನಂಬಿಕೆಯಿಂದ ವಿಮಾ ಪಾಲಿಸಿಯನ್ನು ಪಡೆಯಲು ಜನರು ಮುಂದಾಗುತ್ತಾರೆ. ಆರೋಗ್ಯ ವಿಮೆ ಸರಿಯಾದ ನೀತಿ ಹೊಂದಿದ್ದರೆ ಒಳ್ಳೆಯದೇ ಆಗುತ್ತದೆ. ಆದರೆ ಇಂದಿನ ಆರೋಗ್ಯ ವಿಮೆಗಳು ನಿಜವಾಗಿ ಬೇಕಾದ ಪರಿಹಾರ ನೀಡಬಲ್ಲವೇ ? ಎಂಬ ಪ್ರಶ್ನೆ ಬಹಳ ಮುಖ್ಯ. ಅವು ಪರಿಹಾರ ನೀಡಬಲ್ಲವು ಎಂದಾದರೆ ಅವು ನೀಡುವ ಪರಿಹಾರದ ಇತಿಮಿತಿಗಳನ್ನು ಸಹ ಅರಿಯುವುದು ಅಗತ್ಯ.

ಜೀವ ವಿಮೆ ಬಗ್ಗೆ ಕೆಲವು ಜನರಲ್ಲಿ ಒಂದಷ್ಟು ತಿಳುವಳಿಕೆ ಇದೆ. ಆದರೆ ಆರೋಗ್ಯ ವಿಮೆ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ.

ಇಂದಿನ ಆರೋಗ್ಯ ವಿಮೆಗಳು ನಿಜವಾಗಿ ಬೇಕಾದ ಪರಿಹಾರ ನೀಡಬಲ್ಲವೇ ? ಎಂಬ ಪ್ರಶ್ನೆ ಬಹಳ ಮುಖ್ಯ. ಅವು ಪರಿಹಾರ ನೀಡಬಲ್ಲವು ಎಂದಾದರೆ ಅವು ನೀಡುವ ಪರಿಹಾರದ ಇತಿಮಿತಿಗಳನ್ನು ಸಹ ಅರಿಯುವುದು ಅಗತ್ಯ.

ಇಲ್ಲಿ ಕೆಲವು ಅಗತ್ಯ ಮಾಹಿತಿಯನ್ನು ನೀಡಲು ಪ್ರಯತ್ನಿಸಲಾಗಿದೆ.



ಇತ್ತೀಚೆಗೆ ವಿಮಾ ಸಂಸ್ಥೆಗಳಿಗೆ ಅನೇಕ ಸೌಲಭ್ಯಗಳನ್ನು ಕೊಡಲಾಗುತ್ತಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ(ಎಫ್‌ಡಿಐ) ಮಿತಿಯನ್ನು 26% ನಂದ 49% ಕ್ಕೆ ಏರಿಸಲಾಗಿದೆ. ಈಗಾಗಲೇ ಭಾರತದಲ್ಲಿಯೂ ಖಾಸಗಿ ವಿಮಾ ಕಂಪನಿಗಳು ಕೆಲಸ ಮಾಡುತ್ತಿವೆ. ಅನೇಕ ಕಂಪನಿಗಳು ಸರಕಾರದಿಂದ ಕಂತನ್ನು ಕಟ್ಟುವ ವ್ಯವಸ್ಥೆ ಮಾಡಿಕೊಂಡಿವೆ.

ಮಿತಿಗಳು

· ವಿಮಾ ಕಂಪನಿಗಳು ಈಗ ನೀಡುತ್ತಿರುವ ವಿಮಾ ಪಾಲಿಸಿ ಕೇವಲ ಶೇ. 2 ರಷ್ಟು ಸಮಸ್ಯೆಗಳಿಗೆ ಮಾತ್ರ ಪರಿಹಾರ ನೀಡುತ್ತವೆ. ಉದಾಹರಣೆಗೆ ಅಪಘಾತಗಳು, ಮತ್ತು ಕೆಲವು ಶಸ್ತ್ರ ಚಿಕಿತ್ಸೆಗಳು, ಈಗಿರುವ ವಿಮಾ ಯೋಜನೆಗಳನ್ನು ನೋಡಿದರೆ ಅವನ್ನು ಕಂಪನಿಗಳು ತಮ್ಮ ಲಾಭಕ್ಕೆ ಮಾಡಿಕೊಂಡಿವೆ ಎಂಬುದು ಕಂಡು ಬರುತ್ತದೆ. ಹಲವಾರು ಆಧ್ಯಯನಗಳಿಂದ ಈ ಅಂಶ ದೃಢ ಪಟ್ಟಿದೆ.

ಹಾಗಾದರೆ ವಿಮಾ ಯೋಜನೆ ಹೇಗಿರಬೇಕು?

ಎಲ್ಲರಿಗೂ ಆರೋಗ್ಯ ವಿಮೆಯ ಅಗತ್ಯತೆ ಇದೆ. ಸರಕಾರ ಅದಕ್ಕೆ ವಿಶೇಷ ಹಣಕಾಸಿನ ವ್ಯವಸ್ಥೆ ಮಾಡಬೇಕು.

ಅಪಘಾತ ಮತ್ತು ಶಸ್ತ್ರ ಚಿಕಿತ್ಸೆಗಳಿಗೆ ವಿಮೆ ಇರಬೇಕು. ದೀರ್ಘ ಕಾಲದ ಸಮಸ್ಯೆಗಳಿಗೆ ಪರಿಹಾರ ನೀಡಬೇಕು. ಅಂಗವಿಕಲರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು.

ಆರೋಗ್ಯ ವಿಮೆಯ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಅಥವಾ ಕಂತು ಕಟ್ಟುವ ವ್ಯಕಿಗೆ ಕಟ್ಟಲು ಸಾಧ್ಯವಾಗುವ ಮಟ್ಟದ ಕಡಿಮೆ ಮೊತ್ತದ ಕಂತನ್ನು ನಿಗದಿಗೊಳಿಸಬೇಕು. ಖಾಸಗಿ ವಿಮಾ ಕಂಪನಿಗಳು ತೆಗೆದುಕೊಳ್ಳುವ ಕಂತು ಹೆಚ್ಚಿನ ಜನರಿಗೆ ಭಾರವೆನಿಸುತ್ತದೆ. ಆರೋಗ್ಯ ವಿಮೆಯ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳಿಂದ ಜನರು ಎಷ್ಟು ನಿರೀಕ್ಷೆಗಳನ್ನು ಇಟ್ಟುಕೊಳ್ಳಬಹುದು ಎಂಬುದು ಚರ್ಚಾರ್ಹವಾದ ವಿಷಯವಾಗುತ್ತದೆ. ಏಕೆಂದರೆ ಖಾಸಗಿ ಕಂಪನಿಗಳಿಗೆ ಆರೋಗ್ಯ ವಿಮೆ ಎಂಬುದು ಒಂದು ಲಾಭದ ಸಾಧನವಾಗಿರುತ್ತದೆ. ಆದರೂ ವಿಮಾ ಯೋಜನೆಯನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ಖಾಸಗಿ ಆಸ್ಪತ್ರೆಗಳಿಗೆ ನೀಡಬಹುದಾಗಿದೆ.

ಆರೋಗ್ಯ ವಿಮೆಯಲ್ಲಿ ಹಿಂದೆ ಹಲವಾರು ತಕರಾರುಗಳು ಬಂದಿವೆ. ಉದಾಹರಣೆಗೆ ವಿಮೆ ತೆಗೆದುಕೊಂಡ ವ್ಯಕ್ತಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೂ ಆ ಕಂಪನಿ ಆ ವ್ಯಕ್ತಿಗೆ ಪರಿಹಾರದ ಹಣ ನೀಡದಿರುವುದು. ಇಂತಹ ಸಮಸ್ಯೆಯನ್ನು 'ಇನ್ ಸ್ಯೂರೆನ್ಸ್ ರೆಗ್ಯೂಲೇಟರಿ ಆಥಾರಿಟಿ'ಯು ಬಗೆ ಹರಿಸಲು ಶಕ್ತವಾಗಬೇಕು.

ಆಂಧ್ರ ಪ್ರದೇಶ ಅನುಭವ

2007ರಲ್ಲಿ ಆಂಧ್ರ ಪ್ರದೇಶದ ಸರಕಾರ ಜನರಿಗೆ ಆಸ್ಪತ್ರೆ ವೆಚ್ಚದಿಂದ ರಕ್ಷಣೆ ನೀಡಲು "ರಾಜೀವ್ ಆರೋಗ್ಯ ಶ್ರೀ" ಎಂಬ ವಿಮಾ ಯೋಜನೆಯನ್ನು ಜಾರಿಗೊಳಿಸಿತು. 2009ರಲ್ಲಿ ಕಾಂಗ್ರೆಸ್‌ಪಕ್ಷ ಆಂಧ್ರಪ್ರದೇಶದಲ್ಲಿ ಚುನಾವಣೆಯಲ್ಲಿ ಜಯಗಳಿಸುವಲ್ಲಿ ಈ ವಿಮಾ ನೀತಿ ಸಹಕಾರಿಯಾಗಿ ಪರಿಣಾಮ ಬೀರಿತು! ಅಂದರೆ ಈ ವಿಮಾಯೋಜನೆಯಿಂದ ಜನರಿಗೆ ಪ್ರಯೋಜನವಾಗಿರಬೇಕು. ಈ ವಿಮಾಯೋಜನೆ ಆಧರಿಸಿ ಕೇಂದ್ರ ಸರಕಾರ 2009ರಲ್ಲಿ ರಾಷ್ಟ್ರೀಯ ಸ್ವಾಸ್ಥ ಭಿಮಾಯೋಜನೆ(ಆರ್‌ಎಸ್‌ಬಿವೈ)ಯನ್ನ ಜಾರಿಗೊಳಿಸಿತು. ಕೇಂದ್ರದಲ್ಲಿ ಆಡಳಿತದಲ್ಲಿರುವ ಯುಪಿಎ–2 ಸರ್ಕಾರದಲ್ಲಿ ಯಾವುದೇ ಕಾರ್ಯಕ್ರಮಗಳಿಲ್ಲದ ಕಾರಣದಿಂದ ಕಾಂಗ್ರೆಸ್ ಪಕ್ಷ ಆರ್‌ಎಸ್‌ಬಿವೈ ಯೋಜನೆಯನ್ನು ಜಾರಿಗೆ ತರಲು ಪ್ರಯತ್ನಿಸಿತು. ಅದಲ್ಲದೇ ಕಾಂಗ್ರೆಸ್ ಕೇರಳ, ತಮಿಳುನಾಡು, ದೆಹಲಿ (ಆಪ್ ಕಾ ವಿಮಾ ಸ್ವಾಸ್ಥ ಯೋಜನೆ) ಕರ್ನಾಟಕ ಹಾಗೂ ಮಹಾರಾಷ್ಟ್ರ (ರಾಜೀವ್ ಗಾಂಧಿ ಜೀವನದಾಯಿ ಆರೋಗ್ಯ ಯೋಜನೆ) ದಲ್ಲಿಯೂ ಈ ವಿಮಾಯೋಜನೆಯನ್ನು ಜಾರಿಗೆ ತರಲು ತಿರ್ಮಾನಿಸಿದೆ.

ಈ ಬೆಳವಣಿಗೆಯಿಂದಾಗಿ ಈ ವಿಮಾ ಯೋಜನೆಗಳ ವ್ಯಾಪ್ತಿ 2010ರ ಕೊನೆಯಲ್ಲಿ ಗಣನೀಯವಾಗಿದೆ. ಅಂದರೆ ದೇಶದ 247 ದಶಲಕ್ಷ ಜನರಿಗೆ (ಜನಸಂಖ್ಯೆಯ 25%) ಇದು ತಲುಪುತ್ತಿದೆ. 2007 ಕ್ಕಿಂತ ಮುಂಚಿತವಾಗಿ ಭಾರತದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಕೇವಲ ಎರಡು ವಿಮಾ ಯೋಜನೆಗಳಿದ್ದವು. "ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್ ಸ್ಕೀಮ್ (ಇಎಸ್‌ಐಎಸ್). ಇದನ್ನು 1952ರಲ್ಲಿ ಜಾರಿಗೆ ತರಲಾಗಿತ್ತು. ಇದು ಕಾರ್ಮಿಕರಿಗೆ (7% ಮಾತ್ರ) ದೊರೆಯುವ ಸೌಲಭ್ಯ.

2. ಸೆಂಟ್ರಲ್ ಗೌರ್ನಮೆಂಟ್ ಹೆಲ್ತ್ ಸ್ಕೀಮ್ (ಸಿಜಿಹೆಚ್‌ಎಸ್) ಇದನ್ನು 1954ರಲ್ಲಿ ಜಾರಿಗೆ ತರಲಾಗಿತ್ತು. ಇದರ ಸೌಲಭ್ಯ ಸರಕಾರಿ ನೌಕರರಿಗೆ ಮಾತ್ರ ದೊರೆಯುತ್ತದೆ.

ಈ ಯೋಜನೆಗಳಲ್ಲಿ ಕಾರ್ಮಿಕರು ಹಾಗೂ ಮಾಲಿಕರು ಹಣ ಹೂಡುತ್ತಾರೆ.

ಜನ ಸಾಮಾನ್ಯರಿಗೆ ಸ್ವಲ್ಪ ಮಟ್ಟಿ ಪ್ರಯೋಜನವಾಗುವ ವಿಮಾ ಯೋಜನೆಗಳು ಈಗ ಲಭ್ಯ. ಆದರೆ ಅವು ಖಾಸಗಿ ವಿಮಾ ಕಂಪನಿಗಳು. ಅವುಗಳಿಗೆ ವ್ಯಕ್ತಿ ತನ್ನ ಹಣವನ್ನು ತುಂಬಿ (ಕಂತು) ಪಾಲಿಸಿ ಪಡೆಯಬೇಕು. ನಮ್ಮ ದೇಶದಲ್ಲಿ ಅಸಂಘಟಿತ ಕ್ಷೇತ್ರದಲ್ಲಿರುವವರು ಈ ಖಾಸಗಿ ವಿಮಾ ಯೋಜನೆಗಳ ಕಂತು ತುಂಬಿ ವಿಮೆ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಮಾ ಯೋಜನೆಯು (ಆರ್‌ಎಸ್‌ಬಿವೈ) ಅಸ್ತಿತ್ವಕ್ಕೆ ತರಲಾಗಿದೆ ಎಂದು ಹೇಳಲಾಗುತ್ತದೆ. ಈ ಯೋಜನೆ ಜನರನ್ನು ಅನಾರೋಗ್ಯದ ಅಪಾಯದಿಂದ ರಕ್ಷಿಸುತ್ತದೆ ಎಂದು ಹೇಳಲಾಗುತ್ತಿದೆ. ಅದು ಎಷ್ಟು ಸತ್ಯ?

ಈ ಯೋಜನೆ ಕೇವಲ ಆಸ್ಪತ್ರೆಯಲ್ಲಿ ನಡೆಸಲಾಗುವ ಕೆಲವು ಪರೀಕ್ಷೆ ಹಾಗೂ ಪಡೆಯುವ ಕೆಲವು ಚಿಕಿತ್ಸೆಗಳಿಗೆ ಮಾತ್ರ ಮೀಸಲಾಗಿದೆ. ಅಂದರೆ ದ್ವಿತೀಯ ಹಾಗೂ ತೃತೀಯ ಆರೋಗ್ಯ ಪಾಲನೆಗೆ. ಒಬ್ಬ ವ್ಯಕ್ತಿಗೆ ದ್ವಿತೀಯ ಹಾಗೂ ತೃತೀಯ ಆರೋಗ್ಯ ಸೇವೆಗಳು ನೂರಕ್ಕೆ ಶೇ. 2 ರಿಂದ ಶೇ. 8 ಸನ್ನಿವೇಶಗಳಲ್ಲಿ ಮಾತ್ರ ಅಗತ್ಯ. 90% ಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಪ್ರಾಥಮಿಕ ಆರೋಗ್ಯ ಪಾಲನೆಯೇ ಅಗತ್ಯ ಚಿಕಿತ್ಸಾ ಪದ್ಧತಿ. ಅಂದರೆ ಕೆಮ್ಮು, ಜ್ವರ, ಟೈಫಾಯಿಡ್, ಜಾಂಡೀಸ್

ಪುಟ 12 ಕ್ಕೆ



ಸಂಪಾದಕೀಯ

ರೈಲು ಪ್ರಯಾಣ ದುಬಾರಿ ಜನಸಾಮಾನ್ಯನ ಮೇಲೆ ಅಸಮರ್ಥನೀಯ ಹೊರೆ

ಅಗತ್ಯ ವಸ್ತುಗಳ ತೀವ್ರ ಬೆಲೆಏರಿಕೆಯಿಂದ ಕಂಗೆಟ್ಟಿರುವ ಜನಸಾಮಾನ್ಯರ ಮೇಲೆ ಕೇಂದ್ರ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ರೈಲು ಪ್ರಯಾಣ ದರ ಹೆಚ್ಚಳದ ಹೊರೆ ಹೇರಲು ಮುಂದಾಗಿರುವುದು ಖಂಡನೀಯವಾಗಿದೆ. ಜನವರಿ 21ರ ಮಧ್ಯರಾತ್ರಿಯಿಂದ ಜಾರಿಗೆ ಬರಲಿರುವ ಎಲ್ಲ ದರ್ಜೆಯ ಪ್ರಯಾಣ ದರ ಏರಿಕೆಯಿಂದ ರೈಲ್ವೆ ಇಲಾಖೆಯ ವಾರ್ಷಿಕ ಆದಾಯದಲ್ಲಿ 6,600 ಕೋಟಿ ರೂ. ಹೆಚ್ಚಳವಾಗಲಿದೆ. ಸರ್ಕಾರದ ಆದಾಯವೇನೋ ಹೆಚ್ಚಾಗುತ್ತದೆ. ಆದರೆ ಅದೇ ಪ್ರಮಾಣದಲ್ಲಿ ಜನಸಾಮಾನ್ಯನ ಆದಾಯ ಹೆಚ್ಚಾಗುವುದಿಲ್ಲವಲ್ಲಾ!


ಹವಾನಿಯಂತ್ರಿತ ಮೇಲ್ದರ್ಜೆ ಪ್ರಯಾಣದ ದರಗಳನ್ನು ನಿಯಮಿತವಾಗಿ ಹೆಚ್ಚಿಸುವುದು ಮತ್ತು ಆ ಮೂಲಕ ದೊರೆಯುವ ಆದಾಯವನ್ನು ರೈಲ್ವೆ ವ್ಯವಸ್ಥೆಯ ಆಧುನೀಕರಣ ಹಾಗೂ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ವೆಚ್ಚ ಮಾಡಬಹುದು. ಆದರೆ ಸಾಮಾನ್ಯ ದರ್ಜೆ ಪ್ರಯಾಣ ದರಗಳನ್ನು ಹೆಚ್ಚಿಸಿ ಜನಸಾಮಾನ್ಯರ ಮೇಲೆ ಹೊರಲಾಗದ ಹೊರೆಯನ್ನು ಹೇರುವ ಸರ್ಕಾರದ ಕ್ರಮ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ಉದಾಹರಣೆಗೆ ಎಕ್ಸ್‌ಪ್ರೆಸ್ ಸಾಮಾನ್ಯ ದರ್ಜೆಯ ಪ್ರಯಾಣ ದರಗಳಲ್ಲಿ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ರೂ.11, ಹುಬ್ಬಳ್ಳಿಗೆ ರೂ.19, ಮಂಗಳೂರಿಗೆ ರೂ.20, ಗುಲ್ಬರ್ಗಾಕ್ಕೆ ರೂ.23, ಬೆಳಗಾವಿಗೆ ರೂ.25 ರಂತೆ ಹೆಚ್ಚಳವಾಗಲಿದೆ. ಎಕ್ಸ್‌ಪ್ರೆಸ್ ಸ್ಲಿಪರ್ ದರಗಳಲ್ಲಿ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ರೂ.17, ಹುಬ್ಬಳ್ಳಿಗೆ ರೂ.28, ಮಂಗಳೂರಿಗೆ ರೂ.30, ಗುಲ್ಬರ್ಗಾಕ್ಕೆ ರೂ.32, ಬೆಳಗಾವಿಗೆ ರೂ.36, ರಂತೆ ಹೆಚ್ಚಳವಾಗಲಿದೆ. ಬಸ್ ಪ್ರಯಾಣ ದರಗಳಿಗೆ ಹೋಲಿಸಿದರೆ ಈಗಲೂ ರೈಲು ಪ್ರಯಾಣ ಅಗ್ಗವೇ ಆಗಿರಬಹುದು. ಆದ್ದರಿಂದಲೇ ಜನಸಾಮಾನ್ಯರು ರೈಲು ಪ್ರಯಾಣವನ್ನೇ ಆಯ್ಕೆ ಮಾಡುತ್ತಾರೆ. ಜನಸಾಮಾನ್ಯರಿಗೂ ಹೊರೆಯಾಗುವ ಪ್ರಮಾಣದಲ್ಲಿ ಸರ್ಕಾರ ರೈಲು ಪ್ರಯಾಣ ದರ ಹೆಚ್ಚಳಕ್ಕೆ ಮುಂದಾಗಿರುವುದು ಒಪ್ಪಿಕೊಳ್ಳಬಹುದಾದುದಲ್ಲ. ಸರ್ಕಾರ ಇದನ್ನು ಪುನರ್‌ಪರಿಶೀಲಿಸುವುದು ಅತ್ಯಗತ್ಯವಾಗಿದೆ.

ಎರಡನೇಯದಾಗಿ, ರೈಲ್ವೆ ಬಜೆಟ್ ಮಂಡಿಸಲು ಇನ್ನೊಂದು ತಿಂಗಳಷ್ಟೇ ಇರುವಾಗ ಸರ್ಕಾರ ರೈಲು ಪ್ರಯಾಣ ದರ ಹೆಚ್ಚಳದ ನಿರ್ಧಾರ ಪ್ರಕಟಿಸಿರುವುದೂ ಸಹ ಆಕ್ಷೇಪಾರ್ಹವಾಗಿದೆ. ತರಾತುರಿಯ ಈ ಕ್ರಮಕ್ಕೆ ಸರ್ಕಾರ ನೀಡುವ ಯಾವ ಸಮರ್ಥನೆಯೂ ಅಂಗೀಕಾರಕ್ಕೆ ಅರ್ಹವಲ್ಲ. ಸಂಸತ್ತಿನ ಉಭಯ ಸದನಗಳಲ್ಲಿ ದೇಶದ ಜನತೆಯ ಜೀವನದ ಮೇಲೆ ಪರಿಣಾಮ ಬೀರುವ ಇಂತಹ ಕ್ರಮಗಳ ಬಗ್ಗೆ ಒಂದು ಆರೋಗ್ಯಕರವಾದ ಚರ್ಚೆಯನ್ನು ತಡೆಯುವುದೇ ಸರ್ಕಾರದ ಧೋರಣೆ ಇದ್ದಂತೆ ಕಾಣುತ್ತದೆ. ಆಡಳಿತಾತ್ಮಕ ಕ್ರಮಗಳಿಂದ ಜನರ ಮೇಲೆ ಬೆಲೆ ಏರಿಕೆಯ ಹೊರೆಯನ್ನು ಸರ್ಕಾರ ಹೇರುತ್ತಾ ಹೋದರೆ ಜನ ಸಂಸದೀಯ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನೇ ಕಳೆದು ಕೊಳ್ಳುವ ಅಪಾಯವಿದೆ.

ಬಜೆಟ್ ಸಂದರ್ಭದಲ್ಲಿ ಪ್ರಯಾಣ ದರದಲ್ಲಿ ಮತ್ತೆ ಯಾವುದೇ ಏರಿಕೆ ಮಾಡುವುದಿಲ್ಲ ಎಂದು ರೈಲ್ವೆ ಸಚಿವ ಪಿ.ಕೆ. ಬನ್ಸಾಲ್ ಸ್ಪಷ್ಟಪಡಿಸಿದ್ದಾರೆ. ಆದರೆ ಸರಕು ಸಾಗಣೆ ದರದಲ್ಲೂ ಹೆಚ್ಚಳ ಮಾಡಲಾಗುವುದೇ ಎನ್ನುವ ಪ್ರಶ್ನೆಗೆ ಅವರು ಸ್ಪಷ್ಟ ಉತ್ತರ ನೀಡಲಿಲ್ಲ ಎಂದು ವರದಿಯಾಗಿದೆ. ಇದರಿಂದ ಸರಕು ಸಾಗಣೆ ದರದಲ್ಲೂ ಶೀಘ್ರವೇ ಹೆಚ್ಚಳವಾಗುವ ಸಾಧ್ಯತೆ ದಟ್ಟವಾಗಿದೆ. ಇದೂ ಸರ್ಕಾರದ ಅಷ್ಟೇ ಅನಪೇಕ್ಷಣೀಯ ಕ್ರಮವಾಗಿದೆ. ಸರಕು ಸಾಗಣೆಯ ದರ ಹೆಚ್ಚಳವು ಅಗತ್ಯ ವಸ್ತುಗಳ ಇನ್ನೊಂದು ಸುತ್ತಿನ ತೀವ್ರ ಬೆಲೆ ಏರಿಕೆಗೆ ಕಾರಣವಾಗಲಿದ್ದು ಸರ್ಕಾರದ ಈ ಜನವಿರೋಧಿ ನೀತಿಯ ವಿರುದ್ಧ ಬಲವಾದ ಪ್ರತಿಭಟನೆ ವ್ಯಕ್ತವಾಗಬೇಕಾಗಿದೆ. ಮುಗ್ಧ ಜನತೆಯ ಸಹನೆಯೇ ಕಾಂಗ್ರೆಸಿಗೆ ಶ್ರೀರಕ್ಷೆಯಾಗಿದೆ. ಈ ಸಹನೆಯ ದುರಪಯೋಗದಿಂದ ಕಾಂಗ್ರೆಸ್ ಪಕ್ಷಕ್ಕೆ ನವ ಉದಾರೀಕರಣದ ಧೋರಣೆಗಳನ್ನು ಜಾರಿಗೆ ತರಲು ಸಾಧ್ಯವಾಗಿದೆ. ಮುಂಬರುವ ಚುನಾವಣೆಗಳಲ್ಲಾದರೂ ಇಂತಹ ಜನದ್ರೋಹಿ ನೀತಿಗಳ ವಿರುದ್ಧ ಸ್ಪಷ್ಟ ಜನಾದೇಶ ದೊರೆಯುವಂತಾಗಬೇಕಾಗಿದೆ.

ಟಿಪ್ಪು ಹೆಸರಿಡುವ ಪ್ರಸ್ತಾಪ
ಕೇಂದ್ರ ವಿಶ್ವವಿದ್ಯಾಲಯಗಳ ಸ್ಥಾಪನೆ: ಹಿಂದಡಿ ಬೇಡ

ಟಿಪ್ಪು ಸುಲ್ತಾನ್ ಎಂದರೆ ಬ್ರಿಟೀಷರಿಗೆ ಸಿಂಹಸ್ವಪ್ನ, ಅಂದು ಮೈಸೂರು ಹುಲಿ ಟಿಪ್ಪು ಎಂದರೆ ಕನಸಿನಲ್ಲೂ ಅವರು ಬೆಚ್ಚಿ ಬೀಳುತ್ತಿದ್ದರು. ಭಾರತದ ಹಲವು ರಾಜರು ಕಪ್ಪ ಕಾಣಿಕೆಯನ್ನಿತ್ತು ಪಾದ ಸೇವೆ ಮಾಡುತ್ತಿರುವಾಗ ಬ್ರಿಟೀಷರ ವಿರುದ್ಧ ಹೋರಾಡುತ್ತಲೇ ಹುತಾತ್ಮನಾಗಿ ಇಲ್ಲಿಗೆ 214 ವರುಷಗಳಾದವು. ಆದರೆ ಟಿಪ್ಪು ಜನಮಾನಸದಿಂದ ಮರೆಯಾಗಲೇ ಇಲ್ಲ. ಆದರೆ ಆತನ ಹೆಸರು ಕೇಳಿದರೆ ಕೆಲವರಿಗೆ ಈಗಲೂ ನಡುಕ! ಮಧ್ಯ ರಾತ್ರಿಯಲ್ಲೂ ಎದ್ದು ಕುಳಿತು ಕೂಗುವ ತವಕ! ಇಂತಹವರಲ್ಲಿ ಒಂದು ಕಾಲದ ಸಂಶೋಧಕರಾಗಿದ್ದ ಇಂದಿನ ವಿಧ್ವಂಸರಾದ ಡಾ.ಚಿದಾನಂದ.ಮೂರ್ತಿ, ಕಾದಂಬರಿಕಾರ ಡಾ.ಎಸ್.ಎಲ್. ಬೈರಪ್ಪ ನಂಥವರು ಆ ಪಟ್ಟಿಯಲ್ಲಿ ಮೊದಲನೆಯ ಸ್ಥಾನ ಪಡೆದಿದ್ದಾರೆ ಎನ್ನುವುದೇ ದುರಂತ! ಇದರ ಜಾಡು ಜಾಲಾಡಿದರೆ ಅಲ್ಲಿ ಕಾಣುವುದೇ ಬ್ರಿಟೀಷರು ಬಿಟ್ಟು ಹೋಗಿರುವ ಒಡೆದು ಆಳುವ ನೀತಿಗಳ ವಾರಸುದಾರಿಕೆ ಇವರಲ್ಲಿ ಜೀವಂತ!.



ಸುಳ್ಳುಗಳ ಹುಯಿಲು

ಈ ಸಂಘ ಪರಿವಾರದ ಸಂತತಿ ಟಿಪ್ಪು ಸಾಹೇಬರ ನೆರಳಿನ ಸುತ್ತ ಮುಷ್ಟಿ ಯುದ್ಧ ನಡೆಸುವುದು ಹೊಸದೇನಲ್ಲ. ಅದರಲ್ಲೂ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಮೇಲಂತೂ ಕಾಲು ಕೆದರುವುದು ಹೆಚ್ಚಾಗಿರುವುದೂ ಸುಳ್ಳಲ್ಲ. ಇತ್ತೀಚೆಗೆ ರಾಜ್ಯದವರೇ ಆದ ರೆಹಮಾನ್ ಖಾನ್‌ರವರು ಕೇಂದ್ರದ ಮಂತ್ರಿಯಾದ ಮೇಲೆ ಕಳೆದ ನವೆಂಬರ್ 3ರಂದು ಮೊದಲ ಬಾರಿಗೆ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ ವೇಳೆ ತಮ್ಮ ಸಚಿವಾಲಯದಡಿಯಲ್ಲಿರುವ ಮೌಲಾನ ಅಜಾದ್ ಶಿಕ್ಷಣ ಪ್ರತಿಷ್ಠಾನವು ಖಾಸಗಿ ಸಹ ಭಾಗಿತ್ವದಡಿ (ಪಿಪಿಪಿಯಂತೆ) ದೇಶದಲ್ಲಿ 5 ರಾಜ್ಯಗಳಲ್ಲಿ ನೂತನ ಕೇಂದ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದಾಗಿ ಹೇಳಿದ್ದರ ಸುತ್ತಲೇ ಚೆಡ್ಡಿ ಪಡೆಗಳು ಹುಯಿಲೆಬ್ಬಿಸಿ ಬೊಬ್ಬಿರಿಯುತ್ತಿದ್ದಾರೆ. ಅದು ಮುಸ್ಲಿಂ ಯೂನಿವರ್ಸಿಟಿ, ಅದು ಭಯೋತ್ಪಾದನೆಯ ಕಾರ್ಖಾನೆ, ಅಲ್ಲಿ ಕಲಿತವರು ಭಯೋತ್ಪಾದಕರು, ಎಂಬಂತೆಲ್ಲಾ ಮಾತನಾಡಿ ಕೊನೆಗೆ ದೇಶದ್ರೋಹಿಗಳನ್ನು ತಯಾರಿಸುವ ಅಂತಹ ವಿ.ವಿ. ಬೇಕ್ಕೇ, ಅದಕ್ಕೆ ಟಿಪ್ಪುವಿನಂತಹವರ ಹೆಸರು ಇಡಬೇಕೇ ಎನ್ನುತ್ತಾ ಆ ವಿ.ವಿ.ಯೇ ಬೇಡ, ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಗೋಷ್ಠಿಗಳನ್ನು ನಡೆಸಿ ಅಬ್ಬರಿಸುತ್ತಿದ್ದಾರೆ. ಪ್ರಗ್ಯಾಸಿಂಗ್, ಮುತಾಲಿಕನಂತಹವರಿಗೆ ಶಿಕ್ಷಣ ನೀಡಿ ಹಿಂದುತ್ವದ ಭಯೋತ್ಪಾದನೆಗೆ ಕಾರಣವಾದದ್ದರ ಬಗ್ಗೆ ಏನೂ ಮಾತನಾಡದ ಇವರು ದೇಶಪ್ರೇಮದ ಪಾಠ ಹೇಳುತ್ತಿದ್ದಾರೆ!

ಸುಳ್ಳನ್ನೇ ಸತ್ಯವೆಂದು ಸಾರುವ ಗೋಬೆಲ್ಸ್ ಸಂತತಿಯ ದುರುದ್ದೇಶ, ಹಸಿ ಸುಳ್ಳುಗಳಿಗೆ ಮಿತಿಯೇ ಇಲ್ಲ. ಮೊದಲನೆಯದಾಗಿ ಅದು ಕೇಂದ್ರೀಯ ವಿಶ್ವವಿದ್ಯಾಲಯ, ಅಲ್ಪ ಸಂಖ್ಯಾತ ಇಲಾಖೆಯಡಿ ಬರಲಿದೆ ಹೊರತು ಮುಸ್ಲಿಂ ಮತೀಯ ವಿ.ವಿ.ಯಲ್ಲ. ಮತ್ತು ಕೇವಲ ಮುಸ್ಲಿಂ ವಿದ್ಯಾರ್ಥಿಗಳಿಗೆ ಮಾತ್ರವೇ ಪ್ರವೇಶಾವಕಾಶವಿರುವುದಿಲ್ಲ, ಅಲ್ಲಿ ಶೇ.50ರಷ್ಟು ಅಲ್ಪಸಂಖ್ಯಾತರಿಗೂ ಇನ್ನುಳಿದ ಶೇ.50ರಷ್ಟು ಸ್ಥಾನ ಇತರೆ ವಿಭಾಗಗಳೆಲ್ಲರಿಗೆ ನೀಡಲಾಗುವುದು. ಇಂತಹ ಅಲ್ಪಸಂಖ್ಯಾತ ವಿ.ವಿ.ಗಳ ಆರಂಭ ಹೊಸತೇನಲ್ಲ. ಈಗಾಗಲೇ ನೂರಾರು ವರುಷಗಳಿಂದ ಅಲಿಘರ್ ವಿ.ವಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಬನಾರಸ್ ಹಿಂದೂ ವಿವಿಯೂ ಇದೆ. ಇವುಗಳ ಕೊಡುಗೆ ಮರೆಯುವಂತಹದ್ದಲ್ಲ.

ಅಲ್ಪಸಂಖ್ಯಾತರೇ ಅವರ ಗುರಿ

ಹೀಗಿದ್ದೂ ಆರೆಸ್ಸೆಸ್ ಪರಿವಾರಕ್ಕೆ ಶ್ರೀರಂಗಪಟ್ಟಣದಲ್ಲಿ ಆರಂಭಿಸಲಾಗುವ ವಿವಿಯನ್ನು ವಿರೋಧಿಸುವುದಕ್ಕೆ ಕಾರಣ ಅದು ಅಲ್ಪಸಂಖ್ಯಾತರಿಗೆ ಉನ್ನತ ಶಿಕ್ಷಣದ ಅವಕಾಶಗಳ ಖಚಿತತೆ ನೀಡುತ್ತದೆ, ಮೇಲಾಗಿ ಅದಕ್ಕೆ ದೇಶಪ್ರೇಮಿ ಟಿಪ್ಪುವಿನ ಹೆಸರನ್ನಿಡಲಾಗುತ್ತದೆ ಎಂಬುದೇ ಆಗಿದೆ.

ಆಧುನಿಕ ಪ್ರಜಾಪ್ರಭುತ್ವ ಮತ್ತು ಮುಖ್ಯವಾಗಿ ಮಾನವ ಸಮಾನತೆಯನ್ನು ನಖಶಿಖಾಂತ ದ್ವೇಷಿಸುವ, ಜರ್ಮನಿಯ ಫ್ಯಾಶಿಸ್ಟ್ ಹಿಟ್ಲರನ ಜನಾಂಗೀಯ ದ್ವೇಷದ ಸಿದ್ಧಾಂತವೇ ಮೂಲವಾಗಿರುವ ಸಂಘ ಪರಿವಾರಿಗಳಿಗೆ ಅಲ್ಪಸಂಖ್ಯಾತರೆಂದರೆ ಭಯೋತ್ಪಾದಕರು, ದೇಶದ್ರೋಹಿಳಾಗಿಯೇ ಕಾಣುತ್ತಾರೆ. ದಲಿತರು, ಶೂದ್ರರಿಗಿಂತಲೂ ಅತ್ಯಂತ ಬಡತನ, ದಾರಿದ್ರ್ಯದಲ್ಲಿ ಬದುಕುವ ಮುಖ್ಯವಾಗಿ ಮುಸ್ಲಿಂ ಅಲ್ಪಸಂಖ್ಯಾತರ ಏಳಿಗೆಯನ್ನು ಸಹಿಸುವುದಿಲ್ಲ. ಬಹುತೇಕ ಕೋಮು ಗಲಭೆಗಳಲ್ಲಿ ಅವರ ಜೀವದ ಜೊತೆಗೆ ಗುರಿಯಿರಿಸಿ ಆಸ್ತಿ ಪಾಸ್ತಿಯನ್ನೂ ನಾಶಗೊಳಿಸಲಾಗುತ್ತದೆ. ಇನ್ನು ಆಧುನಕ ಶಿಕ್ಷಣ ಪಡೆದು ಎಲ್ಲರಂತೆ ತಲೆ ಎತ್ತಿ ಬಾಳುವುದನ್ನು ಅಲ್ಪಸಂಖ್ಯಾತ, ದಲಿತ, ಮಹಿಳಾ ವಿರೋಧಿಗಳಾದ ಈ ಮನುವಾದಿಗಳು ಸಹಿಸಿಯಾರೆ? ಆದ್ದರಿಂದಲೇ ಕುಂಟು ನೆಪ, ಹಸೀ ಸುಳ್ಳುಗಳ ವಿಕೃತಗೊಂಡ, ತಿರುಚಿದ ಇತಿಹಾಸ ಹೊಸೆದು ಸಂಶೋದನೆಗಳ ಹೆಸರಿನಲ್ಲಿ ವಿರೋಧಿಸುತ್ತಾರೆ, ಕುತಂತ್ರಗಳನ್ನು ಹೆಣೆಯುತ್ತಾರೆ. ದೊರೆಯುವ ಇಂತಹ ಸಂದರ್ಭಗಳನ್ನು ಬಳಸಿ ಮತೀಯ ವಿಭಜನೆ ತಂದು ಜಾತಿ ಧರ್ಮದ ನೆಲೆಯಲ್ಲಿ ಜನರನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿ ಕಟ್ಟುತ್ತಾರೆ, ಖಳನಾಯಕರನ್ನಾಗಿಸುತ್ತಾರೆ. ಆದ್ದರಿಂದಲೇ ಸಾಕು ಬೇಕಾಗದಷ್ಟು ಸುಳ್ಳುಗಳನ್ನು ಇಂಟರ್ ನೆಟ್, ವೆಬ್‌ಗಳಲ್ಲಿ ವಿಶ್ವದಾದ್ಯಂತ ಹಬ್ಬಿಸಿ ವಿಷಪ್ರಚಾರ ನಡೆಸಿದ್ದಾರೆ.

ದಾರುಣ ಸ್ಥಿತಿ ಬದಲಾಗಬಾರದೇ?

ಪುಟ 4 ಕ್ಕೆ

ಕೇಂದ್ರ ವಿಶ್ವವಿದ್ಯಾಲಯಗಳ ಸ್ಥಾಪನೆ: ಹಿಂದಡಿ ಬೇಡ....

ಪುಟ 3 ರಿಂದ

ಈಗಾಗಲೇ ಮುಸ್ಲಿಂ ಅಲ್ಪಸಂಖ್ಯಾತರ ಸ್ಥಿತಿ–ಗತಿಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ನ್ಯಾ. ಸಾಚಾರ್ ವರದಿಯು ಈ ವಿಭಾಗದ ಅತ್ಯಂತ ಧಾರುಣ ಪರಿಸ್ಥಿತಿಯನ್ನು ತೆರೆದಿಟ್ಟಿದೆ. ಶಿಕ್ಷಣರಂಗದಲ್ಲಿನ ಪ್ರಗತಿಯು ಅತ್ಯಂತ ಶೋಚನೀಯವಾಗಿದೆ. ಪ್ರಾಥಮಿಕ ಶಿಕ್ಷಣವೂ ಪಡೆಯಲು ಅಸಾಧ್ಯವಿರುವ ಸನ್ನಿವೇಶದಲ್ಲಿ ಉನ್ನತ ಶಿಕ್ಷಣ, ಉದ್ಯೋಗಗಳು ಕನಸಿನ ಮಾತಾಗಿವೆ. ಹೀಗೆ ಜನಾಂಗವನ್ನೇ ಎಲ್ಲಾ ಬೆಳವಣಿಗೆಗಳಿಂದ ದೂರವಿಟ್ಟು ವಂಚಿಸುವುದು ದ್ರೋಹವೇ ಆಗಿದೆ. ಇದನ್ನು ಸರಿಪಡಿಸುವ ಕ್ರಮಗಳು ತುರ್ತಾಗಿ ಆಗಲೇಬೇಕು. ಈ ಕೇಂದ್ರೀಯ ವಿವಿಗಳು ಆ ಮಟ್ಟಿನಲ್ಲಿ ಖಂಡಿತಕ್ಕೂ ಅಗತ್ಯವಾಗಿವೆ. ಇದರಲ್ಲಿ ಒಂದು ಮಹಿಳಾ ವಿವಿ ಇರುವುದೂ ಸ್ವಾಗತಾರ್ಹ.

ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯಿದೆ. ಕೋಮುವಾದಿಗಳು ಅಲ್ಪಸಂಖ್ಯಾತರಲ್ಲಿ ಶಿಕ್ಷಣದ ಪ್ರಗತಿಯನ್ನು ಸಹಿಸುವುದಿಲ್ಲ ಎಂಬುದರ ಜೊತೆಗೆ ವಿಶೇಷವಾಗಿ ಮಹಿಳೆಯರ ಶಿಕ್ಷಣವನ್ನೂ ತಡೆಯಲು ನಡೆಸಿರುವ ಪ್ರಯತ್ನಗಳನ್ನು ನಿರ್ಲಕ್ಷಿಸಲಾಗುವುದಿಲ್ಲ. ಕರ್ನಾಟಕದ ಕರಾವಳಿಯಲ್ಲಿ ವಿದ್ಯಾರ್ಥಿನಿಯರು ಹೆಚ್ಚು ಹೆಚ್ಚಾಗಿ ಶಾಲಾ ಕಾಲೇಜುಗಳಲ್ಲಿ ಕಲಿಯುವುದಕ್ಕೆ ಅಡ್ಡಿ ಮಾಡುವಂತಹ ಬುರ್ಖಾ ವಿವಾದಗಳು, ದೈಹಿಕ ಧಾಳಿಗಳು, ಹಲವು ಬಗೆಯ ತಾರತಮ್ಯಗಳ ವರ್ತನೆ ಸಂಘ ಪರಿವಾರದಿಂದಲೂ, ಆ ವಾದ ಪ್ರೇರಿತ ಆಡಳಿತ ಮಂಡಳಿಗಳಿಂದಲೂ ನಡೆದಿರುವುದು ಕಣ್ಣೆದುರಿದೆ.

ಸರಕಾರ ಹಿಂದೆ ಸರಿಯದಿರಲಿ

ಆದ್ದರಿಂದ ಬೌದ್ಧಿಕ ವಲಯದ ಕೆಲ ಬಜರಂಗಿಗಳ ವಾದಕ್ಕೆ ಸಮಚಿತ್ತವಿರುವವರಾರೂ ಸೊಪ್ಪು ಹಾಕಬೇಕಾದ ಅಗತ್ಯವಿಲ್ಲ. ಇದಕ್ಕೆ



ಈಗಾಗಲೇ ಬರಗೂರು, ಅನಂತಮೂರ್ತಿ, ಕಾರ್ನಾಡ್, ಮರುಳಸಿದ್ದಪ್ಪ, ವಿಜಯಾ, ಗೋವಿಂದರಾವ್ ಮುಂತಾದ ಕರ್ನಾಟಕದ ಅತ್ಯಂತ ಪ್ರಮುಖ ಬರಹಗಾರರು, ಇತಿಹಾಸಕಾರರು, ಪ್ರಗತಿಪರ ಸಂಘಟನೆಗಳು ದುರುದ್ದೇಶದ ಆ ಟೀಕೆಗಳಿಗೆ ತಕ್ಕದಾಗಿ ಉತ್ತರಿಸಿ ವಿವಿ ಸ್ಥಾಪನೆ ಮತ್ತು ಟಿಪ್ಪು ಹೆಸರಿಡುವ ಪ್ರಸ್ತಾಪಗಳಿಗೆ ಬೆಂಬಲಿಸಿದ್ದಾರೆ. ಮುಖ್ಯವಾಗಿ ಕೇಂದ್ರ ಸರಕಾರ ತನ್ನ ನಿಲುವಿನಿಂದ ಹಿಂದೆ ಸರಿಯಬಾರದು. ನಿರ್ಧಾರಕ್ಕೆ ಬದ್ಧವಾಗಿ ಮುಂದಡಿ ಇಡಬೇಕು. ದೇಶಕ್ಕೆ, ಅದರಲ್ಲೂ ರಾಜ್ಯದ ಪ್ರಗತಿಗೆ ಅನನ್ಯ ಕೊಡುಗೆ ನೀಡಿದ ಟಿಪ್ಪುವಿಗೆ, ಅವರ ಹೆಸರು ನೆನಪಿಸುವ ಹಲವಾರು ಸಂಧರ್ಭಗಳಿಗೆ ಸೂಕ್ತ ನ್ಯಾಯ ಸಲ್ಲಿಸದೇ ತಾರತಮ್ಯ ತೋರಲಾಗಿದೆ ಎಂಬುದನ್ನು ಮರೆಯಬಾರದು. ಒಬ್ಬ ರಾಜನಾಗಿ ಟಿಪ್ಪುವಿನ ಆಡಳಿತದಲ್ಲಿ ಲೋಪ ದೋಷಗಳು ಇಲ್ಲವೆಂದೇನಲ್ಲ. ಅವುಗಳು ಐತಿಹಾಸಿಕ ವಿಮರ್ಶೆಯಿಂದ ಹೊರಗಿಡಬೇಕಿಲ್ಲ. ಆದರೆ ಕೋಮು ಸೌಹಾರ್ಧತೆ, ಧಾರ್ಮಿಕ ಸಹಿಷ್ಣುತೆ, ಆರ್ಥಿಕ ಪ್ರಗತಿ ಮತ್ತು ವಸಾಹತುಶಾಹಿ ವಿರೋಧಿ ಹೋರಾಟ, ತ್ಯಾಗಗಳನ್ನು ನಾಡು ಮರೆಯುವುದು ಕೃತಘ್ನತೆಯಾಗುತ್ತದೆ. ಅದರಿಂದ ಭವಿಷತ್ತೂ ಮಸುಕಾಗುತ್ತದೆ.

ವಿವಿಗಳನ್ನು ಸ್ಥಾಪಿಸುವ ದೆಶೆಯಲ್ಲಿ ಕೆಂದ್ರ ಸರಕಾರವೀಗ ಪ್ರೊ. ಥೋರತ್ ರ ನೇತೃತ್ವದ ಸಮಿತಿಯನ್ನು ರಚಿಸಿದೆ. ಅದು ಪಠ್ಯ ಕ್ರಮ, ಆಡಳಿತ ಇತ್ಯಾದಿ ಕ್ರಮಗಳನ್ನು ರೂಪಿಸಿ ಪ್ರಸ್ಥಾಪಗಳನ್ನು ಸಲ್ಲಿಸಲಿದೆ. ಅದು ವಿಳಂಬವಾಗಕೂಡದು. ಆದ್ದರಿಂದ ಪಠ್ಯ ಕ್ರಮ ಇತ್ಯಾದಿಗಳ ಬಗ್ಗೆ ಏನಾದರೂ ಸಲಹೆ ಸೂಚನೆಗಳಿದ್ದರೆ ನೀಡಬಹುದು. ಅದಕ್ಕೆ ಕೇಂದ್ರವೂ ಮುಕ್ತ ಮನಸ್ಸಿನಿಂದ ಪಡೆಯಬೇಕು.

ನೆಪವಾಗಬಾರದು

ಕೊನೆಯದಾಗಿ, ಕೇಂದ್ರದ ಕಾಂಗ್ರೆಸ್‌ನ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳು ಅಲ್ಪಸಂಖ್ಯಾತರು ಅದರಿಂದ ದೂರ ಸರಿಯುವಂತೆ ಮಾಡಿವೆ. ಎಲ್ಲಾ ಜನಸಮೂಹಗಳಂತೆ ಅಲ್ಲಿಯೂ ತೀವ್ರ ಅತೃಪ್ತಿ ಬೆಳದಿದೆ. ಕರ್ನಾಟಕದಲ್ಲಿಯೂ ಬಿಜೆಪಿಯು ಹಲವು ಮುಖಗಳ ಧಾಳಿಗಳನ್ನು ನಡೆಸಿದಾಗ ವಿರೋಧ ಪಕ್ಷವಾಗಿ ಅದು ತೋರಿದ ನಿಷ್ಕ್ರಿಯತೆಯು ಅಲ್ಪಸಂಖ್ಯಾತರು ಕಾಂಗ್ರೆಸ್ಸನ್ನು ನೆಚ್ಚಿ ಕೂಡುವಂತಹ ವಾತಾವರಣವನ್ನು ಉಳಿಸಿಕೊಂಡಿಲ್ಲ. ಹೀಗಾಗಿ ಇತರೆ ಸೆಕ್ಯುಲರ್ ಪರ್ಯಾಯ ಶಕ್ತಿಗಳ ಹುಡುಕಾಟದಲ್ಲಿ ವಿಶೇಷವಾಗಿ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯವಿದೆ. ಇದೇ ಹೊತ್ತಿನಲ್ಲಿ ಮುಸ್ಲಿಂ ಮೂಲಭೂತವಾದಿ ಶಕ್ತಿಗಳು ರಾಜಕೀಯ ಕ್ರೋಢೀಕರಣಕ್ಕೆ ತೀವ್ರ ಪ್ರಯತ್ನ ನಡೆಸಿವೆ. ರಾಜ್ಯ ವಿಧಾನಸಭಾ ಚುನಾವಣೆಗಳು ಹತ್ತಿರವಿರುವಾಗ ಅಲ್ಪಸಂಖ್ಯಾತರನ್ನು ಪುನಃ ಸೆಳೆಯಲು ಕಾಂಗ್ರೆಸ್ ಪ್ರಯತ್ನ ನಡೆಸಿದೆ. ಉಪ ಸಭಾಪತಿಯಾಗಿದ್ದ ರೆಹಮಾನ್‌ಖಾನ್‌ರನ್ನು ಮಂತ್ರಿಯಾಗಿಸುವಲ್ಲಿ, ಈ ವಿವಿಗಳ ಸ್ಥಾಪನೆಯ ಉದ್ದೇಶವನ್ನು ರಾಜಕೀಯವಾಗಿ ಬಳಸುವ ಲೆಕ್ಕಾಚಾರವಿಲ್ಲದಿಲ್ಲ. ಅಷ್ಟಕ್ಕೆ ಸೀಮಿತಗೊಳ್ಳದಂತೆ ಎಚ್ಚರವನ್ನು ಜನತೆ ವಹಿಸಬೇಕಿದೆ. ಬಿಜೆಪಿಯೂ ಈ ವಿಷಯದಲ್ಲಿ ಮತೀಯ ರಾಜಕಾರಣದ ಲಾಭ ಪಡೆಯಲು ನಡೆಸುವ ಅಪಾಯಕಾರಿ ಪ್ರಯತ್ನಗಳನ್ನು ಸೋಲಿಸಬೇಕಿದೆ.

ಎಡ ಪಕ್ಷಗಳ ಜಂಟಿ ಆಂದೋಲನದ ಘೋಷಣೆ

ಸಿಪಿಐ(ಎಂ), ಸಿಪಿಐ ಮತ್ತು ಫಾರ್ವಡ್ ಬ್ಲಾಕ್ ಈ ಮೂರು ಎಡಪಕ್ಷಗಳ ನಾಯಕರು ದಿನಾಂಕ 23.12.2012 ಮತ್ತು 4.1.2013ರಂದು ಸಭೆ ಸೇರಿ ಈ ಕೆಳಕಂಡ ಕಾರ್ಯಕ್ರಮಗಳಲ್ಲಿ ಜೊತೆಗೂಡಿ ಕೆಲಸ ಮಾಡುವುದಾಗಿ ತೀರ್ಮಾನಿಸಿದರು.

1. ಆಹಾರದ ಹಕ್ಕಿಗಾಗಿ ಒತ್ತಾಯಿಸಿ ಬೃಹತ್ ಸಹಿ ಸಂಗ್ರಹ ಚಳುವಳಿ;
2. ಎಲ್ಲಾ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಫೆಬ್ರವರಿ 20 ಮತ್ತು 21ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ;
3. ಕರ್ನಾಟಕದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ.

ಈ ವಿಷಯಗಳ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ಮಾಧ್ಯಮಗಳಿಗೆ ವಿವರಿಸಲಾಗಿದೆ:

1. ಆಹಾರ ಹಕ್ಕಿಗಾಗಿ ಒತ್ತಾಯಿಸಿ ಸಹಿ ಸಂಗ್ರಹ ಚಳುವಳಿ: ಅಖಿಲ ಭಾರತ ಮಟ್ಟದಲ್ಲಿ ನಾಲ್ಕು ಎಡಪಕ್ಷಗಳು 'ಆಹಾರ ಹಕ್ಕಿಗಾಗಿ ಒತ್ತಾಯಿಸುವ ಸಲುವಾಗಿ ಜನರಿಂದ 5 ಕೋಟಿ ಸಹಿಗಳನ್ನು ಸಂಗ್ರಹ ಮಾಡುವುದಾಗಿ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಕರ್ನಾಟಕದಲ್ಲಿ ಸದರಿ ಮೂರು ಎಡಪಕ್ಷಗಳು ಜನವರಿ 10 ರಿಂದ 16ರವರೆಗೆ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ ಇತ್ಯಾದಿಗಳಲ್ಲಿ ಶಾಮಿಯಾನ ಹಾಕಿ ಕೇಂದ್ರ ಕಛೇರಿ ಕಳುಹಿಸಿ ಕೊಟ್ಟಿರುವ ಮಾದರಿಯಲ್ಲಿ ಸಹಿ ಸಂಗ್ರಹ ಮಾಡಲಾಗುವುದು. ಈ ಸಹಿ ಸಂಗ್ರಹವನ್ನು ಕಾರ್ಖಾನೆಗಳು, ಕಛೇರಿಗಳು ಮತ್ತು ಸಂಸ್ಥೆಗಳ ದ್ವಾರದಲ್ಲಿಯೂ ಸದರಿ ವಾರದಲ್ಲಿ ಮಾಡಲಾಗುವುದು ಹಾಗೂ ಈ ಸಹಿ ಸಂಗ್ರಹ ಚಳುವಳಿಯೂ ಎಡಪಕ್ಷಗಳು ಸ್ಪರ್ಧಿಸುವ ಪ್ರತಿಯೊಂದು ವಿಧಾನ ಸಭೆ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷ ಜನರಿಂದ ಸಹಿ ಸಂಗ್ರಹ ಮಾಡಲಾಗುವುದು.

2. ಅಖಿಲ ಭಾರತ ಸಾರ್ವತ್ರಿಕ ಮುಷ್ಕರ: ತೀವ್ರಗೊಂಡ ಬೆಲೆ ಏರಿಕೆ, ಸಾಮಾನ್ಯ ಕನಿಷ್ಠ ವೇತನ ರೂ. 10,000 ನೀಡಲು ಆಗ್ರಹಿಸಿ, ಗುತ್ತಿಗೆ ಪದ್ಧತಿಯನ್ನು ಅಂತ್ಯಗೊಳಿಸಲು, ಕಾರ್ಮಿಕ ಕಾನೂನುಗಳ ಪಾಲನೆ, ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುತ್ತಿರುವುದನ್ನು ನಿಲ್ಲಿಸಲು ಒತ್ತಾಯಿಸಿ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ವಿರೋಧಿಸಿ ಇತ್ಯಾದಿ ವಿಷಯಗಳ ಬಗ್ಗೆ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಬೆಲೆ ಏರಿಕೆ ವಿರೋಧಿ ರಾಷ್ಟ್ರೀಯ ಒಕ್ಕೂಟಗಳು ದಿನಾಂಕ 20 ಮತ್ತು 21 ಫೆಬ್ರವರಿ 2013ರಂದು ಹಮ್ಮಿಕೊಂಡಿರುವ ಅಖಿಲ ಭಾರತ ಮುಷ್ಕರವು ದುಡಿಯುವ ಜನರ ಪ್ರಶ್ನೆಯಾಗಿರುವುದರಿಂದ ಎಡಪಕ್ಷಗಳು ಬೆಂಬಲಿಸುತ್ತವೆ. ಹಾಗಾಗಿ ಈ ಎರಡು ದಿನದ ಮುಷ್ಕರವನ್ನು ಬೆಂಬಲಿಸುತ್ತಾ ಭಾಗವಹಿಸಬೇಕೆಂದು ಮತ್ತು ವ್ಯಾಪಾರಿಗಳು ಮತ್ತಿತರರು ಕೂಡ ಹರತಾಳವನ್ನು ಆಚರಿಸಬೇಕೆಂದು ಎಡಪಕ್ಷಗಳು ಕರೆ ನೀಡುತ್ತವೆ.

3. ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ: ರಾಜ್ಯದಲ್ಲಿ ಮೂರು ಎಡಪಕ್ಷಗಳು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಕ್ಷೇತ್ರಗಳನ್ನು ಮಾಧ್ಯಮಕ್ಕೆ ತಿಳಿಸಲು ನಿರ್ಧರಿಸಿವೆ. ಆಸ್ಟರಿಸ್ಕ್ * ಚಿಹ್ನೆಯಲ್ಲಿ ಗುರುತಿರುವ ಕ್ಷೇತ್ರಗಳ ಬಗ್ಗೆ ನಂತರ ಸಮಾಲೋಚನೆ ಮಾಡಿ ತೀರ್ಮಾನಿಸಲಾಗುವುದು. ಎಡಪಕ್ಷಗಳು ಪರಸ್ಪರ ಸ್ಪರ್ಧೆ ಮಾಡದೆ ಒಂದಾಗಿ ಪಕ್ಷದ ಅಭ್ಯರ್ಥಿಯ ಗೆಲುವಿಗಾಗಿ ಪ್ರಚಾರ ಮಾಡುವುದು ಮತ್ತು ಜಾತ್ಯಾತೀತ–ಪ್ರಗತಿಪರ ಅಭ್ಯರ್ಥಿಗಳು ಬಯಸಿದ್ದಲ್ಲಿ ಅವರಿಗೆ ಬೆಂಬಲ ನೀಡುವುದು. ಎಲ್ಲರೂ ಸೇರಿ ಕಾಂಗ್ರೆಸ್, ಬಿಜೆಪಿ ಮತ್ತು ಈ ಪಕ್ಷಗಳ ಪ್ರತಿಬಿಂಬವಾಗಿರುವ ಇತರೆ ಸಣ್ಣ ಪಕ್ಷಗಳ ಸೋಲಿಗಾಗಿ ದುಡಿಯುವುದು. ಮತದಾನದ ದಿನ ಹತ್ತಿರ ಬಂದಂತೆ ಯಾರಿಗೆ ನಮ್ಮ ಅಮೂಲ್ಯವಾದ ಮತಗಳನ್ನು ನೀಡಬೇಕು ಎಂದು ನಿರ್ಣಯಿಸಲಾಗುವುದು.

ಎಡಪಕ್ಷಗಳ ಪರವಾಗಿ ಈ ರಾಜ್ಯ ಮುಖಂಡರು ಕರ್ನಾಟಕದ ಜನತೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳಿಗೆ ಮತ್ತು ಎಡಪಕ್ಷಗಳು ಬೆಂಬಲ ಸೂಚಿಸಿದವರಿಗೆ ಅವರ ಹೆಸರುಗಳು ಬಹಿರಂಗವಾದ ನಂತರ ಅವರನ್ನು ಬೆಂಬಲಿಸಬೇಕೆಂದು ಕೋರುತ್ತೇವೆ. ಆಹಾರ ಹಕ್ಕು ಕಾನೂನಿಗಾಗಿ ಎಡಪಕ್ಷಗಳು ನಡೆಸುತ್ತಿರುವ ಸಹಿ ಸಂಗ್ರಹ ಚಳುವಳಿಯಲ್ಲಿ ಭಾಗವಹಿಸಿ ಸಹಿ ಮಾಡಿ, ಸಾರ್ವತ್ರಿಕ ಮುಷ್ಕರ ಮತ್ತು ಹರತಾಳದಲ್ಲಿ ಭಾಗವಹಿಸಿ ಬೆಂಬಲ ನೀಡಬೇಕೆಂದು ಮನವಿ.

● (ಜನವರಿ 9 ರಂದು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾದ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ ಪಕ್ಷಗಳ ಜಂಟಿ ಹೇಳಿಕೆ)

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಡೆಸ್ನಾನ, ಪಂಕ್ತಿಭೇದ ವಿರುದ್ಧ ಪ್ರಬಲವಾಗುತ್ತಿರುವ ಜನಾಭಿಪ್ರಾಯ

ಪೇಜಾವರ ಮಠಾಧೀಶರ ಅಸಂಬದ್ಧ ಪ್ರಲಾಪ

ನಿತ್ಯಾನಂದ ಸ್ವಾಮಿ

ಮಡೆಸ್ನಾನ ಮತ್ತು ಪಂಕ್ತಿಭೇದ ಎಂಬ ಅನಿಷ್ಟ ಸಾಮಾಜಿಕ ಪದ್ಧತಿಗಳ ವಿರುದ್ಧ ಇತ್ತೀಚೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಿಪಿಐ(ಎಂ) ನಡೆಸಿದ ಜನಜಾಗೃತಿ ಪಾದಯಾತ್ರೆ ಮತ್ತು ಉಡುಪಿ ಶ್ರೀ ಕೃಷ್ಣ ದೇವಸ್ಥಾನದ ಹತ್ತಿರ ಏರ್ಪಡಿಸಿದ ಪ್ರತಿಭಟನೆ ಹಾಗೂ ಅನಂತರ ಪೋಲೀಸರು ಅನಗತ್ಯವಾಗಿ ಅಮಾಯಕ ಪ್ರತಿಭಟನಾಕಾರರ ಮೇಲೆ ನಡೆಸಿದ ಲಾಠಿ ಪ್ರಹಾರದಿಂದಾಗಿ ಇಡೀ ರಾಜ್ಯದಲ್ಲಿ ಒಂದು ಆರೋಗ್ಯಕರವಾದ ಚರ್ಚೆ ಆರಂಭವಾಗಿರುವುದು ಸ್ವಾಗತಾರ್ಹವಾಗಿದೆ. ಈ ಚರ್ಚೆ ಇಲ್ಲಿಗೆ ನಿಲ್ಲದು. ವಿದ್ಯಾವಂತರು, ನೇರ ನುಡಿಗೆ ಹೆಸರಾದವರು, ಕಾನೂನನ್ನು ಗೌರವಿಸುವವರು ಎಂದು ಖ್ಯಾತರಾಗಿರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ನಾಗರಿಕರು ರಾಜ್ಯದ ಇತರ ಜಿಲ್ಲೆಗಳ ಜನಬೆಂಬಲದೊಂದಿಗೆ ಈ ಚರ್ಚೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದು ಖಚಿತ. ಅಲ್ಲಿಯವರೆಗೆ, ಈ ಚರ್ಚೆಯನ್ನು ಹುಟ್ಟು ಹಾಕಿರುವ ಸಿಪಿಐ(ಎಂ) ಕೂಡಾ ವಿಶ್ರಮಿಸದು.

ಈ ನಡುವೆ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಸ್ವಾಮಿಜಿಯವರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಅಸಂಬದ್ಧವಾದ ಪ್ರಲಾಪವನ್ನೇ ಮಾಡಿದ್ದಾರೆ. ಅವರು ಹೇಳಿದ್ದಾರೆ ಎನ್ನಲಾದ ಮಾತುಗಳಲ್ಲಿ, ಮಡೆಸ್ನಾನ ಮತ್ತು ಪಂಕ್ತಿಭೇದದ ಬಗ್ಗೆ ಚರ್ಚೆಗೆ ಸಿದ್ಧ ಎಂಬ ಒಂದು ಮಾತು ಸ್ವಾಗತಾರ್ಹವಾಗಿದೆ. ಆದರೆ ಈ ಬಹಿರಂಗ ಆಹ್ವಾನವನ್ನು ಡಿಸೆಂಬರ್ 27ರ ಮೊದಲೇ ಅವರು ಪ್ರಕಟಿಸಿದ್ದರೆ ಪ್ರಾಯಶ: ಅಂದು ಉಡುಪಿ ಕನಕದಾಸ ಬೀದಿಯಲ್ಲಿ ಪೋಲೀಸರ ರಾಕ್ಷಸೀಯ ಲಾಠಿ ಪ್ರಹಾರಕ್ಕೆ ಸಿಪಿಐ(ಎಂ) ಮಹಿಳಾ ಮತ್ತು ಪುರುಷ ಕಾರ್ಯಕರ್ತರ ತಲೆಗಳು ಒಡೆದು ರಕ್ತ ಹರಿಯುತ್ತಿರಲಿಲ್ಲ. ಪೋಲೀಸರು ಲಾಠಿ ಪ್ರಹಾರ ಮಾಡಿದ್ದು ನಮಗೂ ನೋವಾಗಿದೆ ಎಂದು ಶ್ರೀಗಳು ಹೇಳಿದ್ದಾರೆ ಎಂದು ಒಂದೆರಡು ಪತ್ರಿಕೆಗಳು ವರದಿ ಮಾಡಿವೆ. ನಾಲ್ಕು ಜನ ಪ್ರತಿನಿಧಿಗಳು ಬಂದು ಚರ್ಚಿಸ ಬಹುದಿತ್ತು ಎಂದಿದ್ದಾರೆ. ಇದನ್ನು ಅವರೇ ವ್ಯವಸ್ಥೆ ಮಾಡಬೇಕಾಗಿತ್ತು. ತಾವು ಸ್ವತ: ಮಠದಲ್ಲಿ ಉಪಸ್ಥಿತರಿದ್ದು, ಪ್ರತಿಭಟನಾಕಾರರ ಪ್ರತಿನಿಧಿಗಳನ್ನು ಬರಮಾಡಿಕೊಂಡು ಚರ್ಚಿಸಬಹುದಾಗಿತ್ತು.

ಸಿಪಿಐ(ಎಂ) ಈ ಹಿಂದೆಯೂ ಅಂತಹ ಅವಕಾಶಗಳನ್ನು ಮುಂದಿಡುತ್ತಾ ಬಂದಿದೆ. 2005 ರಲ್ಲಿ ಉಡುಪಿಯಲ್ಲೇ ಪಕ್ಷದ 18ನೇ ರಾಜ್ಯ ಸಮ್ಮೇಳನ ನಡೆದಾಗ ಶ್ರೀ ಕೃಷ್ಣ ದೇವಸ್ಥಾನದಲ್ಲಿ ನಡೆಯುತ್ತಿರುವ ಪಂಕ್ತಿಭೇದವನ್ನು ನಿಲ್ಲಿಸುವಂತೆ ಒತ್ತಾಯಿಸುವ ನಿರ್ಣಯವನ್ನು ಕೈಗೊಂಡು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಗಿತ್ತು. ಅನಂತರ ಮೂರು ವರ್ಷಕ್ಕೊಮ್ಮೆ ನಡೆಯುತ್ತಾ ಬಂದಿರುವ ಪಕ್ಷದ ರಾಜ್ಯ ಹಾಗೂ ಜಿಲ್ಲಾ ಸಮ್ಮೇಳನಗಳಲ್ಲಿ ಪಂಕ್ತಿಭೇದ ನಿಷೇಧಿಸುವಂತೆ ಸರ್ಕಾರವನ್ನು ಆಗ್ರಹಿಸುತ್ತಾ ಬರಲಾಗಿತ್ತು. 2012 ರ ಜನವರಿಯಲ್ಲಿ ಚಿಕ್ಕಬಳ್ಳಾಪುರದಲ್ಲಿ ನಡೆದ ಪಕ್ಷದ 20ನೇ ರಾಜ್ಯ ಸಮ್ಮೇಳನವು ಅದೇ ಜನವರಿ 26 ರ "ಉಡುಪಿ ಚಲೋ" ಕಾರ್ಯಕ್ರಮವನ್ನು ಚರ್ಚಿಸಿ ಅಂಗೀಕರಿಸಿತ್ತು. ಅಂದೂ ಪಕ್ಷದ ಕಾರ್ಯಕರ್ತರು ರಾಜ್ಯದ ಮೂಲೆ ಮೂಲೆಗಳಿಂದ ಬಂದು ಉಡುಪಿಯಲ್ಲಿ ನಡೆಸಲಾದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಈ ಸಲ ಪಂಕ್ತಿಭೇದದ ಪ್ರಶ್ನೆಯ ಜೊತೆಯಲ್ಲಿ ಕುಕ್ಕೇ ಸುಬ್ರಮಣ್ಯದಲ್ಲಿ ನಡೆಯುತ್ತಿರುವ



ಮಡೆಸ್ನಾನ ಎಂಬ ಮೂಢನಂಬಿಕೆ ಹಾಗೂ ಮಾನವ ಘನತೆ ಗೌರವಕ್ಕೆ ಧಕ್ಕೆ ತರುವ ಅನಿಷ್ಟ ಪದ್ಧತಿಯ ವಿರುದ್ಧ ಜನಜಾಗೃತಿಯನ್ನು ಉಂಟುಮಾಡುವ ಕಾರ್ಯಕ್ರಮವನ್ನೂ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಬಗ್ಗೆ ಒಂದೆರಡು ತಿಂಗಳುಗಳಿಂದ ಪ್ರಚಾರ ಮಾಡಲಾಗಿತ್ತು. ಜನಜಾಗೃತಿ ಜಾಥಾಗಳನ್ನು ಆರೇಳು ದಿನಗಳ ಕಾಲ ನಡೆಸಲಾಯಿತು. ಶ್ರೀ ವಿಶ್ವೇಶತೀರ್ಥರಿಗೆ ನಿಜವಾಗಿಯೂ ಒಂದು ಸೌಹಾರ್ದಯುತ ಚರ್ಚೆಯಲ್ಲಿ ನಂಬಿಕೆ ಇದ್ದಿದ್ದರೆ ಅವರು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬಹುದಿತ್ತು. ಲಭ್ಯವಿದ್ದ ಅವಕಾಶಗಳನ್ನು ಬಳಸಿಕೊಳ್ಳದೆ "ನಮಗೂ ನೋವಾಗಿದೆ" ಎಂದು ಈಗ ಪತ್ರಿಕೆಗಳ ಎದುರು ಹೇಳಿಕೊಳ್ಳುವುದು ವ್ಯರ್ಥ ಪ್ರಲಾಪವಲ್ಲದೆ ಮತ್ತೇನು?

ಮಡೆಸ್ನಾನ–ಪಂಕ್ತಿಭೇದ ತಡೆ ನೆಪದಲ್ಲಿ ತಮ್ಮನ್ನು "ಟಾರ್ಗೆಟ್" ಮಾಡಿದರು ಎಂಬುದು ಪೇಜಾವರರ ಇನ್ನೊಂದು ಆರೋಪ. ಹೋರಾಟಗಾರರಿಗೆ ಒಂದು ಗುರಿ, ಒಂದು ಟಾರ್ಗೆಟ್ ಇರಲೇಬೇಕು. ಗುರಿ ಇಲ್ಲದ ಹೋರಾಟಕ್ಕೆ ಅರ್ಥವಿರದು. ಜನಬೆಂಬಲ ಸಿಗದು. ಎಲ್ಲಾ ಜಾತಿ ಜನಾಂಗಗಳ ಜನ ಯಾವುದೇ ರೀತಿಯ ತಾರತಮ್ಯ ಶೋಷಣೆ ಇಲ್ಲದೆ ಬಾಳಬಹುದಾದ ಸಮಾಜ ರಚನೆ ಸಿಪಿಐ(ಎಂ) ನ ಅಂತಿಮ ಗುರಿಯಾಗಿದೆ. ಬುದ್ಧ, ಬಸವ, ಜ್ಯೋತಿಬಾ ಫುಲೆ, ನಾರಾಯಣ ಗುರು, ಪೆರಿಯಾರ್ ಮೊದಲಾದವರು ಕಟ್ಟ ಬಯಸಿದ ಸಮಾಜವದು. ಗಾಂಧಿಜೀ, ಅಂಬೇಡ್ಕರ್, ಪಿ ಸುಂದರಯ್ಯ, ಎ.ಕೆ. ಗೋಪಾಲನ್ ಮೊದಲಾದ ಹೋರಾಟಗಾರರು ನಡೆದು ಹೋದ ಹಾದಿಯದು. ವರ್ಗ ಶೋಷಣೆ ಹಾಗೂ ಜಾತಿ ದಮನದ ವಿರುದ್ಧದ ಹೋರಾಟವನ್ನು ಒಟ್ಟೊಟ್ಟಾಗಿ ನಡೆಸಲು ಬದ್ಧವಾಗಿರುವ ಸಿಪಿಐ(ಎಂ) ಕರ್ನಾಟಕದಲ್ಲಿ ಇನ್ನೂ ಜೀವಂತವಾಗಿರುವ ಜಾತಿ ಅಸ್ಪೃಶ್ಯತೆ, ಜಾತಿ ತಾರತಮ್ಯದ ವಿರುದ್ಧ ಜನಜಾಗೃತಿ ಹಾಗೂ ಜನ ಹೋರಾಟಗಳನ್ನು ರೂಪಿಸುವುದರಲ್ಲಿ ಮಗ್ನವಾಗಿದೆ. ದಲಿತರಿಗೆ ದೇವಸ್ಥಾನ ಪ್ರವೇಶ ನಿರಾಕರಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ದಲಿತರಿಗೆ ತಾರತಮ್ಯವೆಸಗುವುದನ್ನು ತಡೆಯಲು ಸಿಪಿಐ(ಎಂ) ಹೋರಾಟ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಉಡುಪಿ ಶ್ರೀ ಕೃಷ್ಣ ದೇವಸ್ಥಾನದಲ್ಲಿ ನಡೆಯುತ್ತಿರುವ ಪಂಕ್ತಿಭೇದದ ವಿರುದ್ಧ ಧ್ವನಿ ಎತ್ತಲು ಸಿಪಿಐ(ಎಂ) ನಿರ್ಧರಿಸಿತು. ಬ್ರಾಹ್ಮಣರಿಗೆ ಪ್ರತ್ಯೇಕ ಪಂಕ್ತಿಗಳಲ್ಲಿ ಊಟ ಬಡಿಸುವ ಪದ್ಧತಿ ಇನ್ನೂ ಅನೇಕ ದೇವಸ್ಥಾನಗಳಲ್ಲಿ ಜಾರಿಯಲ್ಲಿ ಇರಬಹುದು. ಆದರೆ ಹಿಂದುಗಳನ್ನು ಸಂಘಟಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಹಿಂದು ಮಠಾಧೀಶರಲ್ಲಿ ಪ್ರಮುಖರೆನಿಸಿಕೊಂಡಿರುವ ಪೇಜಾವರ ಶ್ರೀಗಳ ಸನ್ನಿಧಿಯಲ್ಲೇ ನಡೆಯುತ್ತಿರುವ ಕಾನೂನುಬಾಹಿರ ಪಂಕ್ತಿ ಭೇದವನ್ನು ಪ್ರಶ್ನೆ ಮಾಡದೆ ಬೇರೆ ಕಡೆ ಮಾಡುವುದು ಸರಿಯಾಗದು. ಉಡುಪಿಯಲ್ಲಿ ಈ ಹೀನ ಪದ್ಧತಿಯನ್ನು ನಿಲ್ಲಿಸಲು ಪೇಜಾವರರು ಸಹಕರಿಸಿದರೆ ಇನ್ನುಳಿದ ಕಡೆಗಳಲ್ಲಿ ಅದು ಸಹಜವಾಗಿ ಅಂತ್ಯಗೊಳ್ಳುವುದು.

ಉಡುಪಿ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನವೂ ಇದೆ ಎಂದು ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಕಲ್ಪಿಸಲಾಗಿರುವ ಪ್ರತ್ಯೇಕ ಪಂಕ್ತಿ ಪದ್ಧತಿಯನ್ನು ಪೇಜಾವರರು ಬೆಂಬಲಿಸುತ್ತಿರುವುದರಿಂದ ಅವರೇ ಹೋರಾಟದ ಟಾರ್ಗೆಟ್ ಆಗುತ್ತಾರೆ. ನಂಬಿಕೆಗಳ ಆಧಾರದಲ್ಲಿ ದೇವಸ್ಥಾನದಲ್ಲಿ ಜಾತಿ ತಾರತಮ್ಯವನ್ನು ಬೆಂಬಲಿಸುವುದು ಕಾನೂನಿನ ದೃಷ್ಟಿಯಿಂದ ಶಿಕ್ಷಾರ್ಹ ಅಪರಾಧವಾಗಿದೆ ಮಾತ್ರವಲ್ಲ ಮನುಷ್ಯರಲ್ಲಿ ಕೆಲವರು ಹುಟ್ಟಿನಿಂದ ಶ್ರೇಷ್ಠ ಎಂಬ ಅಮಾನವೀಯ ಸಿದ್ಧಾಂತದ ಪುಷ್ಟೀಕರಣವಾಗಿದೆ.

ಅಷ್ಟ ಮಠಾಧೀಶರು ಪೂಜಿಸುವ ಶ್ರೀ ಕೃಷ್ಣನ ದೇವಸ್ಥಾನದೊಳಗೆ ಬ್ರಾಹ್ಮಣೇತರರಿಗೆ ಪ್ರವೇಶ ನಿರಾಕರಿಸಲಾಗುತಿತ್ತು ಎಂಬುದಕ್ಕೆ ಕನಕದಾಸರ ಕುರಿತಾದ ಪ್ರಚಲಿತ ಕಥೆಯೇ ಸಾಕ್ಷಿಯಾಗಿದೆ. "ಕುಲ ಕುಲ ಕುಲವೆಂದು ಏಕೆ ಬಡಿದಾಡುವಿರಿ? ನಿಮ್ಮ ಕುಲದ ಮೂಲವನ್ನೇನಾದರು ಬಲ್ಲಿರಾ, ಬಲ್ಲಿರಾ?" ಎಂದು ಉಡುಪಿಯ ಬ್ರಾಹ್ಮಣರನ್ನು ಕುರಿತಾಗಿಯೇ ಕನಕದಾಸರು ಹಾಡಿದ್ದಿರಬೇಕಲ್ಲವೆ?. ಇಂದು ಉಡುಪಿ ಶ್ರೀ ಕೃಷ್ಣ ದೇವಸ್ಥಾನದೊಳಗೆ ಎಲ್ಲಾ ಜಾತಿಯವರಿಗೂ ಪ್ರವೇಶ ಇರುವುದಾಗಲಿ, ಸಹ ಪಂಕ್ತಿ ಭೋಜನ ವ್ಯವಸ್ಥೆ ಇರುವುದಾಗಲಿ ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಆದರೆ ಸಹ ಪಂಕ್ತಿಯಲ್ಲಿ ಕುಳಿತು ಊಟ ಮಾಡಲು ಬಯಸದ ಬ್ರಾಹ್ಮಣರಿಗಾಗಿ ಪ್ರತ್ಯೇಕ ಪಂಕ್ತಿ ವ್ಯವಸ್ಥೆ ಮಾಡಿಕೊಂಡು ಬರಲಾಗಿರುವುದು ತಪ್ಪು ಎಂಬುದು ಶ್ರೀ ವಿಶ್ವೇಶತೀರ್ಥರಿಗೆ ಒಪ್ಪಿಕೊಳ್ಳಲಾಗುತ್ತಿಲ್ಲ. ಇದು ಹಿಂದು ಸಮಾಜದ ದುರಂತ. ಹಿಂದು, ನಾವೆಲ್ಲರು ಒಂದು ಎನ್ನುವ ನುಡಿಗೂ ನಡೆಗೂ ಎಷ್ಟೊಂದು ಅಂತರ. ಅದಕ್ಕಾಗಿ ಅಲ್ಲವೆ ಬಸವಣ್ಣನವರು ಬ್ರಾಹ್ಮಣ್ಯವನ್ನು ತ್ಯಜಿಸಿದ್ದು! ಅದಕ್ಕಾಗಿ ಅಲ್ಲವೇ ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತ್ಯಜಿಸಿ ಬೌಧ ಧರ್ಮವನ್ನು ಅಪ್ಪಿಕೊಂಡದ್ದು! ಸಹ ಪಂಕ್ತಿ ಭೋಜನವನ್ನು ಮಾಡಲು ಒಪ್ಪದ ಬ್ರಾಹ್ಮಣರನ್ನು ಊಟ ಮಾಡಿಸದೆ ಉಪವಾಸ ಕಳುಹಿಸಬೇಕೆ ಎಂದು ಪೇಜಾವರರು ಪ್ರಶ್ನಿಸಿದ್ದಾರೆ. ಹೌದು ಎನ್ನುವುದೇ ಅವರ ಪ್ರಶ್ನೆಗೆ ಉತ್ತರ – ಅದು ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಪ್ರವೃತ್ತಿ. ದೇಶದ ಸಂವಿಧಾನವೇ ಈ ನೆಲದ ಮೂಲಭೂತ ಕಾನೂನು. ಅದರ ವಿರುದ್ಧದ ನಂಬಿಕೆ ನಡುವಳಿಕೆಗಳಿಗೆ ಅಸ್ಪದ ಸಲ್ಲದು. ತನ್ನ ಸ್ವಂತ ಮನೆಯೊಳಗೆ ಜಾತಿ ತಾರತಮ್ಯ ಎಸಗುವುದು ಸಹ ಕಾನೂನುಬಾಹಿರ ಆಗಿರುವಾಗ ಸಾರ್ವಜನಿಕ ಸ್ಥಳದಲ್ಲಿ, ಉಚಿತ ಊಟ ಬಡಿಸುವ ಪಂಕ್ತಿಯಲ್ಲಿ ಜಾತಿ ತಾರತಮ್ಯ ಎಸಗುವುದು. ಮತ್ತು ಅದನ್ನು ಪೇಜಾವರರಂತವರು ಸಮರ್ಥಿಸುವುದು ಶಿಕ್ಷಾರ್ಹ ಅಪರಾಧವಾಗಿದೆ.

ಮಡೆಸ್ನಾನದ ಪ್ರಶ್ನೆಯಲ್ಲಿಯೂ ಪೇಜಾವರ ಮಠಾಧೀಶರು ಕೇಂದ್ರ ಬಿಂದುವಾಗಿದ್ದಾರೆ. ಏಕೆಂದರೆ ಸರ್ಕಾರಕ್ಕೆ ಮಡೆಸ್ನಾನದ ಬದಲು ಎಡೆಸ್ನಾನದ ಸಲಹೆ ಕೊಟ್ಟವರೇ ಅವರು. ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿರುವ ಮಡೆಸ್ನಾನ ಪದ್ಧತಿಯನ್ನು ತಾವೂ ವಿರೋಧಿಸುವುದಾಗಿ ಹೇಳುತ್ತಿರುವ ಅವರು ಪರ್ಯಾಯವಾಗಿ ನೀಡಿದ ಸಲಹೆ ಮೂಲ ಸಮಸ್ಯೆಗಿಂತ ಕೆಟ್ಟದಾದ ಪರಿಹಾರವಾಗಿದೆ. ಬ್ರಾಹ್ಮಣರು ಉಂಡ ಎಲೆಗಳ ಮೇಲೆ ಉಳಿಯುವ ಎಂಜಲಿನ ಮೇಲೆ ಕೆಳ ಜಾತಿಗಳಿಗೆ ಸೇರಿದವರು ಉರುಳಾಡಿದರೆ ಅವರ ದೋಷ ಪರಿಹಾರವಾಗುತ್ತದೆ ಮತ್ತು ಅವರ ಚರ್ಮರೋಗ ಗುಣವಾಗುತ್ತದೆ ಎಂಬುದು ಗೊಡ್ಡು ಮೂಢನಂಬಿಕೆ ಎಂಬುದನ್ನು ಶ್ರೀಗಳು ಗಂಟಾಘೋಷವಾಗಿ ಸಾರಬೇಕು. ಅದರ

ಪುಟ 15 ಕ್ಕೆ

ಮಡೆಸ್ನಾನ ಮತ್ತು ಪಂಕ್ತಿ ಭೇದದ ವಿರುದ್ಧ ಜನಾಂದೋಲನ

ಪಾದಯಾತ್ರೆಗೆ ಅಪೂರ್ವ ಜನಸ್ಪಂದನ –ವಸಂತ ಆಚಾರಿ

ಜಾತಿ ತಾರತಮ್ಯಗಳ ಮಡೆಸ್ನಾನ ಪದ್ಧತಿ ಮತ್ತು ಪಂಕ್ತಿಬೇಧಗಳ ವಿರುದ್ಧ ಜನಾಂದೋಲನ ಸಾರಿರುವ ಸಿಪಿಐ(ಎಂ) ಪಕ್ಷದ ಡಿಸೆಂಬರ್ 27ರ ಪ್ರತಿಭಟನೆಗೆ ಮೊದಲು ಕುಕ್ಕೆ ಸುಬ್ರಮಣ್ಯ ಮತ್ತು ಬೈಂದೂರಿನಿಂದ ನಡೆಸಿದ ಜಾಥಾ ಮತ್ತು ಪಾದಯಾತ್ರೆಗೆ ಅಪೂರ್ವ ಸ್ಪಂದನ ದೊರೆತಿದೆ. ಮಂಗಳೂರಿನಿಂದ ಹೊರಟ ಜಾಥಾದ ಅನುಭವಗಳನ್ನು ಹಂಚಿಕೊಂಡಿದ್ದಾರೆ ಮಂಗಳೂರಿನಿಂದ ಹೊರಟ ಜಾಥಾದ ನೇತೃತ್ವ ವಹಿಸಿದ್ದ ಸಂಗಾತಿ ವಸಂತ ಆಚಾರಿಯವರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಮಂಗಳೂರು ಮುಂದುಗಡೆ ದಿನಾಂಕ 24-12-2012ರಂದು ನಿಡುಮಾಮಿಡಿ ಸ್ವಾಮೀಜಿಯವರ ಭಾಷಣದ ಪ್ರಖರತೆಯೊಂದಿಗೆ ಬೆಳಿಗ್ಗೆ 11.05ಕ್ಕೆ ಪಾದಯಾತ್ರೆ ಹೆಜ್ಜೆ ಆರಂಭವಾಯಿತು. ನಿಡುಮಾಮಿಡಿ ಸ್ವಾಮೀಜಿ ಸೇರಿಕೊಂಡು ಸಿಪಿಐ(ಎಂ) ಪಕ್ಷದ ಮುಂದಾಳಗಳಾದ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ.ವಿ.ಶ್ರೀನಿವಾಸ್ ರಾವ್, ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಬಿ.ಮಾಧವ, ಕಾಂ.ಕೆ.ಆರ್.ಶ್ರೀಯಾನ್, ಕಾಂ.ಮಾರುತಿ ಮಾನ್ಪಡೆ ಸಹಿತ ಮುಂದಾಳುಗಳು ತುಸುದೂರ ತನಕ ಹೆಜ್ಜೆ ಹಾಕುತ್ತಾ ಕಾಲ್ನಡಿಗೆ ಜಾಥಾ ಸಂಗಾತಿಗಳನ್ನು ಬೀಳ್ಕೊಟ್ಟರು.

ಅಲ್ಲಲ್ಲಿ ವ್ಯಾಪಕ ಸ್ವಾಗತ:

ತಮ್ಮ ತಮ್ಮ ಸಂಘಟನೆಗಳ ಬ್ಯಾನರ್, ಘೋಷಣೆ, ಬಾವುಟವನ್ನು ಹಿಡಿದು ಪಟಾಕಿ ಸಿಡಿಸಿ, ಹೂ ಎಸಳುಗಳನ್ನು ಎಸೆಯುವ ಮುಖಾಂತರ ನೀಡಲಾದ ಸ್ವಾಗತದಿಂದ ಪಾದಯಾತ್ರೆಯಲ್ಲಿ ಭಾಗವಹಿಸಿದ ಹಿರಿಯ-ಕಿರಿಯ ಸಂಗಾತಿಗಳಿಗೆ ಇನ್ನಷ್ಟು ಸ್ಫೂರ್ತಿಯನ್ನು ನೀಡಿತು. ಬೀದಿ ಬದಿ ವ್ಯಾಪಾರಿಗಳ ಸಂಘ, ಬಂದರು ಶ್ರಮಿಕ ಸಂಘದ ಕಾರ್ಯಕರ್ತರು (2 ಬಾಕ್ಸ್ ಬೆಲ್ಲವನ್ನು ನೀಡಿದರು), ಡಿವೈಎಫ್ಐ ಉರ್ವಸ್ಟೋರ್, ಪಂಜಿನ ಮೊಗರು, ಕೋಲಾರ ಚೌಕಿ, ಕುಳಾಯಿ ಘಟಕದ ಸಂಗಾತಿಗಳು ಕಟ್ಟಡ ಕಾರ್ಮಿಕರ ಸಂಘದ ಸಂಗಾತಿಗಳು ಅಲ್ಲಲ್ಲಿ ಸ್ವಾಗತ ಕೋರಿ ಘೋಷಣೆ ಹಾಕಿದರು. ವಿಶೇಷವಾಗಿ ಎಲ್ಐಸಿ ಉಡುಪಿ ವಿಭಾಗ ಪರಿಶಿಷ್ಟ ಜಾತಿ-ಪಂಗಡದ ಪ್ರಧಾನ ಕಾರ್ಯದರ್ಶಿ ಹರಿಶ್ಚಂದ್ರ ಮತ್ತು ಗೆಳೆಯರು ಸ್ವಾಗತಿಸಿ ಸಹಾಯ ನೀಡಿ ತಾವು ಈ ಹೋರಾಟದಲ್ಲಿ ಇದ್ದೇವೆ ಎಂದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ(ಪ್ರೊ. ಕೃಷ್ಣಪ್ಪ ಸಮಿತಿ) ಮುಂದಾಳುಗಳು ಪಡುಬಿದ್ರಿ ದಾಟಿದ ಕಾಲ್ನಡಿಗೆ ಜಾಥಾವನ್ನು ತಮ್ಮ ಬ್ಯಾನರು ಹಿಡಿದು ಸ್ವಾಗತಿಸಿದರು. ದಣಿದಿದ್ದ ಸಂಗಾತಿಗಳಿಗೆ ಶರಬತ್ತು ವಿತರಿಸಿದರು. ಪಟಾಕಿ ಸಿಡಿಸಿದರು. ಜಾಥಾ ತಂಡದ ನಾಯಕ ವಸಂತ ಆಚಾರಿಯವರಿಗೆ ಹೂಮಾಲೆ ಹಾಕಿ ಗೌರವಿಸಿದರು. ತಮ್ಮ ಸಂಘಟನೆಯಿಂದ ಬೆಂಬಲಿಸಿ ಮಾತನಾಡುತ್ತಾ ಈ ಅನಿಷ್ಟ ಪದ್ಧತಿ ನಿಲ್ಲುವ ತನಕ ಹೋರಾಟ ನಡೆಯಬೇಕು ಎಂದು ಆಶಿಸಿದರು. ಹಿಂದುಳಿದ ಜಾತಿಗಳ ಸಂಘಟನೆಗಳ ವಿವಿಧ ವಿಭಾಗದ ಮುಂದಾಳುಗಳು ಅಲ್ಲಲ್ಲಿ ಭಾಗವಹಿಸಿ ತಮ್ಮ ಬೆಂಬಲವಿದೆ ಎಂದು ಶುಭ ಕೋರಿದರು.

ಮಾಧ್ಯಮದಲ್ಲಿ ಚರ್ಚೆ :

ಡಿಸೆಂಬರ್ 24, 25, 26, 27 ಡಿಸೆಂಬರ್ 2012ರ ತನಕ ಪತ್ರಿಕೆಗಳಲ್ಲಿ ದಿನಾ ಚರ್ಚೆ ನಡೆಯಿತು. ಜಾಥಾವನ್ನು ಅಲ್ಲಲ್ಲಿ ಸ್ವಾಗತಿಸಿ ನಡೆದ ಸಭೆಗಳ ವರದಿ ಪತ್ರಿಕೆಯಲ್ಲಿ ಮತ್ತು ಟಿ.ವಿ.ಚಾನಲ್‌ಗಳಲ್ಲಿ ಬಿತ್ತರಿಸಿದ್ದು ವ್ಯಾಪಕ ಪ್ರಚಾರಕ್ಕೆ ಅವಕಾಶ ನೀಡಿತು. ಇದರಿಂದಾಗಿಯೇ ಪೇಜಾವರ ಮಠಾಧೀಶರು ಉಡುಪಿಯ 27-12-2012ರ ಪ್ರತಿಭಟನೆಯ ಮುನ್ನಾದಿನ ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರ ನಿಲುವನ್ನು ಸ್ಪಷ್ಟ ಪಡಿಸುವುದು ಅನಿವಾರ್ಯವಾಯಿತು.



ಕಾಲ್ನಡಿಗೆ ಜಾಥಾ ಶ್ರಮಿಸಿದ ದೂರ :

ದಿನಾ ಸರಾಸರಿ 17 ಕಿ.ಮೀಟರ್ ಪಾದಯಾತ್ರೆ ಸಾಗಿತ್ತು. 60 ಕಿ.ಮಿ. ಸಾಗಿ ಉಡುಪಿಯ ಪ್ರತಿಭಟನೆ ನಡೆಯುವ ಅಜ್ಜರ ಕಾಡು ಮೈದಾನಕ್ಕೆ ಸೇರುವಾಗ ವಿಶೇಷ ಸಾಧನೆ ಮಾಡಿದ ಹುರುಪು ಪಾದಯಾತ್ರಿಗಳಲ್ಲಿ ಇತ್ತು. ದ.ಕ ಜಿಲ್ಲೆಯ ಮುಲ್ಕಿಯಿಂದ ಉಡುಪಿಯ ತನಕ ಸಂಘಟನೆಯ ಶಕ್ತಿ ಕಡಿಮೆ ಇದ್ದರೂ ಅವಿಭಜಿತ ಕಮ್ಯೂನಿಷ್ಟ್ ಚಳುವಳಿಯಲ್ಲಿ ದುಡಿದ ಹಿರಿಯ ಸಂಗಾತಿಗಳ ಸಹಕಾರ ಖಂಡಿತ ಕೊಂಡಾಡಬೇಕಾದುದು. ಪಡುಬಿದ್ರಿಯ ರಘುವಣ್ಣ, ರಾಮ ಕುಂದಾರ್, ಎಲ್ಐಸಿ ನಿವೃತ್ತ ಸಂಗಾತಿ ರಮೇಶ್‌ರವರ ಪರಿಶ್ರಮದಿಂದಾಗಿ ಎರಡನೇ ದಿನ ಪಾದಯಾತ್ರೆಯ ಸಂಗಾತಿಗಳು ರಾತ್ರಿ ತಂಗಲು, ಸ್ನಾನ ಇತ್ಯಾದಿ ವ್ಯವಸ್ಥೆ ಆಗಿರುವುದು ಈ ಸಂಗಾತಿಗಳ ಪ್ರಾಮಾಣಿಕ ಪ್ರಯತ್ನವೇ ಸರಿ.(ಗುರು ನಾರಾಯಣ ಸಭಾಂಗಣ). ಮೊದಲನೇ ದಿನ ಮಂಗಳೂರು ತಾಲ್ಲೂಕಿನ ಕುಳಾಯಿಯ ಸಿಪಿಐ(ಎಂ) ಪಕ್ಷ ಹಾಗೂ ಡಿವೈಎಫ್ಐ ಸಂಗಾತಿಗಳ ವಿಶೇಷ ಪ್ರಯತ್ನದಿಂದ ಸಾಧ್ಯವಾಯಿತು.(ಕುಲಾಲ ಸಂಘ, ತಡಂಬೈಲು ಸಭಾಂಗಣ) ಮೂರನೇ ದಿನ ರಾತ್ರಿ ತಂಗಲು ವ್ಯವಸ್ಥೆ ಉಡುಪಿಯ ವಿದ್ಯಾರಾಜ್ ಸಂಗಾತಿಯ ವಿಶೇಷ ಪ್ರಯತ್ನದಿಂದ ಸಾಧ್ಯವಾಗಿರುವುದು.

ಊಟೋಪಚಾರ:

ಜಾಥಾ ತಂಡದ ಮುಂದಾಳುಗಳಾದ ಡಿವೈಎಫ್ಐ ಮುಂದಾಳು ಮುನೀರ್ ಕಾಟಿಪಳ್ಳ ಮತ್ತು ಯೋಗೀಶ್ ಜಪ್ಪಿನ ಮೊಗರುರವರುಗಳ ದಿಟ್ಟ ನಾಯಕತ್ವದಲ್ಲಿ ಹಳೆಯಂಗಡಿ ಪ್ರದೇಶದಲ್ಲಿ ಮದ್ಯಾಹ್ನ, ರಾತ್ರಿಗೆ ಊಟ ಹಾಗೂ 3 ಹೊತ್ತಿನ ಚಹಾ ತಿಂಡಿ ತಯಾರಿಸಿ ಅವನ್ನು ಡಿವೈಎಫ್ಐ ಮುಂದಾಳುಗೆಳಾದ ಶ್ರೀನಾಥ ಕಾಟಿಪಳ್ಳ, ಸಂತೋಷ ಕುಳಾಯಿ ಇಬ್ಬರು ಸಂಗಾತಿಗಳು ನಿಗದಿತ ಸಮಯದಲ್ಲಿ ನಿಗದಿತ ಸ್ಥಳಕ್ಕೆ ಆಹಾರ, ಕುಡಿಯುವ ನೀರು ವಿತರಿಸಿದ್ದು ಜಾಥಾ ತಂಡದ ಎಲ್ಲಾ ಸಂಗಾತಿ ಗಳು ಆರೋಗ್ಯಯುತವಾಗಿ ಗುರಿಯನ್ನು ಕ್ರಮಿಸಲು ಸಾಧ್ಯ ಆಯಿತು.

ಮೊದಲನೇ ದಿನದ ಊಟೋಪಚಾರ ಸಿಪಿಐ(ಎಂ) ಪಕ್ಷದ ಪಂಜಿನ ಮೊಗರು ಸಂಗಾತಿಗಳು ನಿರ್ವಹಿಸಿದ್ದರು.

ಹಿರಿಯ ಸಂಗಾತಿಗಳಾದ ಯು.ಬಿ.ಲೋಕಯ್ಯ 70 ವರ್ಷ, ಗಂಗಯ್ಯ ಅಮೀನ್ (65ವರ್ಷ) ಬಾಬು ಪೂಜಾರಿ (65ವರ್ಷ) ಹಾಗೂ ಕಿರಿಯ ಸಂಗಾತಿಗಳಾದ ವಿನೂಪ್, ರಕ್ಷಾ, ತಸ್ಲೀಮ್ ಪಾದಯಾತ್ರೆಯಲ್ಲಿ ದಣಿವು ರಹಿತವಾಗಿ ಹೆಜ್ಜೆ ಹಾಕಿದ್ದು ಎಲ್ಲರಿಗೂ ಸ್ಫೂರ್ತಿಯಾಗಿತ್ತು. ನಾಲ್ಕುದಿನ ನಡೆದವರು 65 ಮಂದಿ. 3 ದಿನ ನಡೆದವರು 12 ಮಂದಿ. 16 ಮಹಿಳಾ ಸಂಗಾತಿಗಳು ಪಾದಯಾತ್ರೆಯಲ್ಲಿ ಭಾಗವಹಿಸಿದ್ದು ವಿಶೇಷ. ಒಟ್ಟು 121 ಮಂದಿ ಸಂಗಾತಿಗಳು ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ. (ಪ್ರತಿದಿನ 75 ಜನಕ್ಕಿಂತಲೂ ಹೆಚ್ಚಿಗೆ ಸಂಗಾತಿಗಳು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

ಅಲ್ಲಲ್ಲಿ ಸಾರ್ವಜನಿಕ ಸಭೆ:

ಪಾದಯಾತ್ರೆಯುದ್ದಕ್ಕೂ ನಿರ್ದಿಷ್ಟ ಸ್ಥಳಗಳಲ್ಲಿ ಸಾರ್ವಜನಿಕ ಸಭೆ, ವೈಜ್ಞಾನಿಕ ಮನೋಭಾವನೆಯನ್ನು ಬಿತ್ತರಿಸುವ ಹಾಡು ಹಾಡಲಾಯಿತು. ಸಂಗಾತಿ ಈಶ್ವರಿ ಬೆಳ್ತಂಗಡಿ ತಂಡದವರು ಹಾಡೊಂದನ್ನು ರಚಿಸಿ ಹಾಡಿದ್ದರು. ಅಲ್ಲಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಪಕ್ಷದ ಮುಂದಾಳುಗಳಾದ ವಸಂತ ಆಚಾರಿ, ಭರತ್‌ರಾಜ್ ಬೆಂಗಳೂರು, ಗೋಪಾಲಕೃಷ್ಣ ಅರಳಹಳ್ಳಿ,ಬೆಂಗಳೂರು, ಜೆ.ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ಬಿ.ಎಂ.ಭಟ್, ಮಾರುತಿ ಮಾನ್ಪಡೆಯವರುಗಳು ಭಾಷಣ ಮಾಡಿ ಜಾಥಾದ ವಿಷಯವನ್ನು ಮನದಟ್ಟಾಗುವಂತೆ ಜನತೆಯ ಮುಂದೆ ಇಟ್ಟರು. ಸಾರ್ವಜನಿಕರಿಗೆ ವ್ಯಾಪಕವಾಗಿ ಕರಪತ್ರ ಹಂಚಲಾಯಿತು. ಮೀನುಗಾರ ಮಹಿಳೆಯರು, ಹಿಂದುಳಿದ ವರ್ಗದ ಬಿಲ್ಲವ, ಕುಲಾಲ್, ಕೊಬ್ಬರಿ ಸಮುದಾಯದ ನಾಯಕರು, ದಲಿತ ನೌಕರರು ಈ ಹೋರಾಟಕ್ಕೆ ಮನಬಿಚ್ಚಿ ಮಾತನಾಡಿ ಬೆಂಬಲ ಸೂಚಿಸಿದರು. ನಾಡಿನ ಹಿರಿಯ ಜನಪರ ಸಾಹಿತಿ ಪ್ರೊ.ಅಮೃತ ಸೋಮೇಶ್ವರರವರು ಮಡೆಸ್ನಾನ ಮತ್ತು ಪಂಕ್ತಿಭೇದದ ವಿರುದ್ಧ 'ಕರಾವಳಿ ಅಲೆ' ಪತ್ರಿಕೆಯಲ್ಲಿ ಅಂಕಣ ಬರೆದರು. ಕಾಂಗ್ರೆಸ್ ಹಿರಿಯ ನಾಯಕ ಬಿ.ಜನಾರ್ಧನ ಪೂಜಾರಿ ಸಾಮಾಜಿಕ ತಾರತಮ್ಯದ ವಿಷಯವನ್ನು ದಾರಿ ತಪ್ಪಿಸಲು ಪತ್ರಿಕಾಗೋಷ್ಠಿಯಲ್ಲಿ ಮಡೆಸ್ನಾನದ ವಿರುದ್ಧ ಕುದ್ರೋಳಿ ದೇವಸ್ಥಾನದಲ್ಲಿ ಉರುಳು ಸೇವೆ ಮಾಡಲಾಗುವುದೆಂದರು. ಪ್ರೊ.ಅಮೃತ ಸೋಮೇಶ್ವರರವರು ಬಿ.ಜನಾರ್ಧನ ಪೂಜಾರಿಯವರ ಹೇಳಿಕೆಗೆ ತೀವ್ರ ವಿರೋಧದ ಪ್ರತಿಕ್ರಿಯೆಯನ್ನು ನೀಡಿದರು(ಪ್ರಜಾವಾಣಿ ... 1-2013). ಈ ರೀತಿ ಮಂಗಳೂರಿನಿಂದ ಆರಂಭವಾದ ಜಾಥಾ ಕೊನೆ ಮುಟ್ಟುವಾಗ ಅನಿಷ್ಟ ಪದ್ಧತಿ ಮಡೆಸ್ನಾನ ಮತ್ತು ಪಂಕ್ತಿಭೇದದ ವಿರುದ್ಧ ಬೃಹತ್ ಜನಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು. 27-12-2012ರಂದು ಎರಡು ಪಾದಯಾತ್ರೆಗಳು ಕೂಡಿ ಸಭೆ ನಡೆದಾಗ ಮಾತನಾಡುತ್ತಾ ಹಿರಿಯ ಸಂಗಾತಿ ಕಾಂ.ಬಿ.ಲೋಕಯ್ಯ ಹೇಳಿದ್ದು ಹೀಗೆ-

"ನಾನು ಬೇರೆ ಬೇರೆ ವಿಷಯದ ಮೇಲೆ ಹಿಂದೆಯೂ ನಡೆದ ಕಾಲ್ನಡಿಗೆ ಜಾಥಾದಲ್ಲಿ ಭಾಗವಹಿಸಿದ್ದೆ. ಅದು ವಿಷಯ ಬೇರೆ. ಆದರೆ ಈಗಿನ ಪಾದಯಾತ್ರೆಯ ವಿಷಯ ಬಹಳ ಮಹತ್ವದ್ದು. ಅನಿಷ್ಠ ಪದ್ಧತಿ ನಿಷೇಧ ಆಗಬೇಕೆಂದು ಸಿಪಿಐ(ಎಂ) ಪಕ್ಷದ ಕರೆ. ಸಾಮಾಜಿಕ ಪ್ರಶ್ನೆಯನ್ನು ಕೈಗೆತ್ತಿ ನಡೆಯುವ ಈ ಪಾದಯಾತ್ರೆಯಲ್ಲಿ ನನ್ನ ಕಾಲು ಮುರಿದರೂ ಚಿಂತೆ ಇಲ್ಲ. ಇಂದಲ್ಲ ನಾಳೆ ಈ ಅನಿಷ್ಠ ಪದ್ಧತಿ ನಿಲ್ಲಿಯೇ ನಿಲ್ಲುತ್ತದೆ".

ತುಮಕೂರು ಸಿಐಟಿಯು ಸಮ್ಮೇಳನ

ಸೇವಾ ಹಿರಿತನ ಹಾಗೂ 6 ತಿಂಗಳಿಗೊಮ್ಮೆ ತುಟ್ಟಿಭತ್ಯೆಯೊಂದಿಗೆ ಕನಿಷ್ಟ 10000/- ಕೂಲಿ ನಿಗ್ದಿಗೆ ಆಗ್ರಹ

ಕಾರ್ಮಿಕರ ಸೇವಾ ಹಿರಿತನವನ್ನು ಪರಿಗಣಿಸಿ ಕೊಂಡು ಹಾಗೂ 6 ತಿಂಗಳಿಗೊಮ್ಮೆ ತುಟ್ಟಿಭತ್ಯೆಯನ್ನು ನೀಡುವ ತಿದ್ದುಪಡಿಗಳನ್ನೊಳಗೊಂಡ ಕನಿಷ್ಟ ಕೂಲಿಯನ್ನು ಮಾಸಿಕ 10000 ರೂಪಾಯಿ ನಿಗದಿಗೊಳಿಸುವಂತೆ ಸಿಐಟಿಯುನ ತುಮಕೂರು ಜಿಲ್ಲಾ 4ನೇ ಸಿಐಟಿಯು ಸಮ್ಮೇಳನದ ರಾಜ್ಯ ಕೇಂದ್ರ ಸರ್ಕಾರದ ಒಕ್ಕೋರಲಿನಿಂದ ಆಗ್ರಹಿಸಿದೆ.

ದಿನಾಂಕ 15, 16, ಡಿಸೆಂಬರ್ 2012ರಂದು ಸಲಿಮಾಭಿ ಸಭಾಂಗಣ ಸಿ.ಎನ್.ಭಾರತಿ, ಕಾಳೇಶ್ವರಿ ಮುಟ್ಟರಾಜು ನಗರ, ಕಾಂ॥ ಪೈಂಟರ್ ಕಾಟೇಶ್‌ದ್ವಾರದಲ್ಲಿ ನಡೆದ 4ನೇ ಜಿಲ್ಲಾ ಸಮ್ಮೇಳನವು ರಾಜ್ಯ ಕೇಂದ್ರ ಸರ್ಕಾರಗಳು ಕನಿಷ್ಟ ಕೂಲಿಯನ್ನು ನಿಗದಿಗೊಳಿಸುವಲ್ಲಿ ಹಾಗೂ ಜಾರಿಗೊಳಿಸುವಲ್ಲಿ ತಾಳಿರುವ ನಿರ್ಲಕ್ಷ್ಯ ದೋರಣೆಯನ್ನು ಖಂಡಿಸಿತು.

ವಿಪರೀತ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನ ಸಾಮಾನ್ಯರಿಗೆ, ದುಡಿಯುವ ಜನರಿಗೆ ಸರ್ಕಾರಗಳು ಪರಿಹಾರ ನೀಡುವ ಬದಲು ಮತ್ತಷ್ಟು ಸಂಕಷ್ಟಗಳನ್ನು ಹೆಚ್ಚಿಸುತ್ತಿವೆ ಎಂದು ಸಮ್ಮೇಳನದಲ್ಲಿ ಅಭಿಪ್ರಾಯಪಟ್ಟಿದೆ.

ಮಾದರಿ ಮಾಲೀಕನಾಗಬೇಕಾದ ಸರ್ಕಾರಗಳು ಶಿಕ್ಷಣ ಇಲಾಖೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಆರೋಗ್ಯ ಇಲಾಖೆಯಲ್ಲಿ ನಿಗಮ ಮಂಡಳಿಗಳಲ್ಲಿ ಸ್ಥಳೀಯ ಸಂಸ್ಥೆಗಳಾದ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿಪರೀತ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಂಡು ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದೆ ಎಂದರು ಸಮ್ಮೇಳನದಲ್ಲಿ ಆಪಾಧಿಸಲಾಯಿತು. ಈ ಕೂಡಲೇ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಖಾಸಗಿ ಕೈಗಾರಿಕೆಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಗೊಳಿಸಿ ಉದ್ಯೋಗ ಭದ್ರತೆ ಹಾಗೂ ಸಾಮಾಜಿಕ ಭದ್ರತೆಯ ಅಂಶಗಳನ್ನು ಜಾರಿಗೊಳಿಸಲು ಸರ್ಕಾರ ಮುಂದಾಗ ಬೇಕೆಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.

ಗೌರವಧನ ಆಧಾರಿತ ಕೆಲಸಗಳಲ್ಲಿ ಅಂಗನವಾಡಿ ನೌಕರರಿಗೆ ಬಿಸಿಯೂಟ ಕೆಲಸಗಾರರಿಗೆ ಆಶಾ ಕೆಲಸಗಾರರಿಗೆ ವಿಪರೀತ ಶೋಷಣೆಯಲ್ಲಿ ದುಡಿಸಿಕೊಳ್ಳುತ್ತಿರುವ ಕ್ರಮವನ್ನು ಕೈಬಿಟ್ಟು ಅವರ ಸೇವೆಗಳನ್ನು ಖಾಯಂಗೊಳಿಸುವಂತೆ ಸಮ್ಮೇಳನವು ಒತ್ತಾಯಿಸಿತು.

ಜಿಲ್ಲೆಯಲ್ಲಿ ತೀವ್ರ ಬರಕ್ಕೆ ಈಡಾಗಿರುವ ಪಾವಗಡ, ಮಧುಗಿರಿ, ಕೊರಟಗೆರೆ, ಶಿರಾ, ಗುಬ್ಬಿಯ ಕೆಲವು ಭಾಗಗಳು ಹಾಗೂ ಚಿ.ನಾ.ಹಳ್ಳಿಯ ಭಾಗಗಳಲ್ಲಿ ಕುಡಿಯುವ ನೀರಿಗೆ



ತೀವ್ರತರವಾಗಿ ತೊಂದರೆ ಉಂಟಾಗಿದ್ದು ಇದುವರೆಗೂ ನಮ್ಮನಾಳಿದ ಸರ್ಕಾರಗಳು ನೀರಾವರಿ ಯೋಜನೆಗಳಿಗೆ ಒತ್ತುಕೊಡದೆ ಇರುವುದನ್ನು ಖಂಡಿಸಿರುವ ಸಮ್ಮೇಳನ ಜಿಲ್ಲೆಯ ಸಮಗ್ರ ಹಾಗೂ ಶಾಶ್ವತ ನೀರಾವರಿಗಾಗಿ ಪರಮ ಶಿವಯ್ಯನವರ ವರದಿಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿದ ನಿರ್ಣಯವನ್ನು ಸರ್ವಾನುಮತದಿಂದ ಕೈಗೊಳ್ಳಲಾಯಿತು

ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದುಡಿಯುತ್ತಿರುವ ಗ್ರಾಮೀಣ ಬಡ ಕೃಷಿ ಕೂಲಿಕಾರರ ಸಮಸ್ಯೆಗಳು ಹೆಚ್ಚುತ್ತಿದ್ದು ಅವರಿಗೆ ನಿಗದಿತ ಕೂಲಿಯು ಕಾಲಕಾಲಕ್ಕೆ ಸಿಗದೆ ಮಧ್ಯವರ್ತಿಗಳ ಕೈಸೇರುತ್ತಿದ್ದು ಯಂತ್ರಗಳ ಬಳಕೆಯು ಹಾಗೂ ವಿಫರೀತ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿದ ಸಮ್ಮೇಳನ ಸರ್ಕಾರ ಈ ನ್ಯೂನತೆಗಳನ್ನು ಸರಿಪಡಿಸದೆ ಇದ್ದಲ್ಲಿ ಕೃಷಿ ಕೂಲಿಕಾರರೊಂದಿಗೆ ಹೋರಾಟಕ್ಕೆ ಇಳಿಯಲು ನಿರ್ಧರಿಸಿದೆ.

ಸಮ್ಮೇಳನದಲ್ಲಿ ಜಿಲ್ಲೆಯ 10 ತಾಲ್ಲೂಕುಗಳಿಂದಲೂ ವಿವಿಧ ಕಾರ್ಮಿಕ ಸಂಘಟನೆಗಳ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ತುಮಕೂರು ಜಿಲ್ಲಾ ಬೀಡಿಕಾರ್ಮಿಕರ ಸಂಘ, ಗ್ರಾಮ ಪಂಚಾಯಿತಿ ನೌಕರರ ಸಂಘ, ಕಟ್ಟಡ ಕಾರ್ಮಿಕರ ಸಂಘ, ಪೌರಕಾರ್ಮಿಕರ ಸಂಘ, ಹಮಾಲಿ ಕಾರ್ಮಿಕರ ಸಂಘ, ಬಿಸಿಯೂಟ ಕಾರ್ಮಿಕರ ಸಂಘ, ವಿವಿಧ ಕೈಗಾರಿಕೆಗಳ ಕಾರ್ಮಿಕರ ಸಂಘಗಳ ಆಯ್ದ 150 ಪ್ರತಿನಿಧಿಗಳು ಭಾಗವಹಿದ್ದರು.

– ರಾಘವೇಂದ್ರ.ಎಸ್

ವಿಜಾಪುರ : ಕಾರ್ಮಿಕವರ್ಗದ ಚಳುವಳಿ ವಿಸ್ತಾರಕ್ಕೆ ನಿರ್ಧಾರ

ಏಪ್ರಿಲ್ 4 ರಂದು ಅಖಿಲ ಭಾರತದ ಸಿ.ಐ.ಟಿ.ಯು.ನ ಸಮ್ಮೇಳನದ ಹಾಗೂ ರಾಜ್ಯದಲ್ಲಿ ಜನೇವರಿ 27, 28, 29 ರಂದು ನಡೆಯಲಿರುವ ರಾಜ್ಯ ಸಿ.ಐ.ಟಿ.ಯು.ನ ಸಮ್ಮೇಳನ ಭಾಗವಾಗಿ ವಿಜಾಪುರದಲ್ಲಿ 22-12-2012 ರಂದು ಸಿ.ಐ.ಟಿ.ಯು. ಸಂಘಟನೆಯ ಪ್ರಥಮ ಸಮ್ಮೇಳನವನ್ನು ವಿಜಾಪುರ ಜಿಲ್ಲಾ ಸಮಿತಿ ಸರ್ಕಾರಿ ನೌಕರರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಂಜಾನೆ 10-30 ಘಂಟೆಗೆ ಸಿ.ಐ.ಟಿ.ಯು. ಮುಖಂಡರಾದ ವ್ಹಿ. ಎಂ.. ಸೊನ್ನದ ಅವರು ಧ್ವಜಾರೋಹಣ ಮಾಡಿದರು. ತದನಂತರ ಎಲ್ಲರು ಘೋಷಣೆ ಕೂಗಿ ಸಾಲಾಗಿ ಸಿ.ಐ.ಟಿ.ಯು. ಸಂಘಟನೆಯಲ್ಲಿ ಕೆಲಸ ಮಾಡಿದ ಅನೇಕ ಹುತಾತ್ಮರಾದ ಸಂಗಾತಿಗಳಿಗೆ ಹುತಾತ್ಮ ಕಂಭಕ್ಕೆ ನಮನ ಸಲ್ಲಿಸಿ ಸಭಾ ಭವನದಲ್ಲಿ ಆಶೀನರಾದರು. ಈ ಸಮ್ಮೇಳನವನ್ನು ಉದ್ಘಾಟಿಸಿ ಅಖಿಲ ಭಾರತದ ಸಿ.ಐ.ಟಿ.ಯು.ನ ಕಾರ್ಯದರ್ಶಿಯಾದ ಶ್ರೀಮತಿ ಎಸ್. ವರಲಕ್ಷ್ಮೀಯವರು ಮಾತನಾಡುತ್ತ ಭೂಮಿಯ ಮೇಲೆ ಬದುಕುವ ಯಾವುದೇ ಮನುಷ್ಯ ಸಮಾನತೆಯಿಂದ ಬದುಕಬೇಕು. ಇದನ್ನು ಕೇಂದ್ರದಲ್ಲಿರುವ 11 ಕಾರ್ಮಿಕ ಸಂಘಟನೆಯಲ್ಲಿ ಪ್ರತಿಪಾದಿಸುವ ಏಕೈಕ ಸಂಘಟನೆ ಸಿ.ಐ.ಟಿ.ಯು. ಆಗಿದೆ. ಕಾರ್ಮಿಕರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸದಾ ಅವರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಿ.ಐ.ಟಿ.ಯು. ಕೆಲಸ ಮಾಡುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಊಟ ಮಾಡುವುದನ್ನು ಸರ್ಕಾರ ತೀರ್ಮಾನ ಮಾಡುವ ಮಟ್ಟಿಗೆ ಜನರ ಬದುಕು ಬಂದು ನಿಂತಿದೆ. ಈ ಸರ್ಕಾರವು ಕಾರ್ಮಿಕರ ವಿರುದ್ಧದ ನೀತಿಯನ್ನು ಜಾರಿಗೆ ತರುತ್ತಿದೆ. ಕಾರ್ಮಿಕರಿಗೆ ಖಾಯಂ ಕೆಲಸ ಕೊಡಬಾರದು. ಅವರಿಗೆ ಯೋಜನೆ ಪದ್ಧತಿಯನ್ನು ಜಾರಿಗೆ ತಂದಿದೆ. ದೇಶದಲ್ಲಿ 46 ಕೋಟಿ ಜನ ದುಡಿಯುವವರಿದ್ದಾರೆ. ಕರ್ನಾಟಕದಲ್ಲಿ ಶೇ. 61 ರಷ್ಟು ದುಡಿಮೆಯಲ್ಲಿ ತೊಡಗಿದ್ದಾರೆ. ಇವರಿಗೆ ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಕೊಡಲು ಸರ್ಕಾರಕ್ಕೆ ಆಗುತ್ತಿಲ್ಲ. ಒಬ್ಬ ಮನುಷ್ಯನಗೆ 2400 ಕೆಲೋರಿ ಆಹಾರವನ್ನು ಒದಗಿಸಬೇಕು. ಈಗ ರೇಷನ್ ಕಾರ್ಡ ಕೊಡುವದರ ಬದಲಾಗಿ ಹಣವನ್ನು ಕೊಡುತ್ತಾರೆ. ಅದು ಅವರ ಬದುಕಿಗೆ ಸಾಕಾಗುವದಿಲ್ಲ. ಇದನ್ನು ಯಾವುದೇ ವಿರೋಧಪಕ್ಷ ಬಲವಾಗಿ ವಿರೋಧ ಮಾಡುತ್ತಿಲ್ಲ. ಫೆಬ್ರುವರಿ 20, 21 ರಂದು ದೇಶದ ಎಲ್ಲ ಕಾರ್ಮಿಕ ಸಂಘಟನೆಗಳು ಬಂದು ಕರೆ ಕೊಟ್ಟಿವೆ. ಅದನ್ನು ಎಲ್ಲ ಕಾರ್ಮಿಕ ಸಂಘಟನೆಗಳು ಯಶಸ್ವಿಗೊಳಿಸಬೇಕು ಎಂದರು.

ಸಭೆಯ ಅಧ್ಯಕ್ಷತೆಯನ್ನು ಅಣ್ಣಾರಾಯ ಈಳಗೇರ ವಹಿಸಿದ್ದರು. ಲಕ್ಷ್ಮಣ ಹಂದ್ರಾಳ ಅವರು ಸ್ವಾಗತ ಭಾಷಣ ಮಾಡಿದ್ದರು. ರಾಜ್ಯ. ಸಿ.ಐ.ಟಿ.ಯು. ನ ಕಾರ್ಯದರ್ಶಿ ಎಂ. ಬಿ. ನಾಡಗೌಡ, ಭೀಮಶಿ ಕಲಾದಗಿ, ಮನ್ನುಸಾಬ ಕಲಾದಗಿ, ಸರಸ್ವತಿ ಮಠ, ಸುರೇಖಾ ರಜಪೂತ, ಅಂಗನವಾಡಿ, ಬಿಸಿಊಟ, ಗ್ರಾಮ ಪಂಚಾಯತಿ, ಹಮಾಲರ ಸಂಘ, ಕಂಪ್ಯೂಟರ್ ಶಿಕ್ಷಕರ ಸಂಘ ಮುಂತಾದ 9 ಸಂಘಟನೆಯ ಮುಖಂಡರು ಭಾಗವಹಿಸಿದ್ದರು. ಸೋಮಪ್ಪ ಆಯಟ್ಟಿ ವಂದನೆ ಸಲ್ಲಿಸಿದರು.

ಸಿ.ಐ.ಟಿ.ಯು.ನ ಜಿಲ್ಲಾ ಸಂಚಾಲಕರಾದ ಅಣ್ಣಾರಾಯ ಇಳಗೇರ ಕರಡು ವರದಿಯನ್ನು ಮಂಡಿಸಿದರು. 2006 ರಿಂದ ಸಿ.ಐ.ಟಿ.ಯು. ಸಂಘಟನೆಯು ಗ್ರಾಮ ಪಂಚಾಯತ ನೌಕರರ ಸಮಸ್ಯೆಗಳನ್ನು ಪರಿಹರಿಸುವ ನಟ್ಟಿನಲ್ಲಿ ಸಮರಶೀಲ ಹೋರಾಟ ಮಾಡಿದ್ದು ಅದರಲ್ಲಿ 10 ವರ್ಷಗಳಿಂದ ಕೆಲಸ ನಿರ್ವಹಿಸಿದ 81 ಕ್ಲಾರ್ಕ ಹುದ್ದೆಯಿಂದ ಕಾರ್ಯದರ್ಶಿ ಹುದ್ದಗೆ ಬಡ್ತಿ ಪಡೆಯಲು ಸಾಧ್ಯವಾಯಿತು. ಅದೇ ರೀತಿ ಅಂಗನವಾಡಿ ಕಾರ್ಯಕರ್ತರ ಸದಸ್ಯತ್ವ ಹೆಚ್ಚಿಗೆ ಮಾಡಲು ಅವರು ಸ್ವತಂತ್ರ್ಯ ಚಳುವಳಿ ನಡೆಸಲು ಸಾಧ್ಯವಾಗಿದ್ದು, ಲಾರಿ ಹಮಾಲರ ಸಂಘ, ಬಿಸಿಊಟ ನೌಕರರ ಸಂಘ, ಔಷಧ ಪ್ರತಿನಧಿಗಳ ಸಂಘ ಹೀಗೆ ಸಿ.ಐ.ಟಿ.ಯು. ನ ಅನೇಕ ಸಂಘಟನೆಗಳನ್ನು ಮುನ್ನಡೆಸಲು ಸಿ.ಐ.ಟಿ.ಯು. ಸಮರ್ಥವಾಗಿದೆ ಎಂದು ಜಿಲ್ಲೆಯ ಸಿ.ಐ.ಟಿ.ಯು. ಸಂಘಟನೆಯ ಸಂಕ್ಷಿಪ್ತ ವರದಿಯನ್ನು ಮಂಡಿಸಿದರು. ಅದರಂತೆ ಎಲ್ಲ ಸಂಘಟನೆಯ ಪದಾಧಿಕಾರಿಗಳು ಅದನ್ನು ಕುರಿತು ಚರ್ಚೆ ಮಾಡಿ ಅದರ ಮೇಲೆ 9 ಜನ ಅಭಿಪ್ರಾಯ ಮಂಡಿಸಿದರು.

ಹೊಸಸಮಿತಿ ಆಯ್ಕೆ :

ಅಧ್ಯಕ್ಷೀಯ ಮಂಡಳಿ ಸಭೆ ಸೇರಿ ಹೊಸ ಸಮಿತಿಯನ್ನು ಆಯ್ಕೆ ಮಾಡಿದರು.

ಸಿ.ಐ.ಟಿ.ಯು. ನ ಜಿಲ್ಲಾ ಅಧ್ಯಕ್ಷರಾಗಿ ಶ್ರೀಶೈಲ ಜಾಲಗೇರಿ, ಪ್ರಧಾನ ಕಾರ್ಯದರ್ಶಿಯಾಗಿ ಲಕ್ಷ್ಮಣ ಹಂದ್ರಾಳ, ಉಪಾಧ್ಯಕ್ಷರಾಗಿ, ಅಣ್ಣಾರಾಯ ಈಳಗೇರ, ವ್ಹಿ. ಎಂ. ಸೊನ್ನದ, ಭೀಮಶಿ ಕಲಾದಗಿ, ಮನ್ನುಸಾಬ ಕಲಾದಗಿ, ಸರಸ್ವತಿ ಮಠ,

ಕಾರ್ಯದರ್ಶಿಗಳು : ಸೋಮಪ್ಪ ಆಯಟ್ಟಿ, ಕಾಳಮ್ಮ ಬಡಿಗೇರ, ಭಾರತಿ ವಾಲಿ, ಧರೆಪ್ಪ ಹೊಸಮನಿ, ವೆಂಕಟೇಶ ಭಜಂತ್ರಿ,

ಖಜಾಂಚಿ : ಸುನಂದಾ ನಾಯಕ

ಸಿ.ಐ.ಟಿ.ಯು. ನ ಅಖಿಲ ಭಾರತದ ಕಾರ್ಯದರ್ಶಿಯಾದ ಎಸ್. ವರಲಕ್ಷ್ಮೀಯವರು

ಪುಟ 12ಕ್ಕೆ

ಪಶ್ಚಿಮ ಬಂಗಾಳ 1970ರ ದಶಕದಲ್ಲಿ ಹರಿಯಬಿಟ್ಟ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ಅನುಭವಗಳನ್ನು ಮರೆತಿಲ್ಲ. ಅವೆಲ್ಲ ಪಶ್ಚಿಮ ಬಂಗಾಳಕ್ಕೆ ಸೀಮಿತವಾದ ವಿಕ್ಷೇಪಗಳಷ್ಟೇ ಎಂದು ಭಾವಿಸಿದವರ ಭ್ರಮೆಗಳು 1975ರಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿ ದೇಶಾದ್ಯಂತ ನಾಗರಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಉರುಳು ಬಿಗಿದಾಗ ನುಚ್ಚು ನೂರಾದವು. ಕೊನೆಗೆ 1977ರಲ್ಲಿ ಜಯಶಾಲಿಯಾದದ್ದು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಬಂಗಾಲದ ಜನತೆ ದೇಶದ ಉಳಿದೆಡೆಗಳ ಸಮಸ್ತ ಜನತೆಯೊಡನೆ ನಡೆಸಿದ ಹೋರಾಟ. ಈ ಇತಿಹಾಸವನ್ನು ಮರೆತು ಅದೇ ರೀತಿಯ ಪುನರಾವರ್ತನೆಗೆ ಯತ್ನಿಸುವವರದ್ದು ಕೂಡ ಅಂತಹುದೇ ಹಣೆಬರಹ- ಜನಗಳ ಕೈಗಳಿಂದ ಸಂಪೂರ್ಣ ಸೋಲು.


ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ

ಮಮತಾ ಪ್ರಾಯೋಜಿತ ಭಯೋತ್ಪಾದನೆ

ಪಶ್ಚಿಮ ಬಂಗಾಲದಲ್ಲಿ ಮಂಗಳವಾರ, ಜನವರಿ 8, 2013 ರಂದು ಪ್ರಜಾಪ್ರಭುತ್ವದ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ.

50,000 ಮಂದಿ ಭಾಗವಹಿಸಿದ್ದ ಸಿಪಿಐ(ಎಂ) ಪ್ರತಿಭಟನಾ ರ್‍ಯಾಲಿಯ ಮೇಲೆ ಶಸ್ತ್ರಸಜ್ಜಿತ ಟಿಎಂಸಿ ಗೂಂಡಾಗಳ ಅಮಾನುಷ ಆಕ್ರಮಣ ನಡೆದಿದೆ. ಈ ರ್‍ಯಾಲಿ ನಡೆದದ್ದು ಜನವರಿ 6ರಂದು ರಾಜ್ಯ ವಿಧಾನಸಭೆಯ ಸದಸ್ಯರು ಮತ್ತು ಪಕ್ಷದ ಹಿರಿಯ ಮುಖಂಡರಾದ ಅಬ್ದುರ್ ರೆಝಾಕ್ ಮೊಲ್ಲಾರವರ ಮೇಲೆ ಅರಬುಲ್ ಇಸ್ಲಾಮ್ ಎಂಬಾತನ ನೇತೃತ್ವದ ತೃಣಮೂಲ ಕಾಂಗ್ರೆಸ್ ಗೂಂಡಾಗಳ ಹಲ್ಲೆಯನ್ನು ಪ್ರತಿಭಟಿಸಿ. ಈ ಅರಬುಲ್ ಇಸ್ಲಾಮ್ ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಸೋತಿದ್ದಾತ. ಕಾಮ್ರೇಡ್ ರರಝಾಕ್ ಮೊಲ್ಲಾ ಕಳೆದ ನಲ್ವತ್ತು ವರ್ಷಗಳಿಂದ ಎಡೆಬಿಡದೆ ಚುನಾಯಿತರಾಗುತ್ತಿದ್ದು, ಎಡರಂಗ ಸರಕಾರಗಳಲ್ಲಿ ಭೂಸುಧಾರಣಾ ಮಂತ್ರಿಗಳಾಗಿದ್ದವರು.

ರೆಝಾಕ್ ಮೊಲ್ಲಾ ಜಿಲ್ಲಾ ಕಿಸಾನ್ ಸಭಾ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಯಾಣಿಸುತ್ತಿದ್ದವರು, ದಾರಿಯಲ್ಲಿ ಟಿಎಂಸಿ ಗೂಂಡಾಗಳು ನುಗ್ಗಿ, ಚೆಲ್ಲಾಡಿ ಸುಟ್ಟು ಹಾಕಿದ್ದ ಸಿಪಿಐ(ಎಂ) ಕಚೇರಿಗೆ ಭೇಟಿ ನೀಡಲು ಹೋದಾಗ ಅವರ ಮೇಲೆ ಅಮಾನುಷ ಹಲ್ಲೆ ನಡೆಯಿತು. ಅವರನ್ನು ಸಮೀಪದ ನರ್ಸಿಂಗ್ ಹೋಮಿಗೆ ದಾಖಲು ಮಾಡಲಾಯಿತು. ಅಲ್ಲಿಯೂ ಟಿಎಂಸಿ ನೇತೃತ್ವದ ಆಡಳಿತದ ನೀತಿಗೆಟ್ಟ ಅಮಾನವೀಯತೆಯ ಪ್ರದರ್ಶನ ಕಂಡು ಬಂತು. ಆಸ್ಪತ್ರೆಯ ಮೇಲೆ ಒತ್ತಡ ತಂದು ಮೊಲ್ಲಾರವರಿಗೆ ಸರಿಯಾದ ಚಿಕಿತ್ಸೆಯನ್ನೂ ಕೊಡದೆ ಕಳಿಸುವಂತೆ ಮಾಡಲಾಯಿತು. ಅವರಿಗೆ ಗಂಭೀರ ಗಾಯಗಳೇನೂ ಆಗಿಲ್ಲ ಎಂದು ತೋರಿಸುವುದು ಅವರ ಆಶಯವಾಗಿತ್ತು. ಆದರೆ ಅದೇ ಆಸ್ಪತ್ರೆಯ ಎಂಆರ್ಐ ಪರೀಕ್ಷೆಯ ವರದಿ ಅವರ ಸೊಂಟದ ಬಳಿ ಬೆನ್ನೆಲುಬಿನಲ್ಲಿ ಒಂದು ಗಂಭೀರ ಮೂಳೆ ಮುರಿತವಾಗಿದೆ ಎಂದು ತೋರಿಸಿದೆ. ಇನ್ನೊಂದೆಡೆ, ಹಲ್ಲೆಯ ನೇತೃತ್ವ ವಹಿಸಿದ್ದ ಅದೇ ಅರಬುಲ್ ಇಸ್ಲಾಮ್ ವಂಚಕತನದಿಂದ ತಾನೂ ಗಾಯಗೊಂಡಿದ್ದೇನೆ ಎಂದು ಒಂದು ಖಾಸಗಿ ನರ್ಸಿಂಗ್ ಹೋಂಗೆ ದಾಖಲಾದ. ಆದರೆ, ಅಲ್ಲಿನ ಡಾಕ್ಟರುಗಳು ಆತನಿಗೇನೂ ಗಾಯಗಳಾಗಿಲ್ಲ ಎಂದರು.



ಪ್ರಜಾಪ್ರಭುತ್ವದ ಕತ್ತು ಹಿಸುಕುವ ಪರಿ

ಜನವರಿ 8ರಂದು ನಡೆದ ಹಲ್ಲೆಯಲ್ಲಿ ಪ್ರತಿಭಟನಾ ರ್‍ಯಾಲಿಗೆ ಸಿಪಿಐ(ಎಂ) ಬೆಂಬಲಿಗರನ್ನು ಒಯ್ಯುತ್ತಿದ್ದ 20 ವಾಹನಗಳ ಮೇಲೆ ದಾಳಿ ಮಾಡಿ ಅವುಗಳಿಗೆ ಬೆಂಕಿ ಹಚ್ಚಲಾಯಿತು. 27 ಪ್ರತಿಭಟನಾಕಾರರು ಗಾಯಗೊಂಡರು, ಮೂವರಿಗೆ ಗುಂಡೇಟುಗಳಾಗಿವೆ. ಈಗ ಐವರು ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ಹೋರಾಟ ನಡೆಸಿದ್ದಾರೆ. ಇಂತಹ ಗಂಭೀರ ಹಲ್ಲೆ ನಡೆಸಿದವರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವ ಬದಲು, ರಾಜ್ಯ ಪೋಲೀಸರು ಟಿಎಂಸಿ ಮುಖ್ಯಸ್ಥರ ನಿರ್ದೇಶನದ ಪ್ರಕಾರ ಹಲ್ಲೆಗೊಳಗಾದವರನ್ನೇ ಬಂಧಿಸುತ್ತಿದ್ದಾರೆ. ಹಲ್ಲೆಕೋರರು ನಿರ್ಭಯವಾಗಿ ಅಡ್ಡಾಡುತ್ತಿದ್ದರೆ, ದಾಳಿಗೆ ಒಳಗಾದವರನ್ನು ಸುಳ್ಳು ಆಪಾದನೆಗಳ ಮೇಲೆ ಬಂಧಿಸಲಾಗುತ್ತಿದೆ.

ಇನ್ನೂ ಹೊಲಸು ಸಂಗತಿಯೆಂದರೆ, ರಾಜ್ಯ ಸರಕಾರದ ಹಿರಿಯ ಮಂತ್ರಿಗಳು ಬಹಿರಂಗವಾಗಿ ಈ ಹಲ್ಲೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ ಹಾಗೂ ಇದು ಟಿಎಂಸಿ ವಿರುದ್ಧ ಸಿಪಿಐ(ಎಂ) ಆರಂಭಿಸಿದ ಹಲ್ಲೆಯೆನ್ನುವಂತೆ ಬಿಂಬಿಸುತ್ತಿದ್ದಾರೆ. ಶಾಂತಿಯುತವಾದ ಪ್ರತಿಭಟನೆಯ ಹಕ್ಕು ಭಾರತದ ಸಂವಿಧಾನ ಮತ್ತು ಕಾನೂನು ನೀಡಿರುವ ಹಕ್ಕು. ನಾಡಿನ ಕಾನೂನನ್ನು ಜಾರಿ ಮಾಡುವ ಬದಲು ತೃಣಮೂಲ ಕಾಂಗ್ರೆಸ್ ರಾಜ್ಯ ಸರಕಾರ ವಾಸ್ತವವಾಗಿ ಜನರಿಗೆ ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ನಿರಾಕರಿಸಲು ರಾಜ್ಯ ಆಡಳಿತವನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳ ಬೆಂಬಲಿಗರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೇರಲು ಉಪಯೋಗಿಸುತ್ತಿದೆ.

ರಾಜ್ಯ ವಿಧಾನಸಭಾ ಚುನಾವಣೆಗಳ ನಂತರ, ಮೇ 2011 ರಿಂದ ಡಿಸೆಂಬರ್ 31, 2012 ರ ವರೆಗೆ 85 ಸಿಪಿಐ(ಎಂ) ಸಂಗಾತಿಗಳನ್ನು ಟಿಎಂಸಿ ಗೂಂಡಾಗಳು ಕೊಲೆ ಮಾಡಿದ್ದಾರೆ. ಮಹಿಳೆಯರ ಮೇಲೆ ಇದುವರೆಗೆ 848 ದೈಹಿಕ ಹಲ್ಲೆಗಳಾಗಿವೆ. ಇವುಗಳಲ್ಲಿ 129 ಅಮಾನುಷ ಅತ್ಯಾಚಾರಗಳು. ಇವುಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ತೃಣಮೂಲ ಕಾಂಗ್ರೆಸ್, ಅವರ ಮುಖ್ಯಮಂತ್ರಿಗಳು ಕೂಡ ಮಹಿಳೆಯರ ಮೇಲಿನ ಇಂತಹ ಹೀನ ಲೈಂಗಿಕ ಹಲ್ಲೆಗಳು ಕ್ಷುಲ್ಲಕ ವಿಷಯಗಳೆಂಬಂತೆ ಮಾತಾಡಿದ್ದಾರೆ. ಮಹಿಳೆಯರ ಮೇಲೆ ಅತ್ಯಾಚಾರಗಳು ಮತ್ತು ದೈಹಿಕ ಹಲ್ಲೆಗಳು ಟಿಎಂಸಿಯ ರಾಜಕೀಯ ಅಧಿಕಾರವನ್ನು ಪ್ರದರ್ಶಿಸುವ ಒಂದು ಸಾಧನವಾಗಿ ಬಿಟ್ಟಿದೆ.

ವಿಧಾನಸಭಾ ಚುನಾವಣೆಗಳ ನಂತರ 42,794 ಸಿಪಿಐ(ಎಂ) ಮತ್ತು ಎಡಪಕ್ಷಗಳ ಹಿತೈಷಿಗಳನ್ನು ಅವರ ನಿವಾಸಗಳಿಂದ ಎಬ್ಬಿಸಲಾಗಿದೆ. ಸುಮಾರು 3,000 ಮನೆಗಳನ್ನು ಸುಟ್ಟು ಹಾಕಲಾಗಿದೆ, ಲೂಟಿ ಮಾಡಲಾಗಿದೆ. ರಾಜ್ಯದ ವಿವಿಧೆಡೆಗಳಲ್ಲಿ 646 ಸಿಪಿಐ(ಎಂ) ಕಚೇರಿಗಳ ಮೇಲೆ ದಾಳಿ ಮಾಡಿ ಲೂಟಿ ನಡೆಸಲಾಗಿದೆ. 222 ಕಾರ್ಮಿಕ ಸಂಘಟನೆಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಟಿಎಂಸಿ ಗೂಂಡಾಗಳು ಆಕ್ರಮಿಸಿಕೊಂಡಿದ್ದಾರೆ. ಶಿಕ್ಷಣ ಸಂಸ್ಥೆಗಳ ಮೇಲೆ ವ್ಯಾಪಕ ಪ್ರಮಾಣದಲ್ಲಿ ಹಲ್ಲೆಗಳಾಗಿವೆ. ಟಿಎಂಸಿಯ ವಿದ್ಯಾರ್ಥಿ ವಿಭಾಗ ಸೋಲುಂಡ ಸಂಸ್ಥೆಗಳಲ್ಲಿ 84 ವಿದ್ಯಾರ್ಥಿ ಸಂಘಗಳ ಕಚೇರಿಗಳನ್ನು 'ವಶಪಡಿಸಿ'ಕೊಂಡಿದ್ದಾರೆ. 3,336 ಸಿಪಿಐ(ಎಂ) ಮುಖಂಡರು ಮತ್ತು ಕಾರ್ಯಕರ್ತರನ್ನು ಸುಳ್ಳು ಮೊಕದ್ದಮೆಗಳಲ್ಲಿ ಬಂಧಿಸಲಾಗಿದೆ.

'ಪೊರಿಬರ್ತನ್' ಎಂದರೆ ಇದೇ!

ರಾಜ್ಯಾದ್ಯಂತ ಟಿಎಂಸಿ ಗೂಂಡಾಗಳು ದೊಡ್ಡ ಪ್ರಮಾಣದಲ್ಲಿ ಬಲವಂತದ ಹಣವಸೂಲಿ ನಡೆಸಿದ್ದಾರೆ. ಸುಮಾರು 10,000 ಜನರಿಂದ ಹೀಗೆ ವಸೂಲಿ ಮಾಡಿದ ಹಣದಿಂದ ಟಿಎಂಸಿಗೆ 28 ಕೋಟಿ ರೂ. ಲಾಭವಾಗಿದೆ.

ರೆಝಾಕ್ ಮೊಲ್ಲಾ ಭೂಸುಧಾರಣಾ ಮಂತ್ರಿಗಳಾಗಿದ್ದರಿಂದ ಟಿಎಂಸಿ ಅವರ ಮೇಲೆ ಗುರಿಯಿಟ್ಟಿತ್ತು. ಎಡರಂಗ ಸರಕಾರದ ಭೂಸುಧಾರಣೆಗಳ ಅನುಷ್ಠಾನದಿಂದಾಗಿ ಹಲವು ಮಾಜಿ ಭೂಮಾಲಕರು ಭೂಮಿತಿಯನ್ನು ಮೀರಿ ಕಾನೂನುಬಾಹಿರವಾಗಿ ಹಿಡಿದುಕೊಂಡಿದ್ದ ಭೂಮಿಯನ್ನು ಕಳೆದುಕೊಂಡಿದ್ದರು. ಈ ವಿಭಾಗಗಳು ಭೂಸುಧಾರಣೆಗಳಿಂದಾಗಿ ಬಡರೈತರು ಮತ್ತು ಕೃಷಿ ಕೂಲಿಕಾರರ ಗಳಿಕೆಗಳನ್ನು ವ್ಯವಸ್ಥಿತವಾಗಿ ವಾಪಾಸು ಕಿತ್ತುಕೊಳ್ಳುತ್ತಿವೆ. ಇಂತಹ ಸುಮಾರು 3,500 ರೈತರು ಸುಮಾರು 10,000 ಎಕ್ರೆಗಳಷ್ಟು ತಮ್ಮದೇ ಭೂಮಿಯಲ್ಲಿ ಸಾಗುವಳಿ ನಡೆಸದಂತೆ ಮಾಡಿದ್ದಾರೆ. ಭೂಸುಧಾರಣೆಗಳ ಮೂಲಕ ಕಾನೂನು ಪ್ರಕಾರ ಭೂಮಿ ಪಡೆದ 27,283 ಪಟ್ಟಾದಾರರು ಮತ್ತು ಬರ್ಗಾದಾರರನ್ನು ಸುಮಾರು 10,000 ಎಕ್ರೆ ಭೂಮಿಯಿಂದ ಒಕ್ಕಲೆಬ್ಬಿಸಿದ್ದಾರೆ.

ಪಶ್ಚಿಮ ಬಂಗಾಲದಲ್ಲಿ ಮೇ 2011ರಿಂದ ನಡೆಯುತ್ತಿರುವ 'ಪೊರಿಬರ್ತನ್'(ಪರಿವರ್ತನೆ) ಇದೇ. ಟಿಎಂಸಿಯ ಎಲ್ಲ ರಾಜಕೀಯ ವಿರೋಧಿಗಳ ಮೇಲೆ ನಿರ್ದಯ ಹಲ್ಲೆಗಳು ನಡೆಯುತ್ತಿವೆ, ಹಾಡುಹಗಲೇ ಪ್ರಜಾಪ್ರಭುತ್ವದ, ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ಕೊಲೆ ನಡೆಯುತ್ತಿದೆ. ನಾಗರಿಕ ಹಕ್ಕುಗಳ ಮೇಲೆ, ಜನತೆಯ ಸಂವಿಧಾನದತ್ತ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಇಂತಹ ನಗ್ನ ಹಲ್ಲೆಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ.

ಪುಟ 15 ಕ್ಕೆ

ಭ್ರಷ್ಟತೆ–ವಂಚನೆ–ಗೂಂಡಾಗಿರಿ 'ತೃಣಮೂಲ'ದ ನಾನಾ ಮುಖಗಳು

ಆರ್.ರಾಮಕೃಷ್ಣ

ಸಿಪಿಐ(ಎಂ) ಪಕ್ಷ ಒಂದು ರಾಷ್ಟ್ರೀಯ ರಾಜಕೀಯ ಪಕ್ಷ. ಪಶ್ಚಿಮ ಬಂಗಾಳದಲ್ಲಿ 1977 ರಿಂದ ಸತತ 34 ವರ್ಷಗಳ ಕಾಲ ಜನರ ವಿಶ್ವಾಸ ಗಳಿಸಿ ಅಧಿಕಾರ ನಡೆಸಿದ ಎಡರಂಗದ ಒಂದು ಪ್ರಧಾನ ಪಕ್ಷ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಎಡರಂಗವು ಸು. ಶೇ. 40 ಮತ ಗಳಿಸಿದರೂ ಕೂಡ ತನ್ನ ಜನ ಬೆಂಬಲದಲ್ಲಿ ಒಂದಷ್ಟು ಇಳಿಕೆಯಾಗಿರುವುದರಿಂದ ಜನ ಬಯಸಿದಂತೆ ಜವಾಬ್ದಾರಿಯುತ ವಿರೋಧ ಪಕ್ಷದ ಪಾತ್ರವನ್ನು ಒಪ್ಪಿಕೊಂಡು ಅದನ್ನು ನಿರ್ವಹಿಸಲು ಪ್ರಯತ್ನಿಸುತ್ತಿರುವ ಪಕ್ಷ.

ಜನ ಸಿಪಿಐ(ಎಂ) ಮತ್ತು ಎಡರಂಗಕ್ಕೆ ರಚನಾತ್ಮಕ ವಿರೋಧ ಪಕ್ಷದ ಪಾತ್ರ ನಿರ್ವಹಿಸಲು ಆದೇಶ ನೀಡಿದ್ದರೂ ಕೂಡ ಅಧಿಕಾರಕ್ಕೇರಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕ ಗಣ ಯಾವ ವಿರೋಧ ಪಕ್ಷಗಳ ಯಾವ ಟೀಕೆಗಳನ್ನು ಸಹಿಸಲು ತಯಾರಿಲ್ಲ ಎನ್ನುವುದು ಈಗಾಗಲೇ ದೇಶಕ್ಕೆ ತಿಳಿದಿರುವ ವಿಷಯ. ಇಲ್ಲಿ ವಿರೋಧ ಪಕ್ಷಗಳಿರಲಿ ಪತ್ರಿಕೆಗಳು, ದೂರದರ್ಶನ ಚಾನೆಲ್‌ಗಳೇ ಸರ್ಕಾರದ ವಿರುದ್ಧ ಮಾತನಾಡಬೇಕಾದರೆ ಸ್ವಲ್ಪ 'ಹಿಂದೆ ಮುಂದೆ' ನೋಡಬೇಕಾದ ಸನ್ನಿವೇಶ ಬಂದೊದಗಿದೆ. ಸರ್ಕಾರವನ್ನು ಟೀಕಿಸುವ ಯಾವ ಪಕ್ಷದ ಒಲವೂ ಇಲ್ಲದ ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಸಹ ಪೋಲೀಸರ 'ಸತ್ಕಾರ ಸನ್ಮಾನ'ಗಳು ಸಲ್ಲುತ್ತಿರುವುದು ಸಹ ಈಗಾಗಲೇ ದೇಶಾದ್ಯಂತ ಜನಜನಿತ.

ಮಮತಾ ಬ್ಯಾನರ್ಜಿ ಸರ್ಕಾರದ ಈ ವರ್ತನೆಯನ್ನು ಅರ್ಥ ಮಾಡಿಕೊಳ್ಳಲು ಪೂರಕವಾದ ಪಶ್ಚಿಮ ಬಂಗಾಳದ ಕೆಲವು ಬೆಳವಣಿಗೆಗಳ ವಿವರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಸೌಂದರ್ಯ ರಹಸ್ಯ

ಕೋಲ್ಕೋತ್ತಾ ನಗರವನ್ನು 'ಸುಂದರಗೊಳಿಸುವುದು' ಹೊಸದಾಗಿ ಅಧಿಕಾರಕ್ಕೆ ಬಂದ ತೃಣಮೂಲ ಕಾಂಗ್ರೆಸ್ ಸರ್ಕಾರದ ಒಂದು ಪ್ರಧಾನ ಘೋಷಿತ ಆದ್ಯತೆಯಾಗಿತ್ತು. ಕೋಲ್ಕೋತ್ತಾ ನಗರವನ್ನು 'ಲಂಡನ್' ಮಾಡುವುವು ಎಂದು ಮಮತಾ ಬ್ಯಾನರ್ಜಿ ಸರ್ಕಾರ ಘೋಷಿಸಿತ್ತು. ಕೋಲ್ಕೋತ್ತಾ ನಗರದ ಚಿತ್ರಣವನ್ನು ಬದಲಾಯಿಸುವುದಾಗಿ ನಗರವನ್ನು ಸುಂದರಗೊಳಿಸುವುದಾಗಿ ಸಾರಿ ಸಾರಿ ಹೇಳಲಾಯಿತು. ಈ ಮಾತುಗಳ ನಿಜವಾದ ಅರ್ಥವೇನು ಎಂದು ಜನರಿಗೆ ದಿನೇ ದಿನೇ ಚೆನ್ನಾಗಿ ಅರ್ಥವಾಗುತ್ತಾ ಹೋಗುತ್ತಿದೆ.

ಕೋಲ್ಕೋತ್ತಾ ಮಹಾನಗರ ಪಾಲಿಕೆಯು ಎಲ್ಲ ನೀತಿ ನಿಯಮಗಳನ್ನು ಮೀರಿ ಕೋಲ್ಕೋತ್ತಾ ನಗರದ ಸೌಂದರ್ಯೀಕರಣದ ಹೆಸರಿನಲ್ಲಿ ದುಬಾರಿ ಬೆಲೆಯಲ್ಲಿ ಬೀದಿ ದೀಪಗಳನ್ನು ಖರೀದಿಸಿತ್ತು. ಈ ಖರೀದಿ ವ್ಯವಹಾರಗಳಲ್ಲಿ ಸುಮಾರು 27 ಕೋಟಿ ದುರುಪಯೋಗವಾಗಿ ಈ ವಿಷಯದಲ್ಲಿ ದೊಡ್ಡ ಹಗರಣ ನಡೆದಿದೆ ಎಂದು ಈ ಬಗ್ಗೆ ಪಾಲಿಕೆಯ ಖರೀದಿಗಳ ಪರಿಶೀಲನೆ ನಡೆಸಿದ ತಜ್ಞರ ಅಂದಾಜು.

ಮಹಾನಗರ ಪಾಲಿಕೆಯು ನಗರದ ಸೌಂದರ್ಯೀಕರಣದ ಬಗೆಗೆ ಮಾತನಾಡುತ್ತಿರುವಾಗ ನಿಜಕ್ಕೂ ಜನರ ಆತಂಕ ಬೇರೆಯದೇ ಆಗಿತ್ತು. ಕೋಲ್ಕೋತ್ತಾ ನಗರದಲ್ಲಿ ಡೆಂಗ್ಯೂ, ಮಲೇರಿಯಾ ಮುಂತಾದ ಮಾರಕ ಸಾಂಕ್ರಾಮಿಕ ರೋಗಗಳು ನಗರದ ನಾಗರೀಕರ ಜೀವ ಹಿಂಡುತ್ತಾ ಅಟ್ಟಹಾಸ ಮೆರೆಯುತ್ತಿದ್ದವು. ಪಾಲಿಕೆಗೆ ಮತ್ತು ಸರ್ಕಾರಕ್ಕೆ ಈ ಗಂಭೀರ ಸಮಸ್ಯೆಗಳ ಬಗೆಗೆ ಗಮನವೇ ಇರಲಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಹಸುಗೂಸುಗಳು ಬಾರಿ ಪ್ರಮಾಣದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದರೂ ಪದೇ ಪದೇ ಇಂತಹ ದುರ್ಘಟನೆಗಳು ಸಂಭವಿಸುತ್ತಿದ್ದರೂ ಸರ್ಕಾರ ಇದನ್ನು ಮಾಮೂಲಿ ಘಟನಾವಳಿಗಳು ಅದರಲ್ಲಿ ವಿಶೇಷವೇನಿಲ್ಲ ಎಂದು ತಿಪ್ಪೆ ಸಾರಿಸಲು ಯತ್ನಿಸಲು ನೋಡಿತೇ ವಿನಃ ಸಮಸ್ಯೆಯ ಮೂಲ ಅರಿಯಲು ಪ್ರಯತ್ನಿಸಲಿಲ್ಲ.

ಸಿಪಿಐ(ಎಂ) ಪಕ್ಷ ಈ ವಿಷಯದಲ್ಲಿ ಪತಿಭಟನೆ ನಡೆಸಲು ಯೋಜಿಸಿತ್ತು. ಒಂದು ತಿಂಗಳ ಮುಂಚೆಯೇ ಅನುಮತಿ ಪಡೆಯಲಾಗಿತ್ತು. ಆದರೆ ಸರ್ಕಾರ ಪ್ರತಿಭಟನೆಗೆ ಕೇವಲ ನಾಲ್ಕು ದಿನ ಇದೆ ಎನ್ನುವಾಗ ಅನುಮತಿಯನ್ನು ವಾಪಸ್ ಪಡೆಯಿತು. ಸಿಪಿಐ(ಎಂ) ಪಕ್ಷ ಈ ಅನ್ಯಾಯವನ್ನು ಪ್ರತಿಭಟಿಸಿ ಅನುಮತಿಯನ್ನು ಕೊನೆಗಳಿಗೆಯಲ್ಲಿ ನಿರಾಕರಿಸಿದರೂ ಚಳುವಳಿ ನಿಲ್ಲುವುದಿಲ್ಲವೆಂದು ಘೋಷಿಸಿ ಪ್ರತಿಭಟನೆ ನಡೆಸಿತು. ಪ್ರತಿಭಟನೆಗೆ ಸರ್ಕಾರ ನಾನಾ ರೀತಿಯಲ್ಲಿ ಅಸಹಕಾರ ತೋರಿ ಅಡ್ಡಿ ಮಾಡಿದರೂ ಸು. 50 ಸಾವಿರಕ್ಕೂ ಹೆಚ್ಚು ಜನರು ಅಕ್ಟೋಬರ್ 6, 2012 ರಂದು ಕೋಲ್ಕೋತ್ತ ಮಹಾನಗರ ಪಾಲಿಕೆ ಕಚೇರಿ ಮುಂದೆ ಸೇರಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆ ನಡೆಸುವ ಜನರ ಹಕ್ಕು ಕಸಿದುಕೊಳ್ಳುವ ಅಗತ್ಯ ತೃಣಮೂಲ ಸರ್ಕಾರಕ್ಕೆ ಯಾಕೆ ಬಂದಿದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕಿದೆ.

'ಚಿಟ್ ಫಂಡ್'ಗಳ ವಂಚಕರ ಹಿಡಿತದಲ್ಲಿ ಸರ್ಕಾರ

ಪಶ್ಚಿಮ ಬಂಗಾಳದಲ್ಲಿ ಕಳೆದ ಸುಮಾರು ಎರಡು ವರ್ಷಗಳಲ್ಲಿ ಚಿಟ್ ಫಂಡ್ ನಡೆಸುವ ಖಾಸಗಿ ಕಂಪನಿಗಳಿಂದ ಬಾರಿ ಪ್ರಮಾಣದ ಹಣ ವಂಚನೆಯಾದ ಬಗೆಗೆ ದೂರುಗಳು ಕೇಳಿ ಬಂದಿವೆ. ಈ ಅವಧಿಯಲ್ಲಿ ಜನ ಸಾಮಾನ್ಯರಿಗೆ ಸುಮಾರು 1,500 ಕೋಟಿ ರೂಪಾಯಿಗಳಷ್ಟು ಹಣದ ವಂಚನೆಯಾಗಿದೆ ಎಂದು ಅಂದಾಜಿಸಲಾಗಿದೆ. ಜನರನ್ನು ಅಂಚೆ ಇಲಾಖೆ, ಬ್ಯಾಂಕುಗಳಿಂದ ಈ ಖಾಸಗಿ ಚಿಟ್ ಫಂಡ್ ಸಂಸ್ಥೆಗಳು ಸುಳ್ಳು ಭರವಸೆಗಳನ್ನು ನೀಡಿ ತಮ್ಮತ್ತ ಸೆಳೆದಿರುವುದರಿಂದ ರಾಜ್ಯದಲ್ಲಿ ಸಣ್ಣ ಉಳಿತಾಯದ ಪ್ರಮಾಣದಲ್ಲಿ ಸಹ ಇಳಿಕೆ ಕಂಡು ಬಂದಿದೆಯೆಂದು ಈ ಕುರಿತ ವರದಿಗಳು ಸಾರುತ್ತಿವೆ. ಹಣ ಕೊಟ್ಟ ಜನರಿಗೆ ಬಾರಿ ಹೆಚ್ಚು ಬಡ್ಡಿ, ಲಾಭಗಳು ಹೋಗಲಿ ಅಸಲಿಗೆ ಕೂಡ ದಕ್ಕದೇ ಮೋಸವಾದ ಪ್ರಸಂಗಗಳು ವ್ಯಾಪಕವಾಗಿ ನಡೆಯುತ್ತಿವೆ.



ತೃಣಮೂಲ ಸರ್ಕಾರ ಈ ವಿಷಯದಲ್ಲಿ ಯಾವ ಕ್ರಮವನ್ನು ವಹಿಸಲೂ ತಯಾರಿಲ್ಲ ಎಂಬುದು ಸಾರ್ವಜನಿಕರಿಗೂ ಅರ್ಥವಾಗುತ್ತಿದೆ. ಏಕೆಂದರೆ ಈ ಚಿಟ್ ಫಂಡ್ ನಡೆಸುವ ಹಣವಂತರಿಗೂ ತೃಣಮೂಲ ಕಾಂಗ್ರೆಸ್ ಸರ್ಕಾರದ ಸಚಿವರಿಗೂ ಖಾಸ ಖಾಸ ಸಂಬಂಧಗಳಿವೆ ಎಂದು ಜನರೇ ಮಾತನಾಡಿಕೊಳ್ಳುತ್ತಿದ್ದಾರೆ. ಸ್ವತಃ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇಂತಹ ಹಣಕಾಸು ಸಂಸ್ಥೆ ಮಾಲೀಕರ ಹಿಡಿತದಲ್ಲಿದ್ದಾರೆ ಎಂಬ ಗಂಭೀರ ಆರೋಪಗಳು ಕೇಳಿ ಬಂದಿವೆ.

ಈ ಪ್ರಶ್ನೆಯ ಬಗೆಗೆ ಚರ್ಚೆ ನಡೆಯುವಾಗ ಇತ್ತೀಚೆಗೆ ಪಶ್ಚಿಮ ಬಂಗಾಳದ ವಿಧಾನ ಸಭೆಯಲ್ಲಿ ತೃಣಮೂಲ ಕಾಂಗ್ರೆಸ್ ಸದಸ್ಯರು ಸಿಪಿಐ(ಎಂ) ಶಾಸಕರ ಮೇಲೆ ಎರಗಿ ಬಿದ್ದು ದೌರ್ಜನ್ಯ ನಡೆಸಿದ್ದು ಮತ್ತು ಹಲವು ಶಾಸಕರು ಆಸ್ಪತ್ರೆ ಸೇರುವಂತಾಗಿದ್ದು ನೋಡಿದರೆ ಆರೋಪ ನಿಜವೇ ಎಂದು ಯಾರಾದರೂ ನಂಬಬೇಕಾಗುತ್ತದೆ.

ಮಮತಾ ಬ್ಯಾನರ್ಜಿ ಸರ್ಕಾರವು ಖಾಸಗಿ ಚಿಟ್ ಫಂಡ್ ಸಂಸ್ಥೆಗಳಿಂದ ಜನರಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ನಿರಾಕರಿಸುವ ಸ್ಥಿತಿಯಲ್ಲಿ ಇಲ್ಲ. ಅದು ಸಹ ಅನ್ಯಾಯವಾಗುತ್ತಿರುವುದನ್ನು ಒಪ್ಪಲೇ ಬೇಕಾಗಿದೆ. ಆದರೆ ಸರ್ಕಾರವು ಈ ಚಿಟ್ ಸಂಸ್ಥೆಗಳಲ್ಲಿ ಹೆಚ್ಚಿನವು ಎಡರಂಗ ಸರ್ಕಾರ ಅಧಿಕಾರದಲ್ಲಿದ್ದಾಗ ಆರಂಭವಾಗಿರುವವು ಎಂದು ಎಡರಂಗದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ.

ಚಿಟ್ ಫಂಡ್ ಸಂಸ್ಥೆಗಳಿಂದ ಜನರಿಗಾಗುತ್ತಿರುವ ಮೋಸವನ್ನು ನಿವಾರಿಸಿ ಈ ಸಂಸ್ಥೆಗಳನ್ನು ನಿಯಂತ್ರಿಸಲೆಂದೇ ಅಂದಿನ ಎಡರಂಗದ ಹಣಕಾಸು ಸಚಿವರಾದ ಅಸೀಮ್ ದಾಸ್ ಗುಪ್ತ ಅವರು ವಿಧಾನ ಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಿದ್ದರು. ಆದರೆ ಅದು ಚರ್ಚಿತವಾಗಿ ಕಾಯ್ದೆಯಾಗುವ ಮೊದಲೇ ವಿಧಾನ ಸಭಾ ಚುನಾವಣೆ ಬಂದಿತು. ಚುನಾವಣೆಯಲ್ಲಿ ಅಧಿಕಾರಕ್ಕೇರಿದ ತೃಣಮೂಲ ಕಾಂಗ್ರೆಸ್ ಸರ್ಕಾರ ಇಲ್ಲಿಯವರೆಗೂ ಈ ವಿಷಯದಲ್ಲಿ ಏನನ್ನೂ ಮಾಡದೇ ಎಡರಂಗವನ್ನೇ ಮತ್ತೆ ಮತ್ತೆ ದೂರುತ್ತ ಹೊಣೆಗೇಡಿಯಾಗಿ ವರ್ತಿಸುತ್ತಿದೆ.

ಕಾಲೇಜು ಕ್ಯಾಂಪಸ್‌ಗಳಲ್ಲಿ ಗೂಂಡಾರಾಜ್

"ರಾಮ್‌ಪುರ್‌ಹಟ್ ಕಾಲೇಜು, ರಾಯ್‌ಗಂಜ್ ಕಾಲೇಜುಗಳಲ್ಲಿ ನಡೆದಿರುವ ಘಟನೆಗಳು ಎಚ್ಚರಿಕೆಯ ಗಂಟೆ ಬಾರಿಸುತ್ತಿವೆ. ಅಲ್ಲಿ ಪ್ರಾಂಶುಪಾಲರನ್ನು ಹೊರಗೆಳೆದು ತಂದು ಬಟ್ಟೆ ಹರಿದು ನಡೆಸಲಾದ ನಿರ್ದಯ ಹಲ್ಲೆಗಳ ದೃಶ್ಯಗಳನ್ನು ನೆನೆಸಿಕೊಂಡು ನನ್ನ ಹೊಟ್ಟೆಯಲ್ಲಿ ಅತೀವ ಸಂಕಟವಾಗುತ್ತಿದೆ. ಪ್ರಾಂಶುಪಾಲರ ಮೇಲಿನ ದಾಳಿಯನ್ನು ಎಲ್ಲರೂ ಖಂಡಿಸಬೇಕು. ರಾಜಕೀಯ ಕಾರಣಕ್ಕಾಗಿ ಇಂತಹ ಹಲ್ಲೆಗಳನ್ನು ಸಹಿಸಿಕೊಂಡು ಸುಮ್ಮನಿರುವುದು ಸಾಧ್ಯವಿಲ್ಲ. ಕಾಲೇಜು ಕ್ಯಾಂಪಸ್‌ಗಳಲ್ಲಿ ಹೀಗೆ ಶಿಕ್ಷಕರು, ಪ್ರಾಂಶುಪಾಲರ ಮೇಲೆ ಗೂಂಡಾಗಿರಿ ನಡೆದಲ್ಲಿ ಸತ್ಯಾಗ್ರಹಕ್ಕೆ ಮುಂದಾಗಬೇಕು"

ತೃಣಮೂಲ ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕದ ಮುಖಂಡರ ಗೂಂಡಾಗಿರಿಯನ್ನು ಖಂಡಿಸಿ ಈ ಮಾತನ್ನು ಹೇಳಿದವರು ಯಾರು ಗೊತ್ತೆ ? ಸ್ವತಃ ತೃಣಮೂಲ ಕಾಂಗ್ರೆಸ್ ಪಕ್ಷದ ಸಂಸದರು, ತೃಣಮೂಲ ಪಕ್ಷದ ಪರವಾಗಿ ಕೇಂದ್ರ ಯುಪಿಎ ಸರ್ಕಾರದಲ್ಲಿ ಸಚಿವರು ಆಗಿದ್ದ ಸುಗತ ರಾಯ್.

ಸುಗತ ರಾಯ್ ಮೂಲತಃ ದಕ್ಷಿಣ 24 ಪರಗಣ ಜಿಲ್ಲೆಯ ಆಶುತೋಷ್ ಕಾಲೇಜಿನ ಪ್ರಾಂಶುಪಾಲರಾಗಿದ್ದು ನಂತರ ರಾಜಕಾರಣ ಸೇರಿ ಕೇಂದ್ರ ಮಂತ್ರಿಯಾದವರು. ಅವರು ಈಗಲೂ ಆಶುತೋಷ್ ಕಾಲೇಜಿನ ಗೌರ್ನಿಂಗ್ ಕೌನ್ಸಿಲ್‌ನಲ್ಲಿದ್ದಾರೆ. ಅಕ್ಟೋಬರ್ 6, 2012 ರಂದು ನಡೆದ ಕಾಲೇಜಿನ ಗೌರ್ನಿಂಗ್ ಕೌನ್ಸಿಲ್

ಪುಟ 10 ಕ್ಕೆ

ಹಾಸನ : ಮಹಿಳೆಯರಿಗೆ ಇಲ್ಲವಾಗಿದೆ ರಕ್ಷಣೆ

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲವಾದ ವರ್ಗದ ಹೆಣ್ಣು ಮಕ್ಕಳು ಹೆಚ್ಚು ಬಲಿಯಾಗುತ್ತಿದ್ದಾರೆ ಎಂಬುದು ಸಾಬೀತಾಗುತ್ತದೆ. ಇಂತಹ ಎಲ್ಲ ಘಟನೆಗಳಿಗೂ ತಾತ್ಕಾಲಿಕ ಪರಿಹಾರ ಹುಡುಕುವುದರ ಜೊತೆಗೆ ಒಂದು ಶಾಶ್ವತ ಪರಿಹಾರ ಸಿಗಬೇಕಿದೆ.

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ಪ್ರಕರಣ ಮತ್ತು ಅದರ ವಿರುದ್ಧ ದೇಶವ್ಯಾಪಿ ನಡೆದ ಪ್ರತಿಭಟನೆಗಳಿಂದ ದೇಶದ ಮೂಲೆ ಮೂಲೆಗಳಲ್ಲೂ ಅತ್ಯಾಚಾರದ ಪ್ರಕರಣಗಳು ಹೆಚ್ಚು ಬೆಳಕಿಗೆ ಬರುತ್ತಿದ್ದು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಮತ್ತು ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಸೂಕ್ತ ರಕ್ಷಣೆ ಸಿಗಬೇಕೆನ್ನುವ ಕೂಗು ಹೆಚ್ಚುತ್ತಿದೆ. ಇದರ ಬೆನ್ನಲ್ಲೇ ಕಳೆದ ಡಿಸೆಂಬರ್ ತಿಂಗಳೊಂದರಲ್ಲೇ ಹಾಸನ ಜಿಲ್ಲೆಯಲ್ಲಿ ಇಂತಹ ನಾಲ್ಕು ಪ್ರಕರಣಗಳು ಬೆಳಕಿಗೆ ಬಂದಿವೆ.

ವಂಚನೆ ಅತ್ಯಾಚಾರ:

ಒಂದನೆಯದು ಆಲೂರು ತಾಲ್ಲೂಕಿಗೆ ಸೇರಿಧ ಕದಬಳ್ಳಿ ಎಂಬ ಊರಿನ 16 ವರ್ಷದ ದಲಿತ ಹೆಣ್ಣು ಮಗಳನ್ನು ಗಾರ್ಮೆಂಡ್ಸ್‌ನಲ್ಲಿ ಕೆಲಸವನ್ನು ಕೊಡಿಸುವ ನೆಪಹೇಳಿ ನಿರಂತರವಾಗಿ ಆಕೆಯನ್ನು ಅತ್ಯಾಚಾರಕ್ಕೊಳ ಪಡಿಸಿದ್ದಾನೆ ಮತ್ತು ಈ ವಿಷಯವನ್ನು ಯಾರ ಬಳಿಯಲ್ಲಾದರೂ ಹೇಳಿದರೆ ನಿನ್ನ ಮರ್ಯಾದೆಯೇ ಹೋಗುತ್ತದೆಂದು ಹೆದರಿಸಿದ್ದಾನೆ. ಇದಲ್ಲದೆ ಈಕೆಯನ್ನು ವೇಶ್ಯಾವಾಟಿಕೆಗೆ ತಳ್ಳಲು ಕೆಲವರ ಬಳಿ ಹಣವನ್ನು ಪಡೆದಿದ್ದ ಎನ್ನಲಾಗಿದೆ. ಇಷ್ಟೆಲ್ಲವನ್ನು ಮಾಡಿದ ಅವನು ಹುಡುಗಿಯನ್ನು ಯಾರು ಇಲ್ಲವೆಂಬ ಕಾರಣ ನೀಡಿ ಬಾಲ ಮಂದಿರಕ್ಕೆ ತಂದು ಬಿಟ್ಟು ಹೋಗಿದ್ದಾನೆ. ಅಲ್ಲಿ ಆಕೆ ಅಧಿಕಾರಿಗಳ ಜೊತೆ ನಡೆದದ್ದೆಲ್ಲವನ್ನು ಹಂಚಿಕೊಂಡಾಗ ಪ್ರಕರಣ ಬೆಳಕಿಗೆ ಬಂದಿದೆ ಆದರೆ ಆರೋಪಿಯನ್ನು ಇದುವರೆಗೂ ಬಂಧಿಸಿಲ್ಲ.

ಶಿಕ್ಷಕನಿಂದ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ:

ಎರಡನೆಯದು ಹಾಸನ ನಗರದ ಸಂತೇಪೇಟೆ ಪ್ರಾಥಮಿಕ ಪಾಠಶಾಲೆಯಲ್ಲಿ ಪಾಠಮಾಡುವ ರಾಜಪ್ಪ ಎಂಬ 40 ವರ್ಷದ ಶಿಕ್ಷಕ ತನ್ನ ಮಗಳಂತಿರುವ ಅದೇ ಶಾಲೆಯ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ



6ನೇ ತರಗತಿ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿದ್ದಾನೆ. 'ಇದನ್ನು ಪ್ರಶ್ನಿಸಿ ಶಾಲೆಯ ಬಳಿ ಪ್ರತಿಭಟನೆ ಮಾಡಲು ಮುಂದಾದ ಸಾರ್ವಜನಿಕರ ಮೇಲೆ ಪೋಲೀಸರು ತಮ್ಮ 'ಪೌರುಷ'ವನ್ನು ತೋರಿಸಿ ಲಾಠಿಯ ರುಚಿ ತೋರಿಸಿದ್ದಾರೆ. ಆದರೆ ಇದೇ ಪೋಲೀಸರು ಪ್ರಾಮಾಣಿಕವಾಗಿ ಆರೋಪಿಗಳನ್ನು ಬಂಧಿಸುವಲ್ಲಿ ತಮ್ಮ 'ಪೌರುಷ'ವನ್ನು ತೋರಿಸುತ್ತಿಲ್ಲ. ಶಿಕ್ಷಣ ಇಲಾಖೆಯು ಈ ಶಿಕ್ಷಕನನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದೆ.

ಸಹಾಯ ಕೇಳಿದರೆ....

ಮೂರನೆಯದು, ಗೊರೂರು ಹೋಬಳಿಯ ಕಟ್ಟಾಯ ಎಂಬ ಗ್ರಾಮದ 8ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಯು ಶಾಲೆಯಲ್ಲಿ ಪ್ರವಾಸ ಹೊರಟಿದ್ದ ಸಂದರ್ಭದಲ್ಲಿ ಆಕೆಯನ್ನು ಶಾಲೆಯ ಬಳಿ ಬಿಟ್ಟು ಬರಲು ಯಾವುದೇ ವಾಹನವಿಲ್ಲದ ಪೋಷಕರು ತಮ್ಮ ಎದುರು ಮನೆಯವನನ್ನು ವಿನಂತಿಸಿದ್ದಾರೆ. ಅದಕ್ಕೊಪ್ಪಿದ ಆತ ಈಕೆಯನ್ನು ದ್ವಿಚಕ್ರ ವಾಹನದಲ್ಲಿ ಕೂರಿಸಿಕೊಂಡು ಹೋಗಿ ಊರಿನ ಹೊರವಲಯದಲ್ಲಿ ಬೈಕ್ ಕೆಟ್ಟು ಹೋಗಿದೆ ಎಂಬ ನೆಪ ಹೇಳಿ ಆಕೆಯ ಮೇಲೆ ಅತ್ಯಾಚಾರವನ್ನು ನಡೆಸಿ, ಈ ವಿಷಯವನ್ನು ಯಾರಿಗೂ ಹೇಳದಂತೆ ಬೆದರಿಸಿ ಆಕೆಯನ್ನು ಶಾಲೆಯ ಬಳಿ ಬಿಟ್ಟು ಬಂದಿದ್ದಾನೆ. 2 ದಿನಗಳ ನಂತರ ವಿದ್ಯಾರ್ಥಿನಿ ಪ್ರವಾಸ ಮುಗಿಸಿ ಮನೆಗೆ ಬಂದ ಮೇಲೆ 3-4 ದಿನಗಳು ಆಕೆಯ ನಡವಳಿಕೆಗಳಲ್ಲಿನ ಬದಲಾವಣೆಗಳನ್ನು ಗಮನಿಸಿದ ತಾಯಿ ಆಕೆಯನ್ನು ಕೇಳಿದಾಗ ಆಕೆ ಎಲ್ಲ ವಿಷಯವನ್ನು ಹೇಳಿದ್ದಾಳೆ. ತಕ್ಷಣ ಊರಿನಲ್ಲಿ ಪಂಚಾಯ್ತಿ ಸೇರಿಸಿ ಆತನಿಗೆ ದಂಡ ಹಾಕಲು ಗ್ರಾಮಸ್ತರು ಮುಂದಾದಾಗ ಅದಕ್ಕೆ ಆತ ಒಪಲ್ಲಿಲ್ಲವೆಂದು ಈ ಪ್ರಕರಣ ಪೋಲೀಸ್ ಠಾಣೆಯ ಮೆಟ್ಟಿಲೇರಿದೆ. ಇಲ್ಲದಿದ್ದರೆ ಕೇವಲ ದಂಡ ವಸೂಲಿ ಮಾಡಿ ಈ ಪ್ರಕರಣವನ್ನು ಅಲ್ಲಿಯೇ ಮುಚ್ಚಿ ಹಾಕಲಾಗುತ್ತಿತ್ತು.

ನಾಲ್ಕನೆಯದು, ಅರಸೀಕೆರೆಯಲ್ಲಿ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಯ ಮೇಲೆ ಒಂದು ವಾರಗಳ ಕಾಲ ನಾಲ್ಕು ಜನ ನಿರಂತರವಾಗಿ ಅತ್ಯಾಚಾರವನ್ನು ನಡೆಸಿರುವ ಹೀನಾಯ ಪ್ರಕರಣ.

ಜಿಲ್ಲೆಯಾದ್ಯಂತ ಸುದ್ದಿಯೇ ಆಗದೇ ಅದೆಷ್ಟು ಲೈಂಗಿಕ ಕಿರುಕುಳ, ಅತ್ಯಾಚಾರ ಮತ್ತು ಹೆಣ್ಣು ಮಕ್ಕಳ ಅಪಹರಣದಂತಹ ಪ್ರಕರಣಗಳು ನಡೆಯುತ್ತಿವೆಯೋ ತಿಳಿಯದಾಗಿದೆ. ಇವೆಲ್ಲವುಗಳಿಗೆ ಉತ್ತರ ನೀಡಬೇಕಾದ ಪೋಲೀಸ್ ಇಲಾಖೆ ಕಾರ್ಯ ಪ್ರವೃತ್ತವಾಗದೇ ತನ್ನ ಗುಪ್ತಚರ ವಿಭಾಗವನ್ನು ಸಂಪೂರ್ಣ ನಿದ್ದೆಗೆ ತಳ್ಳಿದೆ. ರಾಜ್ಯ ಸರ್ಕಾರ ಇಂತಹ ಪ್ರಕರಣಗಳನ್ನು ಗಂಭೀರವಾಗಿ ತೆಗೆದುಕೊಂಡರೆ ಆಗ ಪೋಲೀಸ್ ಇಲಾಖೆ ಚುರುಕುಗೊಳ್ಳುತ್ತದೆ. ಆದರೆ ಭಿನ್ನಮತ ಕುರ್ಚಿ ಉಳಿಸಿಕೊಳ್ಳುವುದೇ ಸವಾಲಾಗಿರುವ ಬಿಜೆಪಿ ಸರ್ಕಾರದಿಂದ ನಾವು ಇಂತಹ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲದಂತಾಗಿದೆ.

ಜಿಲ್ಲೆಯಲ್ಲಿ ಪಾಳೇಗಾರಿ ಮೌಲ್ಯಗಳು ಇನ್ನು ಜೀವಂತವಿರುವ ಕಾರಣಕ್ಕೆ ಜಿಲ್ಲೆಯ ಹೆಣ್ಣು ಮಕ್ಕಳನ್ನು ಗಂಡನ ಗುಲಾಮನಂತೆ ಕಾಣುವ ಮತ್ತು ಇಂತಹ ಪ್ರಕರಣಗಳಲ್ಲಿ ಅತ್ಯಾಚಾರಿಗಳನ್ನು ರಕ್ಷಿಸುವಂತಹ ಮನೋಭವ ಮತ್ತು ನೊಂದ ಮಹಿಳೆಯರ ಪರ ಪ್ರಬಲವಾದ ಧ್ವನಿ ಏಳದಿರುವ ಪರಿಸ್ಥಿತಿಯನ್ನು ಕಾಣುತ್ತೇವೆ.

ಒಟ್ಟಾರೆ ಈ ಎಲ್ಲಾ ಪ್ರಕರಣಗಳನ್ನು ಗಮನಿಸಿದರೆ ಜಿಲ್ಲೆಯಲ್ಲಿ ಹೆಣ್ಣುಮಕ್ಕಳಿಗೆ ಭದ್ರತೆ ಇಲ್ಲವೆಂಬುದು ಖಾತ್ರಿಯಾಗಿದೆ. ಇಂತಹ ಪ್ರಕರಣಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲವಾದ ವರ್ಗದ ಹೆಣ್ಣು ಮಕ್ಕಳು ಹೆಚ್ಚು ಬಲಿಯಾಗುತ್ತಿದ್ದಾರೆ ಎಂಬುದು ಸಾಬೀತಾಗುತ್ತದೆ. ಇಂತಹ ಎಲ್ಲ ಘಟನೆಗಳಿಗೂ ತಾತ್ಕಾಲಿಕ ಪರಿಹಾರ ಹುಡುಕುವುದರ ಜೊತೆಗೆ ಒಂದು ಶಾಶ್ವತ ಪರಿಹಾರ ಸಿಗಬೇಕಿದೆ. ಮಹಿಳೆಯ ಹಕ್ಕುಗಳನ್ನು ಗೌರವಿಸುವ, ಮಹಿಳೆಯನ್ನು ಮನುಷ್ಯಗಳಂತೆ ಪುರುಷರಿಗೆ ಎಲ್ಲ ವಿಷಯಗಳಲ್ಲೂ ಸರಿ ಸಮಾನವಾಗಿ ಕಾಣುವಂತಹ ಸಾಮಾಜಿಕ ಬದಲಾವಣೆ ನಮ್ಮ ಸಮಾಜಕ್ಕೆ ಅಗತ್ಯವಾಗಿದೆ. ಇದಲ್ಲದೇ ನಮ್ಮ ಇಂದಿನ ಕಾನೂನುಗಳನ್ನು ಬಿಗಿಗೊಳಿಸಿ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಬೇಕಾದದ್ದು ಆಳುವ ಸರ್ಕಾರಗಳ ಆದ್ಯ ಕರ್ತವ್ಯವಾಗಿದೆ. ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳನ್ನು ಖಂಡಿಸಿ ಎಸ್‌ಎಫ್‌ಐ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸಿದ್ದಾರೆ.

– ಎಚ್.ಆರ್.ನವೀನ್ ಕುಮಾರ್

ತೃಣಮೂಲ ಪಕ್ಷದ ನಾನಾ ಮುಖಗಳು.....

ಪುಟ 9 ರಿಂದ

ಸಭೆಯಲ್ಲಿ ಅವರು ತೃಣಮೂಲ ಸರ್ಕಾರದ ಸಚಿವರು, ಮುಖಂಡರ ಎದುರಿಗೇ ತೃಣಮೂಲ ಪಕ್ಷದ ವಿದ್ಯಾರ್ಥಿ ಘಟಕದ ಗೂಂಡಾಗಿರಿಯನ್ನು ಖಂಡಿಸಿ ಕಣ್ಣೀರು ಸುರಿಸುತ್ತಾ ಈ ಮಾತನ್ನು ಹೇಳಿದ್ದರು. ಅಂದರೆ ಪರಿಸ್ಥಿತಿ ಯಾವ ಮಟ್ಟ ತಲುಪಿದೆ ಎಂದು ನಾವು ಊಹಿಸಿಕೊಳ್ಳಬೇಕಾಗಿದೆ.

ಹೌದು ಅದೇ ಗೂಂಡಾ ವ್ಯಕ್ತಿಯೇ

ಆ ಸಭೆಯಲ್ಲಿ ಸುಗತ ರಾಯ್ ಅವರು ಅಷ್ಟು ಮಾತ್ರ ಹೇಳಿಲ್ಲ. ಅಶುತೋಶ್ ಕಾಲೇಜು ಆಡಳಿತ ಮಂಡಳಿಗೆ ತೃಣಮೂಲ ಸರ್ಕಾರ ಅರ್ಹರಲ್ಲದವರನ್ನು ನೇಮಕ ಮಾಡಿದೆ ಎಂದೂ ಅಲವತ್ತುಕೊಂಡಿದ್ದರು. ತಾನು ಹೇಳಿದಂತೆ ಕೇಳಲಿಲ್ಲ ಎಂಬ ಕಾರಣಕ್ಕೆ ದೇಬ್‌ಜಾನಿ ದೇ ಎಂಬ ಶಿಕ್ಷಕಿಯ ಮುಖಕ್ಕೆ ಜಗ್‌ನಲ್ಲಿದ್ದ ನೀರನ್ನು ಎರಚಿದ ವ್ಯಕ್ತಿಯನ್ನು ತಮ್ಮ. ಕಾಲೇಜಿನ ಗೌರ್ನಿಂಗ್ ಕೌನ್ಸಿಲ್ ನೇಮಿಸಲಾಗಿದೆ. ಅಲ್ಲದೇ ಆ ವ್ಯಕ್ತಿ ಓದಿರುವುದು ಕೇವಲ 8 ನೇ ತರಗತಿಯನ್ನಷ್ಟೆ ಎಂದು ಸುಗತರಾಯ್ ಅಂದು ತಮ್ಮದೇ ಸರ್ಕಾರದ ಕ್ರಮದ ವಿರುದ್ಧವೇ ತಗಾದೆ ಎತ್ತಿದ್ದರು.

ಶಿಕ್ಷಕಿಯ ಮುಖಕ್ಕೆ ಜಗ್ ನೀರನ್ನು ಎರಚಿದ ಆ ಭೂಪ ಯಾರು ಗೊತ್ತೆ ? ಅದೇ ಈಗ ಸಿಪಿಐ(ಎಂ)ನ ಹಾಲಿ ಶಾಸಕರಾದ ಅಬ್ದುಲ್ ರಜಾಕ್ ಮುಲ್ಲಾ ಅವರ ಮೇಲೆ ದಾಳಿ ಮಾಡಿರುವ ತೃಣಮೂಲ ಕಾಂಗ್ರೆಸ್‌ನ ಸೋತ ಅಭ್ಯರ್ಥಿ, ಬಾನಗರ್ ಕ್ಷೇತ್ರದ ಮಾಜಿ ಶಾಸಕ ಅರಬುಲ್ ಇಸ್ಲಾಮ್. ಇಷ್ಟು ಹೇಳಿದ ಮೇಲೆ ಪಶ್ಚಿಮ ಬಂಗಾಳದಲ್ಲಿ ಏನು ನಡೆಯುತ್ತಿದೆ ಮತ್ತು ಎಡರಂಗ ಮತ್ತು ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರ ಮೇಲೆ ಯಾಕೆ ಹಲ್ಲೆಗಳು ನಡೆಯುತ್ತಿವೆ ಎಂದು ಚೆನ್ನಾಗಿಯೇ ಅರ್ಥವಾಗುತ್ತದೆ.

ಪಶ್ಚಿಮ ಬಂಗಾಳದ ಪ್ರಜ್ಞಾವಂತ ಜನ ಇಂತಹ ಪ್ರಜಾಪ್ರಭುತ್ವ ವಿರೋಧಿ ದೌರ್ಜನ್ಯಗಳನ್ನು ಸಹಿಸಿಕೊಳ್ಳುವುದಿಲ್ಲ ಎಂಬುದೇ ಒಂದು ಆಶಾದಾಯಕವಾದ ಅಂಶವಾಗಿದೆ.

ಸಿಐಟಿಯು 3ನೇ ಹಾಸನ ಜಿಲ್ಲಾ ಸಮ್ಮೇಳನ

ಸಂಘರ್ಷಕ್ಕೆ ಮುನ್ನುಡಿ


'ಬೆಲೆ ಏರಿಕೆ ವಿರುದ್ಧ, ದುಡಿಯುವವರ ಹಕ್ಕುಗಳಿಗಾಗಿ ಸಾಗಿದೆ ಕಾರ್ಮಿಕ ವರ್ಗದ ಸಂಘರ್ಷ' ಎಂಬ ಘೋಷಣೆಯನ್ನಿಟ್ಟುಕೊಂಡು ಸಿಐಟಿಯುವಿನ 3ನೇ ಜಿಲ್ಲಾ ಸಮ್ಮೇಳನವು ಹಾಸನದ ಶ್ರೀಕೃಷ್ಣ ಕಲ್ಯಾಣ ಮಂಟಪದಲ್ಲಿ ಡಿಸೆಂಬರ್ 29-30 ರಂದು ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಜಿಲ್ಲೆಯಲ್ಲಿ ತೋಟ ಕಾರ್ಮಿಕರು, ಕಾಫಿಕ್ಯೂರಿಂಗ್ ಕಾರ್ಮಿಕರು, ಗ್ರಾಮಪಂಚಾಯ್ತಿ, ಅಂಗನವಾಡಿ, ಅಕ್ಷರದಾಸೋಹ, ಮುನ್ಸಿಪಲ್, ಹಮಾಲಿ ಕಾರ್ಮಿಕರು, ಕಾರ್ಖಾನೆ ಕಾರ್ಮಿಕರು, ಆಶಾ ಕಾರ್ಯಕರ್ತರು, ಕಂಪ್ಯೂಟರ್ ಶಿಕ್ಷಕರು, ಆಟೋಚಾಲಕರು ಮುತ್ತಿತರೆ ವಿಭಾಗದ ಕಾರ್ಮಿಕರು ಮತ್ತು ನೌಕರರು ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿದ್ದಾರೆ, ಹಾಸನ ಜಿಲ್ಲೆ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಇಲ್ಲಿ ಹೇಳಿಕೊಳ್ಳುವಂತಹ ಬೃಹತ್ ಕೈಗಾರಿಕೆಗಳು ಬೆಳೆದಿಲ್ಲ. ಇರುವ ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಪ್ರದೇಶದಲ್ಲಿ ಗಾರ್ಮೆಂಟ್ಸ್ ಮತ್ತು ಟೈಲ್ಸ್ ಕಾರ್ಖಾನೆಗಳೇ ಹೆಚ್ಚಾಗಿವೆ. ಆದರೂ ಜಿಲ್ಲೆಯಲ್ಲಿ ಅಸಂಘಟಿತ ಕ್ಷೇತ್ರದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದು ಇವರ ಜೀವನ ಸ್ಥಿತಿ ಚಿಂತಾಜನಕವಾಗಿದೆ. ಜಿಲ್ಲೆಯ ಸಕಲೇಶಪುರ, ಬೇಲೂರು ಮತ್ತು ಆಲೂರು 3 ತಾಲ್ಲೂಕುಗಳಲ್ಲಿ ಕಾಫಿ ತೋಟಗಳಿದ್ದು ಇಲ್ಲಿ ಖಾಯಂ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಇಳಿಮುಖಗೊಂಡಿದ್ದು ರಾಜ್ಯದ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ವಲಸೆ ಬಂದ ಸಾವಿರಾರು ಕಾರ್ಮಿಕರು ದಿನಗೂಲಿಯಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ ಯಾವುದೇ ಸಾಮಾಜಿಕ ಭದ್ರತೆ ಇರುವುದಿಲ್ಲ.

ಜಿಲ್ಲೆಯ ಕಾರ್ಮಿಕರ ಹಕ್ಕುಗಳಿಗಾಗಿ ನಡೆದಿರುವ ಚಳುವಳಿಗಳು ಕಾರ್ಮಿಕ ವರ್ಗದಲ್ಲಿ ಸ್ಫೂರ್ತಿ ನೀಡುವ ಜೊತೆಗೆ ಅವರ ಬದುಕನ್ನು ಹಸನು ಮಾಡಿಕೊಳ್ಳಲು ಅಗತ್ಯವಿರುವ ಕೂಲಿ, ಸೌಲಭ್ಯಗಳನ್ನು ಒದಗಿಸಿಕೊಡಲು ನಿರಂತರವಾಗಿ ಪ್ರಯತ್ನಿಸುತ್ತಿದೆ ಎಂದು ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಅಭಿಪ್ರಾಯ ಹಂಚಿಕೊಂಡರು. ಅದರಲ್ಲಿ ಹಾಸನದ ನಗರಸಭೆಯಲ್ಲಿ ಕೆಲಸ ಮಾಡುವ ಗುತ್ತಿಗೆ ಪೌರ ಕಾರ್ಮಿಕರು 25-30 ವರ್ಷಗಳು ಸತತವಾಗಿ ಜೀತದ ರೀತಿಯಲ್ಲಿ ನಗರವನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿದ್ದರೂ ಅವರಿಗೆ ತಿಂಗಳಿಗೆ ಕೇವಲ 3000 ರೂಗಳನ್ನು ಕೂಲಿಯಾಗಿ ಕೊಡಲಾಗುತ್ತಿತ್ತು ಜೊತೆಗೆ ಯಾವುದೇ ಸುರಕ್ಷತಾ ಕ್ರಮುಗಳಾಗಲೀ, ಅಗತ್ಯ ಸೌಲಭ್ಯಗಳನ್ನಾಗಲೀ ಒದಗಿಸಿರಲಿಲ್ಲ. ಆದರೆ ಎಲ್ಲ ಕಾರ್ಮಿಕರು ಸಿಐಟಿಯುವಿಗೆ ಸೇರ್ಪಡೆಗೊಂಡು ನಿರಂತರ ಹೋರಾಟಗಳನ್ನು ನಡೆಸಿದ ನಂತರ ಈಗ ತಿಂಗಳಿಗೆ 5,500 ರೂಪಾಯಿ ಕೂಲಿಯನ್ನು ಪಡೆಯುತ್ತಿದ್ದು ಇದು ಸಾಧ್ಯವಾಗಿದ್ದು ಸಿಐಟಿಯುವಿನಿಂದ. ಸಿಐಟಿಯು ಕೇವಲ ಕೂಲಿ ಹೆಚ್ಚಳ ಮಾಡಿದ್ದಲ್ಲದೆ ದಲಿತ ವಿಭಾಗದ ಪೌರಕಾಮಿಕರನ್ನ ಎಲ್ಲರಂತೆಯೇ ಸಮಾನವಾಗಿ ಕಾಣುತ್ತಿರುವುದು ನಮಗೆ ಇನ್ನಿಲ್ಲದ ಅಭಿಮಾನವನ್ನು ತಂದಿದೆ ಎಂದು ಸ್ವತಃ ಪೌರಕಾರ್ಮಿಕರಾಗಿ ಕೈಯಲ್ಲಿ ಪೊರಕೆ ಹಿಡಿದು ದಿನನಿತ್ಯ ನಗರವನ್ನು ಸ್ವಚ್ಛಗೊಳಿಸುವ ಅರುಂದತಿಯವರು ಜಿಲ್ಲಾ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿ ಅವರ ಅಭಿಪ್ರಾಯಗಳನ್ನು ಮನಮುಟ್ಟುವಂತೆ ಹಂಚಿಕೊಂಡರು.



ಜಿಲ್ಲೆಯಲ್ಲಿ ಈ ಹಿಂದೆ ಅಂದರೆ 2009 ಸೆಪ್ಟೆಂಬರ್ 15 ರಂದು ನಡೆದ ಅಸಂಘಟಿತ ಕಾರ್ಮಿಕರ ಸಂಘರ್ಷಾತ್ಮಕ ಹೋರಾಟವನ್ನು ಜಿಲ್ಲೆಯ ಕಾರ್ಮಿಕವರ್ಗ ಇನ್ನೂ ಮರೆತಿಲ್ಲ. ಈ ಸಮ್ಮೇಳನದಲ್ಲೂ ಈ ವಿಚಾರ ಚರ್ಚೆಗೆ ಬಂದಿದ್ದು ಅಂದು ನಡೆದ ರೀತಿಯಲ್ಲಿ ಸಂಘರ್ಷಾತ್ಮಕ ಹೋರಾಟವನ್ನು ಜಿಲ್ಲೆಯಲ್ಲಿ ಮತ್ತೊಮ್ಮೆ ಕಟ್ಟಲು ಎಲ್ಲ ವಿಭಾಗಗಳಿಗೂ ಸಿಐಟಿಯುವನ್ನು ವಿಸ್ತರಿಸಬೇಕು ಮತ್ತು ಈಗಿರುವ ಸಂಘಟನೆ ಮತ್ತು ಚಳುವಳಿಯನ್ನು ಕ್ರೋಢೀಕರಿಸಬೇಕೆಂದು ಚರ್ಚಿಸಲಾಯಿತು.



ಮೊದಲ ದಿನ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಸಿಐಟಿಯುವಿನ ಅಖಿಲ ಭಾರತ ಕಾರ್ಯದರ್ಶಿಗಳಾದ ಕಾಂ.ಎಸ್.ವರಲಕ್ಷ್ಮಿ ಯವರು ಉಧ್ಘಾಟಿಸಿದರು.

ಎರಡನೇ ದಿನ ಜಿಲ್ಲೆಯ ಎಲ್ಲ ವಿಭಾಗದ ಸಾವಿರಾರು ಕಾರ್ಮಿಕರ ಆಕರ್ಷಕ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಿ ಅಂತಿಮವಾಗಿ ಸಾಹಿತ್ಯ ಪರಿಷತ್ ಭವನದ ಆವರಣದಲ್ಲಿ ಆಯೋಜಿಸಿದ್ದ ಬಹಿರಂಗ ಸಭೆಗೆ ಬಂದು ಸೇರಿತು ಮೆರವಣಿಗೆಯಲ್ಲಿ ಭಾಗವಹಿಸಿದ್ದವರು ಕೆಂಪು ಸಮವಸ್ತ್ರಗಳನ್ನು ತೊಟ್ಟಿದ್ದರು. ಎಲ್ಲರ ಕೈಗಳಲ್ಲೂ ಕೆಂಬಾವುಟಗಳು ರಾರಾಜಿಸುತ್ತಿದ್ದವು. ಈ ಆಕರ್ಷಣೀಯವಾದ ಮೆರವಣಿಗೆಯನ್ನು ನೋಡಿದಾಗ 'ನೆನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು' ಎನ್ನುವ ಹಾಡು ನೆನಪಿಗೆ ಬರುತ್ತಿತ್ತು.

ಬಹಿರಂಗ ಸಭೆಯನ್ನು ಸಿಐಟಿಯುವಿನ ರಾಜ್ಯ ಕಾರ್ಯದರ್ಶಿ ಕಾಂ.ಸೈಯ್ಯದ್ ಮುಜೀಬ್ ಉದ್ಘಾಟಿಸಿದರು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ವಿ.ಸುಕುಮಾರ್ ವಹಿಸಿದ್ದರು ಪ್ರಧಾನ ಕಾರ್ಯದರ್ಶಿಗಳಾದ ಧರ್ಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮ್ಮೇಳನದಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳು

ನಿರ್ಣಯ-1 : ಅಗತ್ಯ ವಸ್ತುಗಳ ಹಾಗೂ ಆಹಾರ ಪದಾರ್ಥಗಳ ಬೆಲೆ ಏರಿಕೆ, ಗುತ್ತಿಗೆ ಕಾರ್ಮಿಕ ಪದ್ಧತಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ, ಕಾರ್ಮಿಕ ಹಾಗೂ ಜನವಿರೋಧಿ ನೀತಿಗಳನ್ನು ವಿರೋಧಿಸಿ ಮತ್ತು ರೂ.10ಸಾವಿರ ಮಾಸಿಕ ಕನಿಷ್ಟ ವೇತನಕ್ಕಾಗಿ, ಸಾರ್ವಜನಕ ಪಡಿತರ ವ್ಯವಸ್ಥೆಯ ಸಾರ್ವತ್ರೀಕರಣಕ್ಕಾಗಿ, ಜನಪರ ನೀತಿಗಳಿಗಾಗಿ ಆಗ್ರಹಿಸಿ, ದೇಶದ 11 ಕೇಂದ್ರ ಕಾರ್ಮಿಕ ಸಂಘಟನೆಗಳು "ಕಾರ್ಮಿಕ ಸಂಘಗಳ ಜಂಟಿ ಸಮಿತಿ(ಜೆಸಿಟಿಯು)" ನೇತೃತ್ವದಲ್ಲಿ ಕರೆ ನೀಡಿರುವ 2013ರ ಫೆಬ್ರವರಿ 20 ಮತ್ತು 21ರ ಎರಡು ದಿನಗಳ "ಅಖಿಲ ಭಾರತ ಮಹಾ ಮುಷ್ಕರವನ್ನು" ಹಾಸನ ಜಿಲ್ಲೆಯಲ್ಲಿ ಸಂಪೂರ್ಣ ಯಶಸ್ವಿಗೊಳಿಸುವ ನಿರ್ಣಯ ಕೈಗೊಳ್ಳಲಾಯಿತು.

ನಿರ್ಣಯ-2: ವಿದ್ಯಾರ್ಥಿನಿಯರು, ಯುವತಿಯರು ಹಾಗೂ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರದಂತಹ ಪ್ರಕರಣಗಳು ಹೆಚ್ಚುತ್ತಿರುವುದು ಅತ್ಯಂತ ಕಳವಳಕಾರಿ ಹಾಗೂ ನಾಗರೀಕ ಸಮಾಜ ತಲೆತಗ್ಗಿಸುವಂತ ವಿಚಾರವಾಗಿದೆ ಎಂದು ಸಮ್ಮೇಳನ ಅಭಿಪ್ರಾಯ ಪಟ್ಟಿತು. ಇದರ ತಡೆಗೆ ಕಠಿಣ ಕಾನೂನು ರೂಪಿಸುವ ಅವಶ್ಯಕತೆಯಿರುವುದರ ಜೊತೆಗೆ ಎಲ್ಲಕಿಂತ ಮುಖ್ಯವಾಗಿ ಮಹಿಳೆಯನ್ನು ಭೋಗದ ಸರಕನ್ನಾಗಿ ಬಿಂಬಿಸುವ ಪಾಳೇಗಾರೀ ಪುರುಷ ಪ್ರಧಾನ ಹಾಗೂ ಸರಕು ಸಂಸ್ಕೃತಿಯ ಬಂಡವಾಳಶಾಹಿ ಮನಸ್ಥಿತಿಯ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಪ್ರಜ್ಞಾವಂತ ಜನಸಮುದಾಯ ಹೋರಾಟಕ್ಕಿಳಿಯಬೇಕಿದೆ ಎಂದು ಸಮ್ಮೇಳನ ಅಭಿಪ್ರಾಯ ಪಟ್ಟಿತು. ಶಾಲಾ-ಕಾಲೇಜು, ಕಾರ್ಖಾನೆ-ಕಛೇರಿಗಳನ್ನೊಳಗೊಂಡಂತೆ ಸಾರ್ವಜನಕ ಹಾಗೂ ಖಾಸಗೀ ವಲಯಗಳಲ್ಲಿ "ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಸಮಿತಿಗಳನ್ನು ರಚಿಸಿ ಆ ಸಮಿತಿಗಳಿಗೆ ಪ್ರಾಮಾಣಿಕರನ್ನು ನೇಮಿಸಬೇಕು ಹಾಗೂ ಇಂತಹ ಪ್ರಕರಣಗಳ ಅಪರಾಧಿಗಳಿಗೆ ತ್ವರಿತಗತಿಯಲ್ಲಿ ಕಠಿಣ ಶಿಕ್ಷೆ ನೀಡುವಂತೆ ಕಾನೂನಿನಲ್ಲಿ ತಿದ್ದುಪಡಿಯಾಗಬೇಕೆಂದು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು.

ಇನ್ನುಳಿದಂತೆ, ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ, ಪಡಿತರ ಪದ್ದತಿ ಸಾರ್ವತ್ರೀಕರಣಕ್ಕೆ ಆಗ್ರಹಿಸಿ ನಿರ್ಣಯ ಕೈಗೊಳ್ಳಲಾಯಿತು. ಕಾರ್ಮಿಕರಿಗೆ ರೂ.10ಸಾವಿರ ಕನಿಷ್ಟ ವೇತನಕ್ಕೆ ಆಗ್ರಹಿಸಿ, ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ಅರೆಕಾಲಿಕ ಹಾಗೂ ಗೌರವ ಧನ ಆಧಾರದ ಕಾರ್ಮಿಕ ಪದ್ಧತಿ ರದ್ದು ಪಡಿಸಿ ಈ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಖಾಯಂಗೊಳಿಸಬೇಕು ಹಾಗೂ ಅಲ್ಲಿಯವರೆಗೆ ಅವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಆಗ್ರಹಿಸಿ ನಿರ್ಣಯ ಕೈಗೊಳ್ಳಲಾಯಿತು. ಕೈಗಾರಿಕಾಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಆಗ್ರಹಿಸಿ, ಕೋಮುವಾದ, ಜಾತಿವಾದ ವಿರೋಧಿಸಿ ನಿರ್ಣಯಗಳನ್ನು ಇದೇ ಸಂದರ್ಭದಲ್ಲಿ ಅಂಗೀಕರಿಸಲಾಯಿತು.

ಸಮ್ಮೇಳನದಲ್ಲಿ 15 ಜನರ ಪದಾಧಿಕಾರಿಗಳನ್ನೊಳಗೊಂಡ 51 ಜನರ ನೂತನ ಜಿಲ್ಲಾ ಸಮಿತಿ ಆಯ್ಕೆಯಾಗಿದ್ದು, ಜಿಲ್ಲಾಧ್ಯಕ್ಷರಾಗಿ ವಿ.ಸುಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಧರ್ಮೇಶ್ ಪುನರಾಯ್ಕೆಯಾಗಿದ್ದಾರೆ. ನೂತನ ಜಿಲ್ಲಾ ಸಮಿತಿಯ ಖಜಾಂಚಿಯಾಗಿ ವೈ.ಆರ್. ಮಂಜಮ್ಮ ಆಯ್ಕೆಯಾಗಿದ್ದಾರೆ. ಇನ್ನುಳಿದಂತೆ ಉಪಾಧ್ಯಕ್ಷರುಗಳಾಗಿ ಜಿ.ಪಿ.ಸತ್ಯನಾರಾಯಣ, ವೀರಣ್ಣ.ಎಸ್.ಹಳ್ಳಿ, ಇಂದಿರಮ್ಮ, ಪ್ರಕಾಶ್ ಮತ್ತು ರಾಜಶೇಖರ್ ರವರು ಆಯ್ಕೆಯಾಗಿದ್ದು, ಒಂದು ಸ್ಥಾನ ಖಾಲಿ ಉಳಿಸಲಾಗಿದೆ. ಕಾರ್ಯದರ್ಶಿಗಳಾಗಿ ಎಂ.ಬಿ.ಪುಷ್ಪ, ಕೆ.ಟಿ.ಹೊನ್ನೇಗೌಡ, ಹರೀಶ್, ಅರವಿಂದ, ಎ.ಲತ ಮತ್ತು ಸೌಮ್ಯರವರು ಆಯ್ಕೆಯಾಗಿದ್ದಾರೆ

● ಹೆಚ್ ಆರ್ ಎನ್

ಆರೋಗ್ಯ ವಿಮೆ ಮಾಹಿತಿ....

ಪುಟ 2 ರಿಂದ

ವೈರಲ್ ಸೋಂಕುಗಳು ಮುಂತಾದ ಸಮಸ್ಯೆಗಳಿಗೆ ಹೊರ ರೋಗಿಯಾಗಿದ್ದುಕೊಂಡೇ ಚಿಕಿತ್ಸೆ ಪಡೆದುಕೊಳ್ಳುವಂತಹ ಖಾಯಿಲೆಗಳು. ಈಗ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ತೆಗೆದುಕೊಳ್ಳುವ ಚಿಕಿತ್ಸೆಗೂ ಸಹ ವಿಮಾ ಕಂಪನಿಗಳು ರಕ್ಷಣೆ ಒದಗಿಸುತ್ತಿವೆ. ಆದರೆ ಪರಿಹಾರದ ಮಿತಿ ತುಂಬಾ ಕಡಿಮೆ ಇರುತ್ತದೆ.

2. ಚಿಕಿತ್ಸೆಯನ್ನು ಹಲವಾರು ಖಾಸಗಿ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಡೆಯಬಹುದು.

3. ಆರ್‌ಎಸ್‌ಬಿವೈ ವಿಮಾ ಕಂಪನಿಯಿಂದ ಹಣ ಪಡೆಯುವ ಮಿತಿ 5 ಜನರ ಕುಟುಂಬಕ್ಕೆ ಕೇವಲ 30,000. ಈ ಮಿತಿ ಬೇರೆ ಬೇರೆ ಕಂಪನಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿರುತ್ತದೆ. ಉದಾ: ಆರೋಗ್ಯ ಶ್ರೀಯಲ್ಲಿ 1 ಲಕ್ಷ 50 ಸಾವಿರ ರೂ.

4. ಆರ್‌ಎಸ್‌ಬಿವೈ ವಿಮಾ ಯೋಜನೆ ಮೊದಲು ಕೇವಲ ಬಿಪಿಎಲ್ ಕುಟುಂಬಗಳಿಗೆ ಮಾತ್ರವಿತ್ತು. ಆದರೆ ಈ ಸೌಲಭ್ಯವನ್ನು ಈಗ ಬಿಪಿಎಲ್ ಅಲ್ಲದ ಕುಟುಂಬಗಳಿಗೂ ವಿಸ್ತರಿಸಲಾಗಿದೆ.

5. ಆರ್‌ಎಸ್‌ಬಿವೈ ಯೋಜನೆಯಲ್ಲಿ ಕಂತನ್ನು ಕೇಂದ್ರ ಸರಕಾರ ಶೇ. 75 ಹಾಗೂ ರಾಜ್ಯ ಸರಕಾರ ಶೇ.25 ಎರಡೂ ಸೇರಿ ತುಂಬುತ್ತವೆ.

6. ಆರ್‌ಎಸ್‌ಬಿವೈ ಯೋಜನೆಯ ಇನ್ನೊಂದು ವಿಶೇಷತೆ ಏನೆಂದರೆ ವ್ಯಕ್ತಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋದರೂ ಅಲ್ಲಿಯೂ ಅದರ ಫಲಾನುಭವಿಯಾಗಬಹುದು.

7. ಈ ಯೋಜನೆಯಲ್ಲಿ ಚಿಕಿತ್ಸೆ ಪಡೆಯಲು ಹಲವಾರು ಖಾಸಗಿ ಆಸ್ಪತ್ರೆಗಳನ್ನು ಸಂಪರ್ಕಿಸಬಹುದು. ಆದರೆ ಕೆಲವು ಕಾಯಿಲೆಗಳಿಗೆ ಮಾತ್ರಚಿಕಿತ್ಸೆ ಪಡೆಯಲು ಮಾತ್ರ ಸಾಧ್ಯ.

8. ಈ ಯೋಜನೆಯಲ್ಲಿ ವಿಮೆಯ ಪ್ರಾರಂಭಕ್ಕೆ ಮೊದಲೂ ಇರುವ-ಪೂರ್ವಸ್ಥಿತ ಖಾಯಿಲೆಗಳಿಗೂ ವಿಮಾರಕ್ಷಣೆ ಮತ್ತು ಪ್ರಸೂತಿ (ಹೆರಿಗೆ) ಸಂಬಂಧ ವೆಚ್ಚಗಳನ್ನು ಭರಿಸಲಾಗುವುದು. ಇದುವರೆಗಿನ ಯಾವುದೇ ಕಂಪೆನಿಯ ಯಾವುದೇ ಸಾಮಾನ್ಯ ಆರೋಗ್ಯ ವಿಮಾ ಯೋಜನೆಯಲ್ಲಿಯೂ ಸಹ ಈ ಎರಡು ಅಂಶಗಳು ಸೇರಿಸಿರಲಿಲ್ಲ. ಅಷ್ಟೇ ಅಲ್ಲ ಅವುಗಳನ್ನು ನಿರ್ದಿಷ್ಟವಾಗಿ ಹೊರತು ಪಡಿಸಲಾಗುತ್ತದೆ. ಆದರೆ ಆರ್ ಎಸ್ ಬಿ ವೈ ಯೋಜನೆಯಲ್ಲಿ ಯಾವ ಖಾಯಿಲೆಯನ್ನೂ ಹೊರತು ಪಡಿಸಿಲ್ಲ ಎಂಬುದು ನಿಜ. ಆದರೆ ಈ ಎಸ್‌ಐಎಸ್ ಹಾಗೂ ಸಿಜಿಹೆಚ್‌ಎಸ್ ಯೋಜನೆಗಳಲ್ಲಿ ಎಲ್ಲಾ ರೋಗಗಳಿಗೂ ಚಿಕಿತ್ಸೆ ಪಡೆಯಲು ಸಾಧ್ಯ. ಆದ್ದರಿಂದ ಆರ್‌ಎಸ್‌ಬಿವೈ ವಿಮೆ ಸಮಗ್ರ ಚಿಕಿತ್ಸಾ ಪಾಲಿಸಿ ನೀಡುವುದಿಲ್ಲ ಎಂದೇ ಹೇಳಬೇಕಾಗುತ್ತದೆ.

9. ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸೌಲಭ್ಯಗಳು ಕಡಿಮೆ. ಆದ್ದರಿಂದ 70% ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗಬೇಕಾಗುತ್ತದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಿ ಹೆಚ್ಚು ಜನರು ವಾಸವಾಗಿದ್ದಾರೋ ಅಲ್ಲಿ ಖಾಸಗೀ ಸೇವೆಗಳು ಹೆಚ್ಚಿನ ಸಂಖ್ಯೆಯಲ್ಲಿರುವುದಿಲ್ಲ. ಪಟ್ಟಣಗಳಲ್ಲಿ ಸಣ್ಣ ನರ್ಸಿಂಗ್ ಹೋಂ ಆಸ್ಪತ್ರೆಗಳು ದಾನಿ ಸಂಸ್ಥೆಗಳೂ ಹಾಗೂ ದೊಡ್ಡ ದೊಡ್ಡ ಕಾರ್ಪೊರೇಟ್ ಆಸ್ಪತ್ರೆಗಳು ಹೆಚ್ಚಿವೆ. ಕಾರಣ ಸರಕಾರಿ ಸಂಸ್ಥೆಗಳ ಕೊರತೆ. 60% ದಾಖಲಾದ ವ್ಯಕ್ತಿ ಸರಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೆ 90% ರೋಗಿಗಳು ಖಾಸಗಿ ಆಸ್ಪತ್ರೆಗಳಲ್ಲಿ ಹೊರರೋಗಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಾರೆ.

ಆರೋಗ್ಯ ವ್ಯವಸ್ಥೆಯ ಮೇಲೆ ಪರಿಣಾಮ:

1. ವಿಮಾ ಯೋಜನೆಯ ಸೌಲಭ್ಯವನ್ನು ಪಡೆಯಲು ಒಂದು ಮುಖ್ಯಕಾರಣ ಬಡತನ. ಅವರಿಗೆ ವಿಮಾ ಯೋಜನೆ ದೊರಕಲು ಖಾಸಗಿ ಆಸ್ಪತ್ರೆ ಬೇಕು. ಆದರೆ ಗ್ರಾಮೀಣ ಪ್ರದೇಶದಲ್ಲಿ ಖಾಸಗಿ ಹಾಗೂ ಕಾರ್ಪೊರೇಟ್ ಆಸ್ಪತ್ರೆಗಳ ಸಂಖ್ಯೆ ಕಡಿಮೆ.

2. ವಿಮಾ ಕಂಪನಿಗಳು ವಿಮಾ ಸೌಲಭ್ಯದ ಬಗ್ಗೆ ಜನರಿಗೆ ಪೂರ್ವಗ್ರಹವಿಲ್ಲದ ಮಾಹಿತಿ ನೀಡಬೇಕಾಗುತ್ತದೆ. ಒಂದು ಖಾಸಗಿ ವಿಮಾ ಕಂಪನಿ ಹೇಗೆ ಪೂರ್ವಾಗ್ರಹವಿಲ್ಲದ ಮಾಹಿತಿ ನೀಡಲು ಸಾಧ್ಯ? ಜನರಿಗೆ ಆಯ್ಕೆಯ ಸ್ವಾತಂತ್ರ್ಯ ಇರಬೇಕಾಗುತ್ತದೆ. ಆದರೆ ವಿಮಾ ಯೋಜನೆಗಳು ಇದನ್ನು ಕಡೆಗಣಿಸಿವೆ. ಆದರೆ ಜನಸಾಮಾನ್ಯರು ಯಾವುದೇ ರೀತಿಯ ವಿಮೆಯನ್ನು ಅಗತ್ಯವೆಂದು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದಲೇ ಕೆಲವು ಮುಂದುವರಿದ ರಾಷ್ಟ್ರಗಳಲ್ಲಿಯೂ ಸಹ ಆರೋಗ್ಯ ವಿಮೆಯನ್ನು ಕಡ್ಡಾಯಗೊಳಿಸಬೇಕಾಗಿದೆ.

3. ಆರ್‌ಎಸ್‌ಬಿವೈ ಯೋಜನೆ ಜಾರಿಗೆ ಬಂದ ಜಿಲ್ಲೆಗಳಲ್ಲಿ ಗರ್ಭಕೋಶದ ಆಪರೇಶನ್‌ಗಳನ್ನು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಮಾಡಲಾಗುತ್ತದೆ. ಆರ್‌ಎಸ್‌ಬಿವೈನಲ್ಲಿನ ಅವ್ಯವಹಾರವನ್ನು ಹೊರತೆಗೆಯಲು ಛತ್ತೀಸ್‌ಗಢ್‌ನಲ್ಲಿ ಆರೋಗ್ಯ ನಿರ್ದೇಶಕರು (ಜನರ ಒತ್ತಡದ ಪರಿಣಾಮವಾಗಿ) ಸತ್ಯ ಶೋಧನ ಸಮಿತಿ ನೇಮಕ ಮಾಡಿ ಕೆಲವು ವೈದ್ಯರನ್ನು ಕೆಲಸದಿಂದ ಅಮಾನತ್ತಿನಲ್ಲಿಟ್ಟ ಘಟನೆ ಬೆಳಕಿಗೆ ಬಂದಿದೆ. (ಇದು ವಿಮಾ ಯೋಜನೆಯಲ್ಲಿನ ಅವ್ಯವಹಾರವಲ್ಲ ಎಂಬ ವಾದವಿದೆ. ಆದರೆ ಈ ವಿಮಾ ಯೋಜನೆಯ ಸ್ವರೂಪದಿಂದಾಗಿಯೇ ಇಂತಹ ಅವ್ಯವಹಾರಗಳಿಗೆ ಅವಕಾಶವಾಗಿದೆ.)

ಇನ್ನೊಂದು ಖಾಸಗಿ ಆಸ್ಪತ್ರೆಯಲ್ಲಿ 900 ಜನರಲ್ಲಿ 604 ಗರ್ಭಕೋಶ ತೆಗೆಯುವ ಆಪರೇಶನ್ ಮಾಡಿದ ಸಂಗತಿ ಬೆಳಕಿಗೆ ಬಂದಿದೆ. ಆದರೆ ಇದೇ ಸಮಯದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ ಕೇವಲ ಏಳು ಗರ್ಭಕೋಶದ ಆಪರೇಶನ್ ಆಗಿದ್ದುದು ವರದಿಯಾಗಿದೆ. ಆರೋಗ್ಯ ಕ್ಷೇತ್ರದಲ್ಲಿನ ಖಾಸಗಿ ರಂಗದ ಈ ಅವೈಜ್ಞಾನಿಕ-ಅನೈತಿಕ ಚಿಕಿತ್ಸೆಗಳು ಆರ್‌ಎಸ್‌ಬಿವೈ ಯೋಜನೆಯಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಇದನ್ನು ಮಹಾ ಹಿಮ ಪರ್ವತದ ಶಿಖರದ ತುದಿಯಷ್ಟೇ (ಟಿಪ್ ಆಫ್ ಐಸ್ ಬರ್ಗ್) ಎನ್ನಬಹುದು.

ಇತ್ತೀಚೆಗೆ 'ಎಕನಾಮಿಕ್ ಹಾಗೂ ಪೊಲಿಟಿಕಲ್ ವೀಕ್ಲಿ' ಎಂಬ ನಿಯತಕಾಲಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಹೇಗೆ 'ಆರೋಗ್ಯ ಮಿತ್ರ' ಸರಕಾರಿ ನೌಕರರು ಖಾಸಗೀ ಆಸ್ಪತ್ರೆಗಳಲ್ಲಿ ರೋಗಿಗೆ ಆಪರೇಶನ್ ಮಾಡಿಸುತ್ತಾರೆ ಎಂಬುದು ವರದಿಯಾಗಿದೆ. ಈ ಖಾಸಗಿ ಆಸ್ಪತ್ರೆಗಳು ಕೇವಲ ಶ್ರೀಮಂತ ರೋಗಿಗಳಿಗೆ ಮಾತ್ರ ಚಿಕಿತ್ಸೆ ನೀಡಿ ಇತರ ಕಷ್ಟದಾಯಕ ಪ್ರಕರಣಗಳ ಬಡ ರೋಗಿಗಳನ್ನು ಸರಕಾರಿ ಆಸ್ಪತ್ರೆಗಳಿಗೆ ಕಳುಹಿಸುತ್ತಾರೆಂಬುದೂ ವರದಿಯಾಗಿದೆ. ಪರಿಸ್ಥಿತಿ ಹೀಗಿರುವಾಗ ಬಡರೋಗಿಗೆ ಆಯ್ಕೆಯ ಸ್ವಾತಂತ್ರ್ಯ ಇದೆ ಎನ್ನಬಹುದೇ?

ಚಿಕಿತ್ಸೆ ಮಿತಿ ವಂಚನೆಗಳು:

ಸಾಮಾನ್ಯವಾಗಿ ಅಗತ್ಯವಿರುವ ಚಿಕಿತ್ಸೆ ವಿಮಾ ಯೋಜನೆಯ ಹೊರಗಿರುತ್ತದೆ ಹಾಗೂ ಜನರಿಗೆ ಆ ಚಿಕಿತ್ಸೆಗಳಿಗೆ ವಿಮೆ ನೀಡಲಾಗುವುದಿಲ್ಲ. ಉದಾಹರಣೆಗೆ ಮಲೇರಿಯಾ, ಚಿಕನ್‌ಗುನ್ಯಾ, ಚಿಕನ್ ಫಾಕ್ಸ್, ವೈರಲ್ ಸೋಂಕು, ನ್ಯುಮೋನಿಯ-ಅಂದರೆ ಶ್ವಾಶಕೋಶದ ಸೋಂಕು ಮುಂತಾದ ರೀತಿಯ ಎಲ್ಲಾ ಸಾಂಕ್ರಾಮಿಕ ರೋಗಗಳು, ಕ್ಷಯ, ಎಲ್ಲಾ ದೀರ್ಘಕಾಲದ ರೋಗಗಳು, ಸಕ್ಕರೆ ಖಾಯಿಲೆ, ರಕ್ತದ ಏರೊತ್ತಡ, ಹೃದಯ ರೋಗಗಳು, ಕ್ಯಾನ್ಸರ್ ರೋಗ ಇತ್ಯಾದಿ.

ಅಂದರೆ ಕೇವಲ 2-3% ರೋಗಗಳನ್ನು ಮಾತ್ರ ಈ ವಿಮಾ ಯೋಜನೆಯಲ್ಲಿ ಸೇರಿಸಲಾಗಿದೆ. ಅಂದರೆ ಆಂಧ್ರಪ್ರದೇಶದಲ್ಲಿನ ಆರೋಗ್ಯ ಶ್ರೀ ವಿಮಾಯೋಜನೆ ರಾಜ್ಯದ ಆರೋಗ್ಯ ಮುಂಗಡ ಪತ್ರದಲ್ಲಿನ 25% ಹಣವನ್ನು ಉಪಯೋಗಿಸುತ್ತಿದ್ದು ಕೇವಲ 2% ರೋಗಿಗಳಿಗೆ ಚಿಕಿತ್ಸೆ ನೀಡಲು ಸಾಧ್ಯ. ಈಗ ಹಣಕಾಸಿನ ಬಿಕ್ಕಟ್ಟಿನಲ್ಲಿ ವಿಮಾ ಕಂಪನಿಗಳು ಈ ರೀತಿ ಹಣವನ್ನು ತಮ್ಮ ಕಂಪನಿಯ ಆರೋಗ್ಯ ಸುಧಾರಿಸಲು ಉಪಯೋಗಿಸಬಹುದಾಗಿದೆ. ಈ ರೀತಿ ವಿಮಾಕ್ಷೇತ್ರ ಆರೋಗ್ಯ ವ್ಯವಸ್ಥೆಯ ಚಿತ್ರಣವನ್ನೇ ಬದಲಿಸಲು ಪ್ರಯತ್ನ ನಡೆಯುತ್ತಿದೆ.

ಒಳ್ಳೆಯ ಆರೋಗ್ಯ ವ್ಯವಸ್ಥೆ ಪಿರಮಿಡ್ಡಿನಂತೆ. ಅದು ಗರಿಷ್ಠ ಸಂಖ್ಯೆ ರೋಗಿಗಳಿಗೆ (ಜನರಿಗೆ) ಪ್ರಾಥಮಿಕ ಆರೋಗ್ಯ ವ್ಯವಸ್ಥೆ ನೀಡಿ ಅನಾರೋಗ್ಯ ನಿವಾರಿಸಬಹುದು: ಆದ್ದರಿಂದ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಸುಧಾರಿಸಲು ಸರಕಾರ ಮುಂದಾಗಬೇಕು. ಈ ಮಾದರಿ ವೈಜ್ಞಾನಿಕ ಹಾಗೂ ಪರಿಣಾಮಕಾರಿ. ಈ ವಿಧಾನದಿಂದ ಅನಗತ್ಯ (ಆಸ್ಪತೆಯಲ್ಲಿ ದಾಖಲಾದ ರೋಗಿಗೆ ಕೊಡುವ ಚಿಕಿತ್ಸೆ) ಚಿಕಿತ್ಸೆಗಳನ್ನು ತಡೆಗಟ್ಟಬಹುದಾಗಿದೆ. ಈಗ ವಿಮಾಯೋಜನೆ ಆರೋಗ್ಯ ಪಿರಮಿಡ್ಡನ್ನು ತಲೆಕೆಳಗು ಮಾಡಿದೆ.

ವಿಮಾ ಯೋಜನೆಯ ಲೋಪ ದೋಷಗಳು

ಒಟ್ಟಾರೆಯಾಗಿ ಹೇಳುವುದಾದರೆ ಖಾಸಗಿ ಕಂಪನಿಗಳದ್ದರಲಿ ಸಾರ್ವಜನಿಕ ಸಂಸ್ಥೆಗಳದ್ದಿರಲಿ ಆರೋಗ್ಯ ವಿಮೆ ಯೋಜನೆಯಲ್ಲಿ ಸಾಕಷ್ಟು ಮಿತಿಗಳಿವೆ. ಮಿತಿಗಳನ್ನು ಕೊರತೆಗಳನ್ನು ನಿವಾರಿಸಿಕೊಂಡ ಉತ್ತಮ ಆರೋಗ್ಯ ವಿಮಾ ಯೋಜನೆಗಳು ಇಂದಿನ ತುರ್ತು ಅಗತ್ಯವಾಗಿದೆ ಮತ್ತು ಈ ಆರೋಗ್ಯ ವಿಮಾ ಸೌಲಭ್ಯ ಗ್ರಾಮೀಣ ಪ್ರದೇಶಗಳಿಗೆ ವ್ಯಾಪಕವಾಗಿ ವಿಸ್ತರಣೆಯಾಗಬೇಕಾಗಿದೆ. ವಿಮಾ ಪರಿಹಾರದ ಹಣವು ಅಗತ್ಯ ಬಿದ್ದಾಗ ಅಂದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಸಿಗಬೇಕಿದೆ. ಇಂದು ಅಂತಹ ಪರಿಸ್ಥಿತಿ ಇಲ್ಲ.

ವಿಮಾ ಯೋಜನೆ ಹೆಸರಿನಲ್ಲಿ ವಿಮಾ ಕಂಪನಿಗಳು ಆರೋಗ್ಯ ಮುಂಗಡ ಪತ್ರದಲ್ಲಿನ ಹಣವನ್ನು ತಿಂದು ಹಾಕಿ ಆರೋಗ್ಯ ಕ್ಷೇತ್ರದಲ್ಲಿ ಅತಂತ್ರ ಉಂಟು ಮಾಡುವ ಪರಿಸ್ಥಿತಿ ಬೇಗನೆ ಬದಲಾಗ ಬೇಕಿದೆ. ಆರೋಗ್ಯ ವಿಮೆಯನ್ನು ಬಡವರ ಹಾಗೂ ಕಾರ್ಮಿಕರ ಯೋಜನೆಯೆಂದು ಸರಕಾರ (ಲೇಬರ್ ಡಿಪಾರ್ಟ್‌ಮೆಂಟ್) ಹೇಳಿದರೂ ಅದು ಅವರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ವಿಮೆ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಗುರುತಿಸಿ ಅದಕ್ಕೆ ತುರ್ತಾಗಿ ತಡೆಹಾಕಬೇಕು. ಮತ್ತೊಂದು ಮೂಲಭೂತವಾದ ಪ್ರಶ್ನೆ ಎಂದರೆ ಸರ್ಕಾರ ಆರೋಗ್ಯ ಕ್ಷೇತ್ರದ ಮೂಲಭೂತ ಅಗತ್ಯಗಳ ಮೇಲೆ ಹೆಚ್ಚು ಹೆಚ್ಚು ಹಣವನ್ನು ತೊಡಗಿಸಿ ಆರೋಗ್ಯ ಕ್ಷೇತ್ರವನ್ನು ಉತ್ತಮ ಪಡಿಸಬೇಕು. ಇದರ ಜೊತೆಗೆ ಜನಪರವಾದ ಆರೋಗ್ಯ ವಿಮಾ ನೀತಿ ಜಾರಿಗೊಳಿಸಬೇಕು. ಅದಕ್ಕಾಗಿ ಸರ್ಕಾರಗಳ ಮೇಲೆ ಜನತೆ ಒತ್ತಡ ಹೇರಬೇಕು.

ಸಿಐಟಿಯು ವಿಜಾಪುರ...

ಪುಟ 7 ರಿಂದ


ಹೊಸ ಜಿಲ್ಲಾ ಸಮಿತಿಯನ್ನು ಘೋಷಣೆ ಮಾಡಿದರು.

ಸಮ್ಮೇಳನದ ನಿರ್ಣಯಗಳು :

* ದೆಹಲಿಯಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ಖಂಡಿಸಿ ಮುಷ್ಕರ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಪೊಲೀಸ ದೌರ್ಜನ್ಯವನ್ನು ಸಮ್ಮೇಳನವು ಖಂಡಿಸಿತು.
* ಫೆಬ್ರುವರಿ 20, 21 ಕ್ಕೆ ಮುಷ್ಕರಕ್ಕೆ ಮುನ್ನಡೆಯುವದು.
* ಕನಿಷ್ಠ ಕೂಲಿ 10,000 ಜಾರಿಗಾಗಿ ನಿರಂತರ ಹೋರಾಟ
* ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸೇವಾ ನಿಯಮಾವಳಿಗಾಗಿ ಒತ್ತಾಯ
* ಕಾರ್ಮಿಕರ ಕಾನೂನುಗಳನ್ನು ಜಾರಿಗೊಳಿಸಲು ಕಠಿಣ ಕ್ರಮ ತೆಗೆದುಕೊಳ್ಳುವುದು
* ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ಸಾರ್ವತ್ರಿಕ ಸಾಮಾಜಿಕ ಭದ್ರತೆ ಮತ್ತು ರಾಷ್ಟ್ರೀಯ ಸಾಮಾಜಿಕ ಭದ್ರತಾ ನಿಧಿ ಸ್ಥಾಪಿಸಲು ಒತ್ತಾಯ.

ಸೋಮಪ್ಪ ಆಯಟ್ಟಿ

'ಆಮ್ ಆದ್ಮಿ'ಗೆ ಯುಪಿಎ-2 ಸರಕಾರದ ಹೊಸ ವರ್ಷದ ಬಜೆಟ್-ಪೂರ್ವ ಉಡುಗೊರೆ!



ವೇದರಾಜ ಎಸ್.ಕೆ.

ಕಾರ್ಪೊರೇಟ್ ಹಿತಗಳನ್ನು ಇನ್ನೂ 'ದಕ್ಷ'ವಾಗಿ ಈಡೇರಿಸಲು ಅನುಕೂಲವಾಗುವಂತೆ ಯುಪಿಎ-2 ಸರಕಾರದ ಸಂಪುಟ ಪುನರ್ರಚನೆ ನಡೆದಂದಿನಿಂದ ಇದ್ದ ಇನ್ನೊಂದು ಭಯ ಇಗ ನಿಜವಾಗಿದೆ. ದೀರ್ಘಕಾಲದ ನಂತರ ರೈಲು ಖಾತೆ ಪಡೆದ ಕಾಂಗ್ರೆಸ್ ಮಂತ್ರಿ ದರ ಏರಿಕೆಯ ಅನಿವಾರ್ಯತೆಯ ಜಪ ಮಾಡುತ್ತಲೇ ಇದ್ದರು. ಕೊನೆಗೂ ರೈಲು ಪ್ರಯಾಣ ದರಗಳನ್ನು ಸಾರಾಸಗಟಾಗಿ ಏರಿಸಿದ್ದಾರೆ-'ಆಮ್ ಆದ್ಮಿ' ಮತ್ತು ಕೋಟ್ಯಾಧಿಪತಿಗಳೆಂಬ ಭೇದ-ಭಾವ ತೋರಿಲ್ಲ ಎಂದು ಬಹುಶಃ ಅವರು ಬೆನ್ನು ತಟ್ಟಿಕೊಳ್ಳಬಹುದು.

ಸಾಮಾನ್ಯ ದರ್ಜೆಗೆ ಕಿ.ಮೀ.ಗೆ 3 ಪೈಸೆ, ಎರಡನೇ ದರ್ಜೆ ಮೇಲ್, ಎಕ್ಸ್‌ಪ್ರೆಸ್ ಇತ್ಯಾದಿಗಳಿಗೆ 4ಪೈಸೆ, ಸ್ಲೀಪರ್‌ಗಳಿಗೆ 6ಪೈಸೆಯಂತೆ ಹೆಚ್ಚಿಸಲಾಗಿದೆ. ಹವಾನಿಯಂತ್ರಿತ ದರ್ಜೆಗಳಿಗೆ ಕಿ.ಮೀ.ಗೆ 6ರಿಂದ 10 ಪೈಸೆಗಳಷ್ಟು, ಒಟ್ಟಾರೆಯಾಗಿ 15 ಶೇಕಡಕ್ಕಿಂತಲೂ ಹೆಚ್ಚು ದರ ಏರಿಕೆ ಮಾಡಿದಂತಾಗಿದೆ. ಇದರಿಂದ ಸರಕಾರಕ್ಕೆ 6,600 ಕೋಟಿ ರೂ. ಆದಾಯ ಬರಲಿದ್ದು, ಈ ಏರಿಕೆ ಮಾಡಿರದಿದ್ದರೆ ರೈಲು ವ್ಯವಸ್ಥೆ ಕುಸಿದೇ ಬಿಡುತ್ತಿತ್ತಂತೆ. ಆದರೆ ಇದು ಕೂಡ ಸಾಲದಂತೆ. ಆದರೂ ಹೊಸ ರೈಲು ಮಂತ್ರಿಗಳು ಮುಂದಿನ ತಿಂಗಳು ಸಂಸತ್ತಿನಲ್ಲಿ ಮಂಡಿಸಬೇಕಾದ ರೈಲ್ವೆ ಬಜೆಟಿನಲ್ಲಿ ಮತ್ತೆ ದರ ಏರಿಕೆ ಇರುವುದಿಲ್ಲ ಎಂಬ 'ಭರವಸೆ'ಯ ಕೃಪೆದೋರಿದ್ದಾರೆ. ಅದರಲ್ಲಿ ಅಥವ ಅದರ ಮೊದಲೇ ಸರಕು ಸಾಗಾಣಿಕೆ ದರಗಳನ್ನು ಏರಿಸುವ ಸಾಧ್ಯತೆಯನ್ನು ಮಾತ್ರ ಅವರು ನಿರಾಕರಿಸಿಲ್ಲ. ಇದರ ಹೊರೆಯೂ ವಿವಿಧ ಸರಕುಗಳ ಬೆಲೆಯೇರಿಕೆಗಳ ಮೂಲಕ ಬರುವುದು 'ಆಮ್ ಆದ್ಮಿ'ಯ ತಲೆಯ ಮೇಲೆಯೇ.



ಇದು 'ಆಮ್ ಆದ್ಮಿ'ಯ ಬಗ್ಗೆ ತಿರಸ್ಕಾರ ಮಾತ್ರವಲ್ಲ, ಪ್ರಜಾಪ್ರಭುತ್ವದ ಬಗ್ಗೆ ಯುಪಿಎ-2 ಸರಕಾರಕ್ಕಿರುವ ತಿರಸ್ಕಾರವನ್ನು ಕೂಡ ಮತ್ತೊಮ್ಮೆ ತೋರಿಸಿದೆ. ದೇಶದ ಜನತೆ ಚುನಾಯಿಸಿದ ಲೋಕಸಭೆಯ ಅಧಿವೇಶನ ಮುಗಿದ ಕೆಲವೇ ದಿನಗಳಲ್ಲಿ ಅದು ಈ ಜನ-ವಿರೋಧಿ ಕ್ರಮಕ್ಕೆ ಕೈಹಾಕಿದೆ. ಇನ್ನು ಕೆಲವೇ ದಿನಗಳಲ್ಲಿ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಿ ಇನ್ನೊಂದು ತಿಂಗಳೊಳಗೆ ಮಂಡಿಸಬೇಕಾಗಿರುವ ಮುಂದಿನ ರೈಲ್ವೆ ಬಜೆಟ್ ಮೇಲೆ ಚರ್ಚೆ ಎದುರಿಸುವುದು ಬಹಳ ಕಷ್ಟವಾದೀತು ಎಂಬ ಭಯದಿಂದ ಅದು ಹೀಗೆ ಮಾಡಿದೆ ಎಂಬುದು ಸ್ಪಷ್ಟ. ಸಹಜವಾಗಿ ಇದಕ್ಕೆ ದೇಶವ್ಯಾಪಿ ಪ್ರತಿಭಟನೆ ವ್ಯಕ್ತವಾಗಿದೆ.

ಈ ನಡುವೆ ಯುಪಿಎ-2 ಸರಕಾರದ ಪೆಟ್ರೋಲಿಯಂ ಮಂತ್ರಾಲಯವೂ ಅಡುಗೆ ಅನಿಲ, ಡೀಸೆಲ್ ಮತ್ತು ಸೀಮೆ ಎಣ್ಣೆ ದರಗಳಲ್ಲಿ ಹಲವು ಹಂತಗಳ ಭಾರೀ ಏರಿಕೆಯ ಪ್ರಸ್ತಾವಗಳನ್ನು ಸಂಪುಟದ ಮುಂದೆ ಇಟ್ಟಿದೆಯಂತೆ- ಇಲ್ಲವಾದರೆ ರೈಲು ವ್ಯವಸ್ಥೆಯಂತೆ ಪೆಟ್ರೋಲಿಯಂ ಕಂಪನಿಗಳೂ ಕುಸಿಯಬಹುದೆಂದು?

ಹಣಕಾಸು ಮಂತ್ರಾಲಯ ತೈಲ ಮಾರಾಟ ಕಂಪನಿಗಳಿಗೆ 'ಸಬ್ಸಿಡಿ'ಯ ಹೊರೆಯನ್ನು ಹೇರಲು ನಿರಾಕರಿಸಿರುವುದರಿಂದಾಗಿ ಹೀಗೆ ಮಾಡಲೇ ಬೇಕಾಗಿದೆಯಂತೆ. ಇದರ ಸಮರ್ಥನೆಗೆ ಅದು ಕೇಳ್ಕರ್ ಸಮಿತಿಯ ವರದಿಯ ಜಪ ಮಾಡುತ್ತಿದೆ. ಈ ವರದಿಯ ಆಧಾರದಲ್ಲಿ ಪೆಟ್ರೋಲಿಯಂ ಇಲಾಖೆಯ ಪ್ರಸ್ತಾವಗಳು ಹೀಗಿವೆ:

1. ಅಡುಗೆ ಅನಿಲದ ದರವನ್ನು ತಕ್ಷಣವೇ 50ರಿಂದ 100ರೂ.ಗಳಷ್ಟು ಏರಿಸಬೇಕು. ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಸಬ್ಸಿಡಿಯನ್ನು ಸೊನ್ನೆಗೆ ಇಳಿಸುವ ವರೆಗೆ ಏರಿಸುತ್ತಿರಬೇಕು.
2. ಡೀಸೆಲ್ ಮುಂದಿನ 15 ತಿಂಗಳ ಕಾಲ ಪ್ರತಿತಿಂಗಳು ಲೀಟರಿಗೆ 60 ಪೈಸೆಯಂತೆ ಏರಿಸಬೇಕು. ಅಂದರೆ ಇನ್ನು 15 ತಿಂಗಳ ನಂತರ ಲೀಟರಿಗೆ 9ರೂ. ಏರಿಕೆಯಾಗಿರಬೇಕು. ಇಲ್ಲವೇ ತಕ್ಷಣವೇ ರೂ.1.50 ಏರಿಕೆ, ಉಳಿದದ್ದು ಎಪ್ರಿಲ್ ತಿಂಗಳಿಂದ ಪ್ರತಿತಿಂಗಳು 'ಸ್ವಲ್ಪ-ಸ್ವಲ್ಪವಾಗಿ'.
3. ಸೀಮೆ ಎಣ್ಣೆ ಬೆಲೆಯಲ್ಲಿ ಮುಂದಿನ ಎರಡು ವರ್ಷಗಳಲ್ಲಿ ಲೀಟರಿಗೆ 10ರೂ. ಏರಿಕೆಯಾಗಬೇಕು.

ತೈಲ ಮಾರಾಟ ಕಂಪನಿಗಳು ಡೀಸೆಲ್‌ನಲ್ಲಿ ಲೀಟರಿಗೆ 9ರೂ., ಸೀಮೆ ಎಣ್ಣೆಯಲ್ಲಿ ರೂ.30.60 ಮತ್ತು ಅಡುಗೆ ಅನಿಲದಲ್ಲಿ ಪ್ರತಿ ಸಿಲಿಂಡರಿನಲ್ಲಿ ರೂ.490 'ನಷ್ಟ' ಅನುಭವಿಸುತ್ತಿವೆಯಂತೆ.

ಪೆಟ್ರೋಲಿಯಂ ಮಂತ್ರಾಲಯದ ಶಿಫಾರಸ್ಸುಗಳಿಗೆ ಕೇಂದ್ರ ಸರ್ಕಾರ ಸಮ್ಮತಿಸಿದರೆ ಜನಸಾಮಾನ್ಯರ ಜೇಬಿಗೆ ಕತ್ತರಿ ಬೀಳುವುದು ಖಚಿತ.

ಯೋಜನಾ ಆಯೋಗದ ಉಪಾಧ್ಯಕ್ಷರಿಗೆ ಈಗ ಕಲ್ಲಿದ್ದಲು ಖಾಸಗೀಕರಣದ ಖಯಾಲಿ

ದೇಶದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಯೋಚಿಸಬೇಕಾದ ರಾಷ್ಟ್ರೀಯ ಯೋಜನಾ ಆಯೋಗದ ಅತ್ಯುನ್ನತ ಹುದ್ದೆಯಾದ ಉಪಾಧ್ಯಕ್ಷರ ಸ್ಥಾನದಲ್ಲಿರುವ ವ್ಯಕ್ತಿ ಖಾಸಗಿ ಉದ್ಯಮದ ಲಾಭಗಳ ಬಗ್ಗೆಯೇ ಯೋಚಿಸುತ್ತಿರುವಂತಿದೆ. ಸಾರ್ವಜನಿಕ ವಲಯದ ಕೋಲ್ ಇಂಡಿಯಾ ಲಿಮಿಟೆಡ್(ಸಿಐಎಲ್) ಇಂದಿನ ವಿದ್ಯುತ್ ಸ್ಥಾವರಗಳ ಅಗತ್ಯಗಳನ್ನು ಪೂರೈಸುವ ಕಲ್ಲಿದ್ದಲು ಗಣಿಗಾರಿಕೆ ನಡೆಸುವ ಸಾಮರ್ಥ್ಯ ಹೊಂದಿಲ್ಲ, ನಾವು ಹೆಚ್ಚೆಚ್ಚಾಗಿ ಕಲ್ಲಿದ್ದಲು ಆಮದಿನ ಮೇಲೆ ಅವಲಂಬಿಸಬೇಕಾಗಿದೆ, ಆದ್ದರಿಂದ ದೇಶಿ-ವಿದೇಶಿ ಖಾಸಗಿ ಕಂಪನಿಗಳಿಗೆ ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಹೆಚ್ಚು ಅವಕಾಶ ಕೊಡಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ಯೋಜನಾ ಆಯೋಗದ ಉಪಾಧ್ಯಕ್ಷರ ಈ ಪ್ರತಿಪಾದನೆ ಸಂಪೂರ್ಣ ತಪ್ಪು, ಸಿಐಎಲ್ ಸರಕಾರದ ನಿರೀಕ್ಷೆಯನ್ನು ಈಡೇರಿಸಿದೆ, ಅದು ತನ್ನ ಪೂರ್ಣ ಸಾಮರ್ಥ್ಯವನ್ನು ಬಳಸಲು ಈ ಉಪಾಧ್ಯಕ್ಷರನ್ನು ನೇಮಿಸಿದ ಯುಪಿಎ ಸರಕಾರದ ನೀತಿಗಳೇ ಅಡ್ಡಿಯಾಗಿವೆ, ಕಲ್ಲಿದ್ದಲು ಆಮದು ಹೆಚ್ಚುತ್ತಿದ್ದರೆ ಅದು ಕೂಡ ಈ ಸರಕಾರ ಖಾಸಗಿಯವರ ಬಗ್ಗೆ ಉದಾರ ನಿಲುವು ತೋರುತ್ತಿರುವುದರಿಂದಲೇ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಹೇಳಿದೆ.

43,000 ಮೆ.ವಾ. ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಪೂರೈಕೆಯಾಗಬೇಕಾಗಿದೆ ಎಂಬ ಯೋಜನಾ ಆಯೋಗದ ಉಪಾಧ್ಯಕ್ಷರ ಲೆಕ್ಕಾಚಾರದಲ್ಲಿ ಹುರುಳಿಲ್ಲ. ನಿಜವಾದ ವಿದ್ಯುತ್ ಉತ್ಪಾದನೆ, ಅದರಿಂದಾಗಿ ಅಗತ್ಯವಿರುವ ಕಲ್ಲಿದ್ದಲಿನ ಪೂರೈಕೆ ಇಷ್ಟೊಂದು ಪ್ರಮಾಣದಲ್ಲಿ ಬೇಕಾಗಿಯೇ ಇಲ್ಲ. ಯೋಜನಾ ಆಯೋಗವೇ ವಿದ್ಯುತ್ ವಲಯಕ್ಕೆ ಅಷ್ಟೊಂದು ಕಲ್ಲಿದ್ದಲಿನ ಅಗತ್ಯ ಇಲ್ಲ ಎಂದು ತನ್ನ ಮಧ್ಯಂತರ ಪರಾಮರ್ಶೆಯಲ್ಲಿ ಉತ್ಪಾದನಾ ಗುರಿಯಲ್ಲಿ ಕಡಿತ ಮಾಡಿತ್ತು. ಇದರ ಪ್ರಕಾರ ಯುಪಿಎ-2 ಸರಕಾರ ನಿಗದಿ ಮಾಡಿದ ಗುರಿಯಲ್ಲಿ 99 ಶೇ.ವನ್ನು ಸಿಐಎಲ್ ಎಲ್ಲ ಅಡ್ಡಿ-ಆತಂಕಗಳ ನಡುವೆಯೂ ಪೂರೈಸಿದೆ ಎಂಬ ಸಂಗತಿಯತ್ತ ಸಿಐಟಿಯು ಗಮನ ಸೆಳೆದಿದೆ.

ವಾಸ್ತವವಾಗಿ ಸಿಐಎಲ್ ಇನ್ನೂ ಹೆಚ್ಚು ಕಲ್ಲಿದ್ದಲು ಉತ್ಪಾದಿಸಬಹುದಿತ್ತು. ಆದರೆ ಯುಪಿಎ-2 ಸರಕಾರವೇ ಅದಕ್ಕೆ ಈ ಕೆಳಗಿನಂತೆ ಅಡ್ಡಿ ಉಂಟು ಮಾಡುತ್ತಿದೆ:

- ಸಿಐಎಲ್‌ನ ಉಪಸಂಸ್ಥೆಯಾದ ಕೇಂದ್ರೀಯ ಗಣಿ ಯೋಜನೆ ಮತ್ತು ವಿನ್ಯಾಸ ಸಂಸ್ಥೆ(ಸಿಎಂಪಿಡಿಐಎಲ್) ಸಿದ್ಧಪಡಿಸಿರುವ ಹೊಸ ಯೋಜನೆಗಳಿಗೆ ಇನ್ನೂ ಮಂಜೂರಾತಿ ಕೊಟ್ಟಿಲ್ಲ.
- ಸಿಐಎಲ್ ಅಡಿಯಿರುವ ಕಂಪನಿಗಳು ನಿರ್ವಹಣಾ ಹಂತಗಳಿಗೆ ತಂದಿದ್ದ 55 ಕಲ್ಲಿದ್ದಲು ಬ್ಲಾಕುಗಳನ್ನು ಟಾಟಾ, ರಿಲಯನ್ಸ್ ಇತ್ಯಾದಿ ಖಾಸಗಿ ಕಂಪನಿಗಳಿಗೆ ಸರಕಾರ ವಹಿಸಿ ಕೊಟ್ಟಿತು.
- ಅರಣ್ಯ ಮಂಜೂರಾತಿ ಕೊಡದಿರುವುದು.
- ಕಂಪನಿಯ ಬಳಿ 68,000 ಕೋಟಿ ರೂ.ಗಳಷ್ಟು ಸುಮ್ಮನೇ ಜಮಾ ಆಗಿ ಬಿದ್ದಿದ್ದರೂ ಆಧುನಿಕ ಯಂತ್ರೋಪಕರಣಗಳಿಗೆ ಅದನ್ನು ಖರ್ಚು ಮಾಡಲು ಅವಕಾಶ ಕೊಡದಿರುವುದು.
- ಸಿಐಎಲ್ ಉತ್ಪಾದಿಸಿದ ಕಲ್ಲಿದ್ದಲಿನ ಸಾಗಾಣಿಕೆಗೆ ರೈಲು ಸಾಗಣೆ ಮುಂತಾದ ಮೂಲರಚನೆಗಳನ್ನು ಒದಗಿಸುವಲ್ಲಿ ಸರಕಾರದ ವಿಫಲತೆ-ಇದು ಉಂಟು ಮಾಡಿದ ಜಮಾವಣೆಯ ಸಮಸ್ಯೆಯಿಂದಾಗಿ ಕಲ್ಲಿದ್ದಲು ಉತ್ಪಾದನೆಯನ್ನು ಕಡಿತ ಮಾಡಲೇಬೇಕಾದ ಪರಿಸ್ಥಿತಿ.

ಇನ್ನು ಯೋಜನಾ ಆಯೋಗದ ಉಪಾಧ್ಯಕ್ಷರ ಮೆಚ್ಚಿಕೆಯ ಖಾಸಗಿಯವರ ದಕ್ಷತೆಯೇನು? ಖಾಸಗಿಯವರಿಗೆ ಗಣಿಗಾರಿಕೆಗೆಂದು ಬಿಟ್ಟು ಕೊಟ್ಟ 290 ಬ್ಲಾಕುಗಳಲ್ಲಿ ಉತ್ಪಾದನೆಗೆ ಬಳಸಿದ್ದೆಷ್ಟು, ಸಟ್ಟಾಕೋರ ವ್ಯವಹಾರಕ್ಕೆ ಬಳಸಿದ್ದೆಷ್ಟು ಎಂಬುದು ಈಗ ಕಲ್ಲಿದ್ದಲು ಹಗರಣದ ತನಿಖೆಗೆ ಒಳಗಾಗಿದೆ. ಇಂತಹ ಖಾಸಗಿ ಗಣಿಗಾರಿಕೆಯನ್ನು ಅವಲಂಬಿಸಿ 2006ರಲ್ಲಿ 16 ಅತಿ

ಪುಟ 14ಕ್ಕೆ

ಗುಲ್ಬರ್ಗಾ: ಅತ್ಯಾಚಾರಿಗಳ ರಕ್ಷಿಸುವ ಪಟ್ಟಭದ್ರರ ವಿರುದ್ಧ ಸಿಡಿದೆದ್ದ ಜನತೆ

ದಿಲ್ಲಿಯ ಯುವತಿಯ ಮೇಲಾದ ಬಾರ್ಬರಿಕ ಗುಂಪು ಅತ್ಯಾಚಾರವು ಅವಳನ್ನು ಬಲಿ ತೆಗೆದುಕೊಂಡಿದ್ದು ಭಾರತದ ಚರಿತ್ರೆಯಲ್ಲಿ ಕರಾಳ ಘಟವಾಗಿದೆ. ಇಂತಹ ಘಟನೆಗಳು ನಿರಂತರವಾಗಿ ಗುಲಬರ್ಗಾ ಜಿಲ್ಲೆಯಲ್ಲಿಯೂ ನಡೆಯುತ್ತಲೇ ಇವೆ. ಚಿಂಚೋಳಿ ತಾಲ್ಲೂಕಿನ ಗಡಿನಿಂಗದಳ್ಳಿ ಹಾಗೂ ಗುಲಬರ್ಗಾ ತಾಲ್ಲೂಕಿನ ವೆಂಕಟಬೇನೂರು ಗ್ರಾಮಗಳಲ್ಲಿ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗದ ಬಾಲಕಿಯರ ಮೇಲೆ ಅತ್ಯಾಚಾರ ಜರುಗಿವೆ. ಈ ಎರಡೂ ಕುಟುಂಬಗಳು ತೀರ ಬಡ ಕೂಲಿಕಾರರೇ. ಅತ್ಯಾಚಾರ ನಡೆದಿದ್ದು, ಕೇಸು ಮಾಡಲೆಂದು ಪೋಲೀಸ್ ಸ್ಟೇಷನ್‌ಗೆ ಹೋದಾಗ ಪೋಲೀಸರು ಕೇಸು ನೊಂದಾಯಿಸಿಕೊಳ್ಳದೆ ಸ್ಥಳೀಯ ಪುಢಾರಿಗಳೊಂದಿಗೆ ಷಾಮೀಲಾಗಿದ್ದು ಅತ್ಯಂತ ಹೇಯಕರ ಮತ್ತು ಖಂಡನೀಯವಾದದ್ದು. ಸಂಘಟನೆಗಳು ಒತ್ತಾಯ ಹೇರಿದಾಗಲೇ ಅತ್ಯಾಚಾರಿಗಳನ್ನು ಬಂಧಿಸಲಾಗಿದೆ. ಕೆಲವು ಪೋಲೀಸರನ್ನು ಅಮಾನತ್ತು ಮಾಡಲಾಗಿದೆ. ಆದಾಗ್ಯೂ ಈ ಎರಡೂ ಕೇಸುಗಳನ್ನು ಮುಚ್ಚಿ ಹಾಕುವ ಷಡ್ಯಂತ್ರ ನಡೆಯುತ್ತಿದೆ. ವಜಾದಂಥ ಕಠಿಣ ಕ್ರಮಗಳನ್ನು ಕೈಗೊಳ್ಳುವ ಜರೂರಿ ಇದೆ. ಬಂಧನವೊಂದರಿಂದಲೇ ಆರೋಪಿಗಳಿಗೆ ಶಿಕ್ಷೆಯಾಗುವುದಿಲ್ಲ. ಶಿಕ್ಷೆಯಾಗಲು ಸಾಕ್ಷಿಗಳು ಪ್ರಮುಖವಾಗುತ್ತವೆ. ಆದರೆ ಸ್ಥಳೀಯ ಪಟ್ಟಭದ್ರರು ಸಾಕ್ಷಿಗಳನ್ನು ಹೆದರಿಸುವ, ಸಾಕ್ಷ್ಯ ನುಡಿಯದಂತೆ ಒತ್ತಡ ಹೇರುವ ತಂತ್ರಗಳು ಇದ್ದೇ ಇರುತ್ತವೆ. ಅತ್ಯಾಚಾರದಂಥ ಪ್ರಕರಣಗಳಲ್ಲಿ ವಿಳಂಬ ಮಾಡಿ ಕೇಸು ನೋಂದಾಯಿಸಿದರೆ ವೈದ್ಯಕೀಯ ಸಾಕ್ಷಿ ಆಧಾರಗಳೇ ಇರುವುದಿಲ್ಲ. ಮೇಲಿನ ಎರಡೂ ಪ್ರಕರಣಗಳಲ್ಲಿ ವಿಳಂಬ ಮಾಡಿಯೇ ಕೇಸು ನೋಂದಾಯಿಸಿಕೊಳ್ಳಲಾಗಿದೆ. ಅಂದರೆ ಕೇಸು ಕೋರ್ಟಿನಲ್ಲಿ ಸಾಬೀತಾಗದಂತೆ ಪೋಲೀಸು ಇಲಾಖೆ ಗಂಭೀರ ಲೋಪವೆಸಗಿದೆ ಎಂತಲೇ ಅರ್ಥ. ಬಂಧಿತರು ಕೆಲವೇ ದಿನಗಳಲ್ಲಿ ಜಾಮೀನಿನ ಮೇಲೆ ಹೊರಗೆ ಬಂದು ಮತ್ತೆ ತಮ್ಮ ದರ್ಪ ಮೆರೆಯಬಹುದು. ಮಧ್ಯವರ್ತಿಗಳಂತೂ ತಪ್ಪಿಸಿಕೊಂಡೇ ಹೋಗುವರು. ಗ್ರಾಮೀಣ ಪ್ರದೇಶಗಳಲ್ಲಿ ಮಧ್ಯವರ್ತಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ರಾಜಕೀಯ ಒತ್ತಡಗಳ ಕಾರಣದಿಂದ ಬಹಳಷ್ಟು ಪ್ರಕರಣಗಳು ಮುಚ್ಚಿ ಹಾಕಲ್ಪಡುತ್ತಿವೆ. ಇಂಥ ಲೋಪಗಳನ್ನು ಮರುಕಳಿಸದಂತೆ ಜಿಲ್ಲಾ ಆಡಳಿತ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿರುವುದರಿಂದಲೇ ಮಕ್ಕಳ ಮೇಲಿನ ಬಲತ್ಕಾರದ ಪಟ್ಟಿಯಲ್ಲಿ ಗುಲಬರ್ಗಾ ಜಿಲ್ಲೆಯು ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಅತ್ಯಾಚಾರ ಮಾಡಿಯೂ ಜಾತಿ, ಹಣ, ರಾಜಕಾರಣಿಗಳ ಬಲ ಬಳಸಿಕೊಂಡು ಪಾರಾಗಬಹುದೆಂಬ ವಿಶ್ವಾಸ ಅತ್ಯಾಚಾರಿಗಳಿಗಿದೆ. ಹೀಗಾಗಿಯೇ ನಿರ್ಭಯದಿಂದ ಇಂತಹ ನೀಚ ಕೃತ್ಯಕ್ಕೆ ಇಳಿಯುತ್ತಿರುವರು. ಇದರಿಂದ ತೀರ ರೋಸಿ ಹೋದ ನಾಗರೀಕರು ದಿ. 31.12.2012 ರಂದು ಗುಲ್ಬರ್ಗಾದ ಜಗತ್ ವೃತ್ತದಿಂದ ಏಳು ಸಾವಿರಕ್ಕೂ ಹೆಚ್ಚು ಮಹಿಳೆಯರು, ವಿದ್ಯಾರ್ಥಿಗಳು, ಯುವಕರು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಈ ಕೆಳಗಿನ ಕ್ರಮ ಕೈಗೊಳ್ಳಲು ಸರಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರು ಕೊಲೆ ಆರೋಪಕ್ಕೆ ಸಮಾನವಾದಂಥ ಕಾಯ್ದೆಯಡಿಯಲ್ಲಿ ಅತ್ಯಾಚಾರಿಗಳನ್ನು ಶಿಕ್ಷಿಸುವಂಥ ಸಶಕ್ತ ಕಾನೂನು ತಕ್ಷಣ ರೂಪಿಸಬೇಕು.



ಬಂಧಿತರಾಗಿರುವ ಆರೋಪಿಗಳು ತಪ್ಪಿಸಿಕೊಂಡು ಹೋಗದಂತೆ ಎಲ್ಲ ಆರೋಪಿತರ ಮೇಲೂ ಚಾರ್ಜಶೀಟ್ ಹಾಕಿ ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು.

ತಕ್ಷಣ ಕೇಸು ದಾಖಲಿಸಿಕೊಳ್ಳದ ಪೋಲೀಸ್ ಅಧಿಕಾರಿಗಳನ್ನು ವಜಾ ಮಾಡಬೇಕು.

ಅತ್ಯಾಚಾರವೆಸಗಿದವರ ಮೇಲೆ ಹಾಕುವ ಕಲಂಗಳನ್ನೇ ಅತ್ಯಾಚಾರ ಮುಚ್ಚಿ ಹಾಕಲು ಪ್ರಯತ್ನಿಸುವ ರಾಜಕೀಯ ಪುಢಾರಿಗಳು, ಮಧ್ಯವರ್ತಿಗಳು ಹಾಗೂ ಪೋಲಿಸ್ ಅಧಿಕಾರಿಗಳ ಮೇಲೂ ದಾಖಲಿಸಬೇಕು.

ಗಡಿನಿಂಗದಳ್ಳಿ ಮತ್ತು ವೆಂಕಟಬೇನೂರಿನ ಅತ್ಯಾಚಾರಕ್ಕೊಳಗಾದ ಕುಟುಂಬದವರಿಗೆ ಸರಕಾರಿ ಜಮೀನು ನೀಡಿ ಅವರನ್ನು ಆರ್ಥಿಕವಾಗಿ ಸಬಲಗೊಳಿಸಬೇಕು.

ರೂಪಾಯಿ ಐದು ಲಕ್ಷ ಪರಿಹಾರಧನ ಕೊಡಬೇಕು.

ಬಾಲಕಿಯರ ಭವಿಷ್ಯದ ಬದುಕನ್ನು ಭದ್ರಗೊಳಿಸಲು ಕ್ರಮಕೈಗೊಳ್ಳಬೇಕು.

ಇಂತಹ ಅತ್ಯಾಚಾರದ ಪ್ರಕರಣಗಳನ್ನು ಎರಡು ತಿಂಗಳಲ್ಲಿ ಇತ್ಯರ್ಥಗೊಳಿಸಬೇಕು. ಇದಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ತೀವ್ರಗತಿ ನ್ಯಾಯಲಯ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ದೌರ್ಜನ್ಯ ಮತ್ತು ಅತ್ಯಾಚಾರ ವಿರೋಧಿ ವೇದಿಕೆ ಸಂಚಾಲಕರಾದ ಡಾ.ಮೀನಾಕ್ಷಿ ಬಾಳಿ, ವಿಠಲ ಚಿಕಣಿ ಸಹ ಸಂಚಾಲಕರಾದ ಮಸ್ತಾನ ಬಿರಾದಾರ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಮುಖಂಡರಾದ ಕೆ.ನೀಲಾ ಮುಂತಾವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ನಗ್ಮಾ ಮಹಿಳಾ ಮಂಡಳ, ಪ್ರಜ್ಞಾ ಕಾನೂನು ಸಲಹಾ ಸಮಿತಿ, ಕರ್ನಾಟಕ ಶಿಕಾರಿ ಮಹಿಳಾ ಮಂಡಳ, ಮಕ್ಕಳ ಸಹಾಯ ವಾಣಿ, ನೂಡಲ್ ಕೇಂದ್ರ ಸೋನಿಯಾಗಾಂಧಿ ಮಹಿಳಾ ಮಂಡಳ, ಮಾರ್ಗದರ್ಶಿ ಸಂಸ್ಥೆ, ಶಿಕ್ಷಕಿಯರ ವೇದಿಕೆ, ಗುಲಬರ್ಗಾ ತಾಮೀರ್ -ಎ- ಮಿಲ್ಲತ್, ಸಾಮಾಜಿಕ ಪರಿವರ್ತನಾ ಜನಾಂದೋಲನ, ಭಾರತ ಜ್ಞಾನ ವಿಜ್ಞಾನ ಸಮಿತಿ, ಸಮುದಾಯ, ಪ್ರಜ್ಞಾ ಯುವಕ ಸಂಘ, ದಲಿತ ಯುವ ಸಮನ್ವಯ ಸಮಿತಿ, ಚಾಂದಿ ಸೋನಾ ಮಹಿಳಾ ಮಂಡಳ, ಆಯೇಷಾ ಮಹಿಳಾ ಮಂಡಳ, ಎಪಿಸಿಆರ್ ಗುಲಬರ್ಗಾ,ಜಿಲ್ಲಾ ಮತ್ತು ತಾಲ್ಲೂಕು ಸ್ತ್ರೀ ಶಕ್ತಿ ಸಂಘಗಳ ಒಕ್ಕೂಟ ಮುಂತಾದ ಸಂಘಟನೆಗಳ ಮುಖಂಡರು, ಕಾರ್ಯಕರ್ತೆಯರು ಹೋರಾಟದಲ್ಲಿ ಪಾಲೊಂಡಿದ್ದರು. ಡಾ. ಕಮರ್, ಸಂತೋಷ ಹೊಸಮನಿ, ಆನಂದ್ ರಾಜ್, ಮುಂತಾದವರು ಹೋರಾಟವನ್ನು ಯಶಸ್ವಿಗೊಳಿಸುವಲ್ಲಿ ಶ್ರಮಿಸಿದರು.

ನೀಲಾ.ಕೆ

ಈಗ ಕಲ್ಲಿದ್ದಲು ಖಾಸಗೀಕರಣದ ಖಯಾಲಿ

ಪುಟ 13 ರಿಂದ

ದೊಡ್ಡ ವಿದ್ಯುತ್ ಯೋಜನೆ(ಯುಎಂಪಿಪಿ)ಗಳನ್ನು ಅಂತಿಮಗೊಳಿಸಲಾಗಿತ್ತು. ಇವುಗಳಲ್ಲಿ ಈ ಆರು ವರ್ಷಗಳಲ್ಲಿ ಸ್ಥಾಪನೆಯಾಗಿರುವುದು ಕೇವಲ 4, ಅವುಗಳಲ್ಲೂ ಎರಡು ಆಮದಾದ ಕಲ್ಲಿದ್ದಲನ್ನು ಅವಲಂಬಿಸಿವೆ, ಇದಕ್ಕೆ ಯುಪಿಎ-2 ಸರಕಾರವೇ ಅನುಮತಿ ನೀಡಿದೆ!

ಯೋಜನಾ ಆಯೋಗದ ಉಪಾಧ್ಯಕ್ಷರು ಸಂಬಿಸ ಹೊರಟಿರುವಂತೆ ಸಿಐಎಲ್‌ಗೆ ಕಲ್ಲಿದ್ದಲು ಉತ್ಪಾದಿಸುವ ಸಾಮರ್ಥ್ಯವಿಲ್ಲದೆ ಕಲ್ಲಿದ್ದಲು ಆಮದು ನಡೆಯುತ್ತಿಲ್ಲ. ಬದಲಾಗಿ ಇದರ ಹಿಂದೆ ಇರುವುದು ಪಟ್ಟಭದ್ರ ಹಿತಗಳದ್ದೇ ಆಟ. ಹಲವು ಖಾಸಗಿ ಕಂಪನಿಗಳು ಸಿಐಎಲ್‌ನಿಂದ ಕಲ್ಲಿದ್ದಲು ಪಡೆಯುವ ಒಪ್ಪಂದಗಳಿದ್ದರೂ, ಅದರಲ್ಲಿ ಬೇಕೆಂದೇ ಕಡಿತ ಮಾಡಿ ಅಷ್ಟನ್ನು ಆಮದು ಮಾಡುತ್ತವೆ.

ಆದ್ದರಿಂದ ಯೋಜನಾ ಆಯೋಗದ ಉಪಾಧ್ಯಕ್ಷರು ಸಿಐಎಲ್ ಮೇಲೆ ಆಪಾದನೆ ಹಾಕಿ, ಅದನ್ನೇ ಖಾಸಗೀಕರಣಕ್ಕೆ ನೆಪ ಮಾಡಿರುವುದು ಸಂಪೂರ್ಣ ತಪ್ಪು, ಇಂತಹ ನೆಪವೊಡ್ಡಿ ದೇಶದ ಈ ನವೀಕರಿಸಲಾಗದ ನೈಸರ್ಗಿಕ ಸಂಪನ್ಮೂಲವನ್ನು ದೇಶಿ-ವಿದೇಶಿ ಕಾರ್ಪೊರೇಟ್‌ಗಳ ಸೂಪರ್ ಲಾಭಗಳಿಗೆ ಲೂಟಿ ಹೊಡೆಯಲು ಬಿಡಬಾರದು ಎಂದು ಸಿಐಟಿಯು ಆಗ್ರಹಿಸಿದೆ.

ಯುಪಿಎ-2 ಸರಕಾರಕ್ಕೆ ನಿಜವಾಗಿಯೂ ಕಲ್ಲಿದ್ದಲು ಉತ್ಪಾದನೆಯನ್ನು ಹೆಚ್ಚಿಸಿ ವಿದ್ಯುತ್ ವಲಯದ ಅಗತ್ಯಗಳನ್ನು ಪೂರ್ಣವಾಗಿ ಪೂರೈಸಬೇಕೆಂದಿದ್ದರೆ ಅದು ಯೋಜನಾ ಆಯೋಗದ ಉಪಾಧ್ಯಕ್ಷರ ಖಾಸಗೀಕರಣದ ಗೀಳಿನಿಂದ ಸಾಧ್ಯವಿಲ್ಲ. ಸಿಐಎಲ್‌ಗೆ ದೇಶದಲ್ಲಿ ಕಲ್ಲಿದ್ದಲು ಗಣಿಗಾರಿಕೆ ಹಾಗೂ ನೀಡಿಕೆಯ ಶಾಸನಾತ್ಮಕ ಹೊಣೆಯನ್ನು ನೀಡಬೇಕು, ಮತ್ತು ಅದರ ಉತ್ಪಾದನಾ ಜಾಲದ ವಿಸ್ತರಣೆಗೆ ಬೇಕಾದ ಬಂಡವಾಳ ಹೂಡಿಕೆ, ಯಂತ್ರೋಪಕರಣಗಳ ಖರೀದಿ ಮತ್ತು ಮಾನವ ಸಂಪನ್ಮೂಲ ಯೋಜನೆಯಲ್ಲಿ ಸಿಐಎಲ್‌ಗೆ ಸ್ವಾಯತ್ತತೆಯನ್ನು ನೀಡಬೇಕು ಎಂದು ಸಿಐಟಿಯು ಪ್ರಸ್ತಾವದ ಮೂಲಕ ಮಾತ್ರ ಸಾಧ್ಯ.

ಒಂದು ಬಿನ್ನಹ



ಹಕ್ಕಿಗಳೇ ಆಕಾಶಕ್ಕೆ ಹಾರುತ್ತಿರಿ
ಹಾಗೆ ಮಡೆಸ್ನಾನದ ಎಂಜಲೆಲೆಯ
ಕೊಂಡೊಯ್ಯಿರಿ
ತುಳಿತಕ್ಕೆ ಒಳಗಾದವರಿಗೆ ಎಂದೂ
ಸಿಗದಂತೆ

ಹರಿಯುವ ನದಿಯೇ ಹರಿಯುತ್ತಿರು
ಹಾಗೆ ಒಮ್ಮೆ ಕುಕ್ಕೆ ಸುಬ್ರಮಣ್ಯದ ಕಡೆ
ಹಾದು ಹೋಗು
ಮಡೆಸ್ನಾನದ ಕೊಳೆಯ ತೊಳೆದು
ಹೋಗು

ಉರಿಯುವ ಅಗ್ನಿಯೇ ಉರಿಯುತ್ತಿರು
ಹಾಗೆ ಎಂಜಲೆಲೆಯ ಮೇಲೆ ಉರುಳುವ
ಮೌಢ್ಯ ಮನಸ ಸುಟ್ಟು ಹೋಗು

ಬೀಸುವ ಗಾಳಿಯೇ ಬೀಸುತ್ತಿರು
ಸಂಪ್ರದಾಯದ ಉಸಿರು ಕಟ್ಟಿಸುವವರ
ಹಾದು ಹೋಗು ; ಹಾಗೆ ತಂಗಾಳಿಯ
ತಂಪ ಬಿಟ್ಟು ಹೋಗು

ಜಗವ ಬೆಳಗುವ ಬೆಳಗೆ
ಹಾಗೆ ಒಮ್ಮೆ ಇತ್ತ ಸುಳಿದು ಹೋಗು
ಕಟ್ಟುಪಾಡು ಎಂಬ ಕತ್ತಲ ಅಳಿಸಿ ಹೋಗು

– ನಾಗರಾಜ್ ಹರಪನಹಳ್ಳಿ.

ಹೊಸ ವರುಷದಂದು ಕಾರವಾರದ
ಕವಿಗೋಷ್ಠಿಯಲ್ಲಿ ಓದಿದ ಕವನ

ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ.....

ಪುಟ 8 ರಿಂದ

ಇತಿಹಾಸ ಮರೆತವರು

ಬಂಗಾಲ 1970ರ ದಶಕದಲ್ಲಿ ಹರಿಯಬಿಟ್ಟ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯ ಅನುಭವಗಳನ್ನು ಮರೆತಿಲ್ಲ. ಪೂರ್ಣ ಐದು ವರ್ಷಗಳ ಕಾಲ ಈಗಿನ ಟಿಎಂಸಿಯನ್ನು ಒಳಗೊಂಡ ಆಗಿನ ಕಾಂಗ್ರೆಸ್ ಪಕ್ಷ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ತೀವ್ರ ದಾಳಿ ನಡೆಸುತ್ತಿದ್ದಾಗ, ಆ ಬಗ್ಗೆ ಸಿಪಿಐ(ಎಂ) ಎಚ್ಚರಿಸಿದರೂ ಗಮನಿಸದೆ, ದೇಶದಲ್ಲಿನ ಹಲವು ರಾಜಕೀಯ ಶಕ್ತಿಗಳು, ಅವೆಲ್ಲ ಪಶ್ಚಿಮ ಬಂಗಾಲಕ್ಕೆ ಸೀಮಿತವಾದ ವಿಕ್ಷೇಪಗಳಷ್ಟೇ ಎಂದು ಭಾವಿಸಿದರು. ಇಂತಹ ಭ್ರಮೆಗಳು 1975ರಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿ ದೇಶಾದ್ಯಂತ ನಾಗರಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಉರುಳು ಬಿಗಿದಾಗ ನುಚ್ಚು ನೂರಾದವು. ಕೊನೆಗೆ 1977ರಲ್ಲಿ ಜಯಶಾಲಿಯಾದದ್ದು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಭಾರತೀಯ ಜನತೆ ನಡೆಸಿದ ಹೋರಾಟ. ಅದನ್ನನುಸರಿಸಿ ನಡೆದ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಲದಲ್ಲಿ ಎಡರಂಗವು ಸರಕಾರ ರಚಿಸಲು ಚುನಾಯಿತಗೊಂಡು ಮುಂದೆ ಆ ರಾಜ್ಯದಲ್ಲಿ ಸತತವಾಗಿ ಏಳು ಚುನಾವಣೆಗಳನ್ನು ಗೆದ್ದಿತು.

ಆ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಸಿಪಿಐ(ಎಂ) ಪ್ರತಿರೋಧಿಸಿತು. ಇದರಲ್ಲಿ ಅದು ತನ್ನ 12,000ಕ್ಕೂ ಹೆಚ್ಚು ಪ್ರಮುಖ ಸಂಗಾತಿಗಳನ್ನು ಮರಣಾಂತಿಕ ಹಲ್ಲೆಗಳಲ್ಲಿ ಕಳಕೊಂಡಿತು; ಹತ್ತಾರು ಸಾವಿರ ಕುಟುಂಬಗಳನ್ನು ಅವರ ಮನೆಗಳಿಂದ ಹೊಡೆದೋಡಿಸಲಾಯಿತು; ಹಲವು ಮುಖಂಡರು ತಲೆಮರೆಸಿಕೊಂಡು ಕೆಲಸ ಮಾಡಬೇಕಾಗಿ ಬಂತು. ಅಂತಿಮವಾಗಿ, ಪಶ್ಚಿಮ ಬಂಗಾಲದ ಜನತೆ, ದೇಶದ ಉಳಿದೆಡೆಗಳ ಜನತೆಯ ಜೊತೆಗೆ ಜಯಶಾಲಿಗಳಾದರು. ಈ ಇತಿಹಾಸವನ್ನು ಮರೆತು ಅದೇ ರೀತಿಯ ಪುನರಾವರ್ತನೆಗೆ ಯತ್ನಿಸುವವರದ್ದು ಕೂಡ ಅಂತಹುದೇ ಹಣೆಬರಹ-ಜನಗಳ ಕೈಗಳಿಂದ ಸಂಪೂರ್ಣ ಸೋಲು.

ಪಶ್ಚಿಮ ಬಂಗಾಲದ ಜನತೆ ಎಂದೂ ಇಂತಹ ಹಲ್ಲೆಗಳಿಗೆ ತಲೆ ಬಾಗಿಲ್ಲ. ಹಿಂಸಾಚಾರ ಮತ್ತು ಭಯೋತ್ಪಾದನೆಯ ರಾಜಕೀಯವನ್ನು, ರಾಜ್ಯದಲ್ಲಿ ಮುಂಬರುವ ಪಂಚಾಯತು ಚುನಾವಣೆಗಳಲ್ಲಿ ಜನತೆಯಲ್ಲಿ ಭಯ ಹುಟ್ಟಿಸಲು ಹರಿಯ ಬಿಟ್ಟಿರುವ ಆಕ್ರಾಮಕ ಘಟ್ಟವನ್ನು ರಾಜಕೀಯವಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸೋಲಿಸಲಾಗುವುದು. ನಮ್ಮ ಸಂವಿಧಾನಕ್ಕೆ ಬೆಲೆ ಕೊಡುವವರು, ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇರುವವರು ಯಾರೂ ಈಗ ಕೇವಲ ಪ್ರೇಕ್ಷಕರಾಗಿರಲು ಸಾಧ್ಯವಿಲ್ಲ. ಅವರೆಲ್ಲ ಇಂತಹ ಭಯೋತ್ಪಾದನೆ, ಹಿಂಸಾಚಾರ, ವಿಕ್ಷಿಪ್ತತೆ ಮತ್ತು ಅಮಾನವೀಯತೆಯ ರಾಜಕೀಯವನ್ನು ಸೋಲಿಸಲು ಎದ್ದು ನಿಲ್ಲಬೇಕು. ಇಂತಹ ಹಿಂಸಾಚಾರ ಮತ್ತು ಭಯೋತ್ಪಾದನೆಗೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ, ಅದನ್ನು ತೊಲಗಿಸಲೇ ಬೇಕು.

ಪೇಜಾವರ ಮಠಾಧೀಶರ ಅಸಂಬದ್ಧ ....

5 ರಿಂದ

ಬದಲು ದೇವರಿಗೆ ಅರ್ಪಿಸಿದ ಅನ್ನದ ಮೇಲೆ ಉರುಳಾಡಬಹುದೆಂಬ ಸಲಹೆ ಅದೇ ಮೌಢ್ಯವನ್ನು ಗಟ್ಟಿಗೊಳಿಸಲಿದೆ ಮಾತ್ರವಲ್ಲದೆ ಮತ್ತೆ ಮಡೆಸ್ನಾನಕ್ಕೆ ಹಿಂಬಾಗಿಲಿನಿಂದ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ. ಆದ್ದರಿಂದ ಮಡೆಸ್ನಾನ ಬದಲಿಗೆ ಪೇಜಾವರರು ಸಲಹೆ ನೀಡಿರುವ ಸೂಚನೆಯನ್ನು ಸಹ ತಿರಸ್ಕರಿಸಬೇಕಾಗಿದೆ.

ಸುಬ್ರಮಣ್ಯ ಪ್ರದೇಶದ ಮಲೆಗಳ ಮೂಲ ನಿವಾಸಿಗಳೇ ಮಲೆಕುಡಿಯರು. ಸರ್ಪವನ್ನು ಹುತ್ತ ಸಹಿತವಾಗಿ ಆರಾಧಿಸುವುದು ಅವರ ಪದ್ಧತಿ. ಹುತ್ತದ ಸುತ್ತಲಿನ ಮಣ್ಣಿನಲ್ಲಿ ಹೊರಳಾಡಿದರೆ ಚರ್ಮ ಸಂಬಂಧಿ ರೋಗ ವಾಸಿಯಾಗುತ್ತದೆ ಎಂಬ ನಂಬಿಕೆಯೂ ಅದರ ಭಾಗವಾಗಿದೆ. ಇಂತಹ 'ಮಡ್ ಥೆರಪಿ' ಆ[illegible]ರ್ವೇದ ಪದ್ಧತಿಯಲ್ಲಿ ಪ್ರಚಲಿತವಿದೆ. ಸುಬ್ರಮಣ್ಯ ಕ್ಷೇತ್ರ ವೈದಿಕರ ವಶವಾದ ನಂತರ ಹುತ್ತದ ಆರಾಧನೆ, ಹುತ್ತದ ಮಣ್ಣಲ್ಲಿ ಉರುಳಾಡುವ ಪದ್ಧತಿಯ ಬದಲಾಗಿ ಕಾಲಕ್ರಮೇಣ ಬ್ರಾಹ್ಮಣ ಎಂಜಲೆಲೆಯ ಮೇಲೆ ಉರುಳಾಡುವ ಪದ್ಧತಿಯನ್ನು ಬೆಳೆಸಿಕೊಂಡು ಬರಲಾಯಿತು. ಬ್ರಾಹ್ಮಣರನ್ನುಪೂಜ್ಯ ಭಾವನೆಯಿಂದ ಕಾಣಲು ಆರಂಭಿಸಿದ ಮಲೆಕುಡಿಯರು ಮಡೆಸ್ನಾನ ಪದ್ಧತಿಯನ್ನು ಪರಂಪರಾಗತವಾಗಿ ಬೆಳೆಸಿಕೊಂಡು ಕ್ಷೇತ್ರದ ಹೊರವಲಯದ ಕೆಲಸಗಳನ್ನು ಮಾಡುತ್ತಾ ಜೀವನ ನಿರ್ವಹಿಸತೊಡಗಿದರು. ಇವರನ್ನು ಮುಂದಿಟ್ಟುಕೊಂಡು ಕುಕ್ಕೆ ಸುಬ್ರಮಣ್ಯದಲ್ಲಿ ಪಟ್ಟಭದ್ರರು ಈ ಅನಿಷ್ಟ ಪದ್ಧತಿಯನ್ನು ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ.

ಇಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡುವವರು ದೇವರ ಮೇಲೆ ನಂಬಿಕೆ ಇದ್ದವರೇ ಆಗಿರಬೇಕಾಗಿಲ್ಲ. ದೇವರ ಮೇಲೆ ನಂಬಿಕೆ ಇರುವವರಿಗೆ ಇಂತಹ ಪ್ರಶ್ನೆಗಳನ್ನು ಎತ್ತಲು ಭಯ ಭೀತಿ ಅಡ್ಡಿಯಾಗಬಹುದು. ಆದರೆ ಇದು ಮೂಲತಃ ದೇವರ ಕುರಿತಾದ ನಂಬಿಕೆಯ ಪ್ರಶ್ನೆ ಅಲ್ಲ! ಇದು ಮಾನವ ಘನತೆಯ ಪ್ರಶ್ನೆ. ಇದು ಮಾನವೀಯತೆಯ ಪ್ರಶ್ನೆ. ಅಂದು ಉಡುಪಿಯಲ್ಲಿ ನಡೆಸಲಾದ ಸಭೆಯಲ್ಲಿ ಮತ್ತು ಪ್ರತಿಭಟನೆಯಲ್ಲಿ ಮಾತನಾಡಿದ ಸಿಪಿಐ(ಎಂ) ಮುಖಂಡರೆಲ್ಲರೂ ಒಂದು ವಿಷಯವನ್ನು ಸ್ಪಷ್ಟಪಡಿಸಿದರು. "ನಾವ್ಯಾರೂ ಶ್ರೀ ಕೃಷ್ಣನ ವಿರೋಧಿಗಳಲ್ಲ, ಕೃಷ್ಣ ಮಠದ ವಿರೋಧಿಗಳಲ್ಲ. ನಾವೂ ಧಾರ್ಮಿಕ ನಂಬಿಕೆಗಳ ವಿರೋಧಿಗಳೂ ಅಲ್ಲ. ನಾವು ಕೇವಲ ಮೂಢನಂಬಿಕೆಗಳ ವಿರೋಧಿಗಳು. ನಾವು ಜಾತಿಪದ್ಧತಿ ಜಾತಿ ಅಸ್ಪ್ರಶ್ಯತೆಯ ವಿರೋಧಿಗಳು." ಮಡೆಸ್ನಾನ ಮತ್ತು ಪಂಕ್ತಿಭೇದದ ವಿರುದ್ಧ ಜನಾಂದೋಲನವನ್ನು ಮುನ್ನಡೆಸುತ್ತಾ ಕಾನೂನು ಹೋರಾಟವನ್ನು ಸಹ ಮುಂದುವರೆಸಲು ಸಿಪಿಐ(ಎಂ) ಬದ್ಧವಾಗಿದೆ. ಪೊಲೀಸ್ ದೌರ್ಜನ್ಯ, ಬಂಧನದಂತಹ ಕ್ರಮಗಳಿಗೆ ಅಥವ ಯಾವುದೇ ರೀತಿಯ ಬೆದರಿಕೆಗಳಿಗೆ ಮಣಿದು ಸಿಪಿಐ(ಎಂ) ತನ್ನ ಹೋರಾಟವನ್ನು ಕೈಬಿಡಲಾರದು. ಪೇಜಾವರ ಶ್ರೀಗಳು ಹೇಳಿದಂತೆ ರಾಜ್ಯದ ಇತರ ಅನೇಕ ದೇವಸ್ಥಾನಗಳಲ್ಲಿ ಆಚರಣೆಯಲ್ಲಿ ಇರುವ ಇಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧವೂ ಸಿಪಿಐ(ಎಂ) ಮುಂದಿನ ದಿನಗಳಲ್ಲಿ ತನ್ನ ಹೋರಾಟವನ್ನು ವಿಸ್ತರಿಸಲಿದೆ.

ಸೂಚನೆ

ಚಂದಾದಾರರು, ಏಜೆನ್ಸಿದಾರರಿಗೆ, ಜನಶಕ್ತಿಯ ಪ್ರಸಾರ, ಚಂದಾ, ಏಜೆನ್ಸಿಗಳಿಗೆ ಸಂಬಂಧಿಸಿದ ವ್ಯವಹಾರ, ವಿಚಾರಣೆ, ದೂರುಗಳು ಇತ್ಯಾದಿ ಇನ್ನೂ ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡತಕ್ಕದ್ದು.

ವಿಳಾಸ :
40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email :
janashakthi13.admn@gmail.com
Phone : 9483966467

JANASHAKTHI KANNADA VARA PATRIKE JAN 20, 2013 Price : Rs. 10/- RNI No. KARKAN /2006/17926 Posted on every Satuar
Postal Reg. No. RNP/KA/BGS/2078/2013-15 Posted at MBC Bangalore G

ಚೀನಾ ಕಮ್ಯುನಿಸ್ಟ್ ಪಕ್ಷದ ಉದಯ



ಜಿ.ಎನ್.ನಾಗರಾಜ್ 20

ಮೇ ನಾಲ್ಕರ ವಿದ್ಯಾರ್ಥಿ ಚಳುವಳಿ, ಕಾರ್ಮಿಕರ ಚಳುವಳಿ ಅದರಲ್ಲಿ ಬುದ್ಧಿಜೀವಿಗಳ ಪಾತ್ರ ಚೀನಾದ ಜನತೆಯನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಬದಲಾಯಿಸಿ ಬಿಟ್ಟಿತ್ತು. ಚೀನಾದ ವಿವಿಧ ರಾಜ್ಯಗಳಲ್ಲಿ 3-4 ವರ್ಷಗಳ ಕಾಲ ಮುಂದುವರೆದ ಈ ಚಳುವಳಿಯ ನಡುವೆಯೇ ಮಾರ್ಕ್ಸ್ ವಾದೀ ಸಿದ್ಧಾಂತ ಬುದ್ಧಿಜೀವಿಗಳನ್ನು, ಯುವಜನರನ್ನು ಸೆಳೆದ ಬಗೆಯ ಬಗ್ಗೆ ನೀವು ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ.1921ರ ಆರಂಭದ ವೇಳೆಗೆ ಚೀನಾದ ಮುಖ್ಯ ನಗರಗಳಲ್ಲಿ ಕಾರ್ಮಿಕ ಸಂಘಟನೆಗಳು ಆರಂಭವಾಗಿದ್ದವು. ಅವುಗಳ ಜೊತೆ ಜೊತೆಗೇ ಒಂಬತ್ತು ಕಮ್ಯುನಿಸ್ಟ್ ಗುಂಪುಗಳು ಆರಂಭವಾಗಿದ್ದವು. ರಷಿಯಾದ ಕಮ್ಯುನಿಸ್ಟ್ ಪಕ್ಷ ಹಾಗೂ ಕಮ್ಯುನಿಸ್ಟ್ ಅಂತರರಾಷ್ಟ್ರೀಯ ಚಳುವಳಿ ಚೀನಾದಲ್ಲಿ ಮಾರ್ಕ್ಸ್ ವಾದೀ ತತ್ವಕ್ಕೆ ಮಾರುಹೋದವರನ್ನು ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಲು ಪ್ರೇರೇಪಣೆ ನೀಡಿದ್ದವು. ಹೀಗೆ ಚೀನಾದ ಚರಿತ್ರೆಯಲ್ಲಿ ಎಲ್ಲ ಶೋಷಣೆಯನ್ನು ತೊಡೆದು ಹಾಕುವ, ಹೊಸ ಸಮಾಜವನ್ನು ನಿರ್ಮಿಸುವ ಮಹತ್ತರ ಕಾಲಘಟ್ಟದ ಆರಂಭಕ್ಕೆ ರಂಗ ಸಜ್ಜಾಗಿತ್ತು.

1921ರ ಜುಲೈ ತಿಂಗಳ 23ನೆಯ ದಿನ.ಶಾಂಘೈನಲ್ಲಿ ಫ್ರೆಂಚ್ ಸಾಮ್ರಾಜ್ಯದ ಹಿಡಿತಲ್ಲಿದ್ದ ಒಂದು ಭಾಗ. (ಚೀನಾವನ್ನು







ನಾಲ್ಕು ಸಾಮ್ರಾಜ್ಯಗಳು ಆಳುತ್ತಿದ್ದ ಕಾಲ. ಶಾಂಘೈ ನಗರ ಈ ನಾಲ್ಕು ಸಾಮ್ರಾಜ್ಯಗಳ ನಡುವೆ ಹರಿದು ಹಂಚಾಗಿತ್ತು.) 106, ವಾಂಟ್ಜೇ ರಸ್ತೆಯಲ್ಲಿದ್ದ ಎರಡು ಅಂತಸ್ತಿನ ಒಂದು ಮನೆ. ಆ ಮನೆಗೆ ಒಬ್ಬೊಬ್ಬರೇ ಅತಿಥಿಗಳು ಅತ್ತಿತ್ತ ನೋಡುತ್ತಾ ರಹಸ್ಯವಾಗಿ ಬಂದು ಸೇರುತ್ತಿದ್ದಾರೆ. ಒಬ್ಬೊಬ್ಬರ ವೇಷ ಮಾತನಾಡುವ ಶೈಲಿಯೂ ಒಂದೊಂದು ರೀತಿ. ಒಟ್ಟು ಹದಿನೈದು ಜನ ಬಂದು ಸೇರಿದರು. ಅದರಲ್ಲಿ ಹದಿಮೂರು ಜನ ಚೀನೀಯರು. ಇಬ್ಬರು ಹೊರ ದೇಶದವರು. ಮನೆ ನೆಲ ಅಂತಸ್ತಿನಲ್ಲಿದ್ದ ಮೊಗಸಾಲೆಯೊಂದರಲ್ಲಿ ಇದ್ದ ಸರಳವಾದ ಮೇಜಿನ ಸತ್ತ ಇದ್ದ ಕುರ್ಚಿಗಳಲ್ಲಿ ಕುಳಿತರು. ಇದರಲ್ಲಿ ಹಲವರು ನೂರಾರು ಕಿಮೀ ದೂರ ಪ್ರಯಾಣ ಮಾಡಿ ಒಂದೆರಡು ದಿನ ಮೊದಲೇ ಶಾಂಘೈ ನಗರ ಸೇರಿದ್ದರೂ ಈ ಕಟ್ಟಡಕ್ಕೆ ಅಂದೇ ಕಾಲಿಟ್ಟಿದ್ದರು.

ಸಭೆ ಆರಂಭವಾಯಿತು. ಹದಿಮೂರು ಜನ ಚೀನೀಯರು ಚೀನಾದ ವಿವಿಧ ರಾಜ್ಯಗಳಲ್ಲಿ ರೂಪು ತಳೆದಿದ್ದ ಕಮ್ಯುನಿಸ್ಟ್ ಗುಂಪುಗಳಲ್ಲಿದ್ದ 57 ಜನ ಸದಸ್ಯರನ್ನು ಪ್ರತಿನಿಧಿಸಿದ್ದರು. ಇಬ್ಬರು ಕಮ್ಯುನಿಸ್ಟ್ ಅಂತರ ರಾಷ್ಟ್ರೀಯ ಪ್ರತಿನಿಧಿಗಳಾಗಿದ್ದರು. ಚರ್ಚೆ ಒಂದೇ ಸ
ಏಳು ದಿನಗಳ ಕಾಲ ನಡೆಯಿತು.
ಗುಟ್ಟಾಗಿ ಅಲ್ಲಿ ಸಭೆ ನಡೆಯುತ್ತಿದ್ದರೂ
ಶಾಂಘೈ ನಗರ ನಾಲ್ಕು ಆಡಳಿತದ ನ
ಹಂಚಿ ಹೋಗಿದ್ದರೂ ಕಮ್ಯುನಿಸ್ಟರೆಂ
ಭಯ ಬೀಳುತ್ತಿದ್ದ, ಹದ್ದಿನ ಕಣ್ಣಿ
ಕಾಯುತ್ತಿದ್ದ ಸಾಮ್ರಾಜ್ಯಶಾಹಿಗಳಿಗೆ ಏಳನೆ
ದಿನ ಜುಲೈ 30ರಂದು ಸುಳಿವು ದೊರೆ
ಪೋಲೀಸರು ಬರುವ ಸೂಚನೆ ಅಲ್ಲಿ ಸೇ
ಕ್ರಾಂತಿಕಾರಿಗಳಿಗೂ ದೊರೆಯಿತು. ದಡಬ
ಎಲ್ಲರೂ ಎದ್ದು ವಿವಿಧ ದಿ
ದೌಡಾಯಿಸಿದರು. ಪೋಲೀಸರು ಅ
ಬರುವುದರೊಳಗೆ ಎಲ್ಲ
ತಪ್ಪಿಸಿಕೊಂಡರು.

ಹಾಗೆಂದ ಮಾತ್ರಕ್ಕೇ ಯಾ
ಗಾಬರಿಯಿಂದ ಪರಾರಿಯಾಗಲಿಲ್ಲ. ಇ
ಚರ್ಚೆಯ ವಿಷಯಗಳು ಉಳಿದಿದ್ದವು.
ಸೇರಲು ಜಾಗ ಹುಡುಕಿದರು. ಆಗ ಅ
ಅತ್ಯಂತ ಸುರಕ್ಷಿತ ತಾಣವಾಗಿ ದೊರಕಿ
ನದಿ ಮಧ್ಯದಂದು ಛಾವಣಿಯಿರುವ ದೋ
ಅದರಲ್ಲಿಯೇ ಚರ್ಚೆ ಮುಂದುವರೆಸಿದ
ಕಮ್ಯುನಿಸ್ಟರಾಗಿ ಚೀನದ ಮೂ
ಮೂಲೆಯಲ್ಲಿ ಕ್ರಾಂತಿಯ ಬಿರುಗಾಳಿ ಎಬ್ಬಿ
ಯೋಜನೆ ರೂಪಿಸಿದರು. ತಂತಮ್ಮ ಕೆಲ
ಪರಿ, ಸ್ವರೂಪ, ಪ್ರದೇಶ, ವಿಧಾನಗಳ
ರೂಪಿಸಿಕೊಂಡರು.

"ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ"

ಕರ್ನಾಟಕ ರಾಜ್ಯದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ ಸೃಷ್ಟಿಯಾಗುತ್ತಿದೆ ಎಂದು ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯುರೋ ಸದಸ್ಯರಾದ ಎಂ.ಎ.ಬೇಬಿ ಹೇಳಿದರು. ಸಿಪಿಐ(ಎಂ) ಪಕ್ಷದ 'ಮಡೆಸ್ನಾನ ಮತ್ತು ಪಂಕ್ತಿಬೇಧ' ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಉಡುಪಿಗೆ ಆಗಮಿಸಿದ್ದ ಅವರು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪತ್ರಕರ್ತ ನವೀನ್ ಸೂರಿಂಜೆ ಅವರನ್ನು ಕಂಡು ಮಾತನಾಡಿದ ನಂತರ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿ ಈ ಮೇಲಿನ ಅಭಿಪ್ರಾಯ ವ್ಯಕ್ತಪಡಿಸಿದರು.

ಮಂಗಳೂರಿನ ಜನ್ಮದಿನಾಚರಣೆಯ ಸಂತೋಷ ಸಮಾರಂಭದ ಮೇಲೆ ಭಜರಂಗದಳದವರು ನಡೆಸಿದ ದಾಳಿ-ಗೂಂಡಾಗಿರಿಯನ್ನು ಚಿತ್ರೀಕರಿಸಿ ಈ ಅಮಾನುಷ

ಕ್ರೌರ್ಯವನ್ನು ಹೊರಜಗತ್ತಿಗೆ ಬಹಿರಂಗಗೊಳಿಸಿದ ದಿಟ್ಟ ಪತ್ರಕರ್ತ ಈ ನವೀನ್ ಸೂರಿಂಜೆ. ಮತಾಂಧ' ಮೂಲಭೂತವಾದಿಗಳ ಆಕ್ರಮಣಕ್ಕೆ ಸಾಕ್ಷಿಯಾದ ಇವರನ್ನು ಅಪರಾಧಿಗಳನ್ನು ಶಿಕ್ಷಿಸುವ ಕಾನೂನು ಪ್ರಕಿಯೆಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿ ಬಳಸಿಕೊಳ್ಳುವ ಬದಲಿಗೆ ರಾಜ್ಯದ ಬಿಜೆಪಿ ಸರ್ಕಾರವು ಅಪರಾಧಿಗಳಿಗೆ ಅನ್ವಯಿಸಿರುವ ಅದೇ ಅರೋಪಗಳಡಿ ಈ ಪತ್ರಕರ್ತರನ್ನೂ ಬಂಧಿಸಿದೆ. ಮತ್ತು ಈ ಒಟ್ಟು ಪ್ರಕರಣ ಪ್ರಮುಖ ಸೂತ್ರಧಾರ ನವೀನ್ ಸೂರಿಂಜೆ ಎಂಬಂತಹ ಅರೋಪಗಳನ್ನು ಸಹ ಹೊರಿಸಲಾಗಿದೆ. ಈಗ ನವೀನ ಸೂರಿಂಜೆ ನ್ಯಾಯಾಂಗ ಬಂಧನದಲ್ಲಿದ್ದು ಚಿಕಿತ್ಸೆಯ ಉದೇಶಕ್ಕಾಗಿ ಆಸ್ಪತ್ರೆಯಲ್ಲಿದ್ದಾರೆ.



ಇದೇ ಸಂದರ್ಭದಲ್ಲಿ ಮಾತನಾಡಿದ ಬೇಬಿಯವರು ಕಾನೂನುಬಾಹಿರ ಕೃತ್ಯಗಳು ನಡೆಯುತ್ತಿರುವ ಮಾಹಿತಿ ತಿಳಿದು ಓರ್ವ ಪತ್ರಕರ್ತ ಅಥವಾ ಛಾಯಾಗ್ರಾಹಕ ಅಲ್ಲಿಗೆ ತೆರಳಿ ಆ ಬಗ್ಗೆ ಫೋಟೋ ತೆಗೆದಾಗ ಅಥವಾ ವರದಿ ನೀಡಿದಾಗ ಆತನನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿರುವುದು ವಿಪರ್ಯಾಸ
ಇದರಿಂದ ಮಾಧ್ಯಮ ಸ್ವಾತಂತ್ರ್ಯವನ
ಕಸಿದುಕೊಂಡಂತಾಗುತ್ತದೆ. ಸರಕಾರ ಇದ
ಹೊಣೆ ಹೊರಬೇಕಾಗುತ್ತದೆ ಎಂದರು
ಸಂವಿಧಾನದಲ್ಲಿ ನೀಡಲಾದ ಅಭಿವ್ಯ
ಸ್ವಾತಂತ್ರ್ಯಕ್ಕೆ ಚ್ಯುತಿಯಾಗುತ್ತಿರು
ಪ್ರಕರಣಗಳು ನಡೆಯುತ್ತಿರುವುದನ
ನೋಡಿದಾಗ ತುರ್ತು ಪರಿಸ್ಥಿತಿಯ
ವಾತಾವರಣ ನೆನಪಿಗೆ ಬರುತ್ತದೆ. ಸರ್ಕಾರ
ವರ್ತನೆಯನ್ನು ಸಿಪಿಐ(ಎಂ)ಖಂಡಿಸುತ್ತ
ಎಂದು ಹೇಳಿದರು.

ಬೆಂಗಳೂರಿನಲ್ಲಿ ಮದನಿ ಭೇಟಿ

ಬೆಂಗಳೂರಿನ ಕೇಂದ್ರ ಕಾರಾಗೃಹದ
ಅನಾರೋಗ್ಯ ಪೀಡಿತರಾಗಿರುವ ಪಿಡಿ
ಪಕ್ಷದ ಮುಖಂಡರಾದ ಅಬ್ದುಲ್ ನಸೀ
ಮದನಿ ಅವರನ್ನು ಜನವರಿ 2, 201
ರಂದು ಕಂಡು ಮಾತನಾಡಿ ಅವ
ಆರೋಗ್ಯವನ್ನು ಎಂ.ಎ.ಬೇಬಿಯವರ
ವಿಚಾರಿಸಿದರು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor : S.Y.GURUSHANTH